
ಸಂಪುಟ : ೪ ಸಂಚಿಕೆ : ೫

ಕಲ್ಯಾಣ ಕಿರಣ



ಕಲ್ಯಾಣ ಕಿರಣ

ಮಾಸಪತ್ರಿಕೆ

ಸೆಪ್ಟೆಂಬರ್ ೧೯೭೮ | ಸಂಪುಟ : ೪
ಬಸವ ಶಕೆ ೮೭೨ | ಸಂಚಿಕೆ : ೫

ಬಿಡಿ ಪ್ರತಿ ಒಂದು ರೂಪಾಯಿ | ವಾರ್ಷಿಕ ಚಂದಾ ಹನ್ನೆರಡು ರೂಪಾಯಿ

ಈ ಬೆಳಕಿನಲ್ಲಿ ಸುಳಿದಾಡಿದಾಗ ?

೧. ನುಡಿ-ನೈವೇದ್ಯ	ಮಾತಾಜಿ	೧
೨. ನಿಮ್ಮ ಅನಿಸಿಕೆ	ಓದುಗರು	೨
೩. ಮಾತೃಹರಕೆ	ಮಾತಾಜಿ	೩
೪. ಸಮಸ್ಯೆ-ಸಮಾಧಾನ	ಸಮಾಧಾನಿ	೯
೫. ವಚನ ನವನೀತ	ಸ್ವಾಮಿ ಲಿಂಗಾನಂದರು	೧೫
೬. ಶೂನ್ಯ ಸಂಪಾದನೆಯ ವೈಚಾರಿಕ ಮಹತ್ವ	ಎಸ್. ಬಸವರಾಜು	೧೭
೭. ಗೀತಾಮೃತ	ಸ್ವಾಮಿ ಶಂಕರಾನಂದ	೨೪
೮. ದೃಷ್ಟಾಂತ ಕಥೆ	ತ್ರಿನೇತ್ರಿ	೩೧
೯. ಮಾತು ಜ್ಯೋತಿರ್ಲಿಂಗ	ಸಂ: ಭೇ. ಪ. ಹರೀಶ	೩೫
೧೦. ಬೋಳು ಬಸವನ ಬೊಂತೆ-೭	ಪಿ. ಬಸವಣ್ಣ	೩೬
೧೧. ಸ್ಫುರಣ-ಕಿರಣ	ಮಾತಾಜಿ	೩೮
೧೨. ಗೃಹ ಪ್ರವೇಶ ವಿಧಾನ	ಮಾತಾಜಿ	೪೦
೧೩. ಘನಲಿಂಗ ವಿಶ್ವರೂಪ (ಕವನ)	ಶ್ರೀ ಬಸವಲಿಂಗ ಸ್ವಾಮಿಗಳು	೪೩
೧೪. ಪಂಚಪದದ ಗೊಂಚಲು	ಸಂ: ಎಸ್. ಬಿ. ಚಂದ್ರಕಾಂತ	೪೪
೧೫. ಈ ತಿಂಗಳ ಮಂಗಳ ಮೂರ್ತಿ	ಗೊ. ರು. ಚ.	೪೯
೧೬. ಬಸವ ಬೀಡಿನಿಂದ ಆಂಗ್ಲನಾಡಿಗೆ	ಮಾತಾಜಿ	೬೦
೧೭. ವಧುವರಾನ್ವೇಷಣ ವಿಭಾಗ	,,	೬೯

ಮುಖಪುಟ : ಗಣೇಶ ಚವತಿಯ ಶುಭ ಸಂದರ್ಭದಲ್ಲಿ 48ನೆಯ ವರ್ಷಕ್ಕೆ ಪಾದಾರ್ಪಣ ಮಾಡುತ್ತಲಿರುವ ಪೂಜ್ಯ ಶ್ರೀ ಸದ್ಗುರು ಲಿಂಗಾನಂದ ಸ್ವಾಮಿಗಳು

ಹಿಂಬದಿಯ ಹೊದಿಕೆ : ಆರೋಗ್ಯ ಸಚಿವ ಮಾರ್ಗದ ಮಲ್ಲಪ್ಪ ಮತ್ತು ಜಿ. ನಾರಾಯಣರಿಗೆ ಸತ್ಕಾರ


ಕಲ್ಯಾಣ ಕಿರಣ

ಶ್ರೀ ಗುರು ಚರಣಕ್ಕೆ

ನುಡಿ-ನೈವೇದ್ಯ

ನೀವಲ್ಲ, ದುರ್ಗಮ ಕಾನನ ಗರ್ಭದಲ್ಲಿ ನಿರ್ಜನ ಗಂಹ್ವರದಿ
ಮೂಗು ಮುಚ್ಚಿ ಕುಳಿತಿಹ ಏಕಾಂತ ತವಸಿಗಳು,
ವಿಗುರ್ಬಿಸುವ ವಿಚಿತ್ರ ಮೃಗಗಳಿಂ ತುಂಬಿಹ
ಲೋಕ ಕಾಂತಾರವ ಆತ್ಮವಿಶ್ವಾಸದಿಂ ಎದುರಿಸುವ ಸಾಹಸಿಗಳು.
ಇದ್ದವರು ದುಷ್ಟರು ಸತ್ತವರು ಸಜ್ಜನರು
ಎಂಬ ಲೋಕದ-ನೀತಿಗೆ ನಗುವಿರಲ್ಲವೆ ತಾವು ?
ಸರಿದ ಆನೆಯ ಹೆಜ್ಜೆಗೆ ಧೂಪ ಆರತಿಯ ವೈಭವ
ಹೊರುವ ಆನೆಯ ಕಡೆಗೆ ತುಂಬು ಔದಾಸೀನ್ಯ.
ಅನ್ನ ನೀಡುವ ಕೈಗೆ ಕತ್ತಿ-ಕತ್ತರಿ ಚುಂಬನ
ವಿಷವನುಣಿಸುವ ಹಸ್ತಕ್ಕೆ ಗೌರವದ ಅರ್ಚನ.
ಹತ್ತಿ, ತುಳಿದು ಮುನ್ನಡೆವಂಗೆ ವೈಭವದ ತೇರು
ಮೇಲೆತ್ತಿ, ಸಂತೈಸಿ ಸಾಗುವವಗೆ ಅಪವಾದದ ಹೇರು !
ಮೌಢ್ಯದ ಕಣ್ಪಟ್ಟಿ ಕಟ್ಟಿ, ಮೆರೆದಾಡುವಗೆ ಬಿರಿದು ಬಾವಲಿ
ಮೌಢ್ಯತೆಯ ಪೊರೆಕಿತ್ತು ಸತ್ಯ ದರ್ಶನ ತೋರ್ಪವಗೆ ಉರಿಯ ಕಾವಲಿ.
ಇದೆಯಲ್ಲವೇ ಈ ಜಗದ ಲೀಲಾ ವಿನೋದ ?!
ಆದರೇಂ? ಅಲ್ಪ ಕೀರ್ತಿಯ ಕಡೆಗೆ ನಿಮಗಿಲ್ಲ ತೀಕ್ಷ್ಣ ಉನ್ಮಾದ !
ಕೋಣನ ಹೇರಿಂಗೆ ಕುನ್ನಿ ಬುಸುಗುಡುವಂಥ ಜನಮನವ
ಸಹಿಸಿಕೊಂಡು, ಮತ್ತೆ ಮಾತೃಹೃದಯದಿಂ ತಿದ್ದಿ ತೀಡುವ ತವಕಿಗಳು
ಮರೆವಿನ ತಿಮಿರಕ್ಕೆ ಶತಮಾನಗಳಿಂ ಹೊಂದಿಕೊಂಡ ಕಣ್ಣುಳ್ಳವರ
ಕಣ್ಪೊರೆಯ ವೈಚಾರಿಕತೆಯ ಶಸ್ತ್ರದಿಂ ಹರಿದ ಮರುಕಿಗಳು !
ಉಪ್ಪು ನೀರನು ನುಂಗಿ ಸವಿಯ ಜಲವನು ಈವ
ಮೇಘಾಳಿಯ ತೆರದಿ ನಿಮ್ಮ ಹಿರಿ ಬಾಳು !
ಸೊಪ್ಪುಹಾಕದೆ ಬನ್ನಕೆ ಅದಮ್ಯ ಉತ್ಸಾಹದಿಂ ಸಾಗ್ವ
ಕ್ರಾಂತಿ ಖಡ್ಗವನಾಂತ ಸಚ್ಚಿದಾನಂದ ಕಂದರು ನೀವು.

—ಮಾತಾಜಿ



ಪೂಜ್ಯ ಶ್ರೀ ಜಗದ್ಗುರು ಮಾತೆಯವರಿಗೆ
ಶಿ. ಸಾ. ವಂದನೆಗಳು

ಬಸವ ಮಂಟಪದಿಂದ ಪ್ರಕಟವಾಗುವ ಕಲ್ಯಾಣ ಕಿರಣದ ಓದುಗರು ನಾವು. ಇದರಲ್ಲಿ ಕಣ್ಣಾಡಿಸುವವರಿಗೆ ನುಡಿ-ನೈವೇದ್ಯ, ಮಾತೃಹರಕೆ, ವಚನ ನವನೀತ, ಸಮಸ್ಯೆ-ಸಮಾಧಾನ, ಈ ತಿಂಗಳ ಮಂಗಳ ಮೂರ್ತಿ, ಹೀಗೆ ಹಲವಾರು ವಿಭಾಗಗಳು ಆನಂದವೀವ ವಿಷಯಗಳಾಗಿವೆ. ಸಾಹಿತ್ಯ, ಸಂಸ್ಕೃತಿ ಮತ್ತು ಅಧ್ಯಾತ್ಮ ಸೌರಭಗಳಿಂದ ನಳನಳಿಸುವ ಈ ಸುಮದ ದಳ ಬಿಡಿಸುತ್ತ ಹೋದಂತೆ, ಮುಂದಿನ ಪುಟದಲ್ಲಿ ಇನ್ನೇನು ಎಂಬ ಕುತೂಹಲ ಅಧಿಕಗೊಳ್ಳುತ್ತದೆ. ಪ್ರತಿಯೊಬ್ಬ ಚಂದಾದಾರರು, ವಾಚಕರು ಈ ಧಾರ್ಮಿಕ ಪತ್ರಿಕೆಯ ಬರವನ್ನು ಚಾತಕ ಪಕ್ಷಿಯಂತೆ ನಿರೀಕ್ಷಿಸುವರು. ಎಲ್ಲ ಸಂಚಿಕೆಗಳನ್ನು ಸಂಗ್ರಹಿಸಿ ಬೈಂಡ್ ಮಾಡಿಸಿ, ಸತತವಾಗಿ ಓದಲರ್ಹವಾಗಿದೆ ಕಲ್ಯಾಣ ಕಿರಣ.


ಗದಗ. **ಎಸ್. ವಿ. ಬಡಿಗಣ್ಣವರ.**

ಪ್ರತಿ ತಿಂಗಳೂ, ಕಲ್ಯಾಣ ಕಿರಣ ಪುಷ್ಕರಿಣಿಯಲ್ಲಿ ಮಿಂದಾಗ ನನ್ನ ಮನವು ಕ್ಷೋಭೆ ತೊಡೆದುಕೊಂಡು ಸಂತಸದಲ್ಲಿ ತೇಲುತ್ತದೆ. ಆದರೆ ಕಳೆದ ತಿಂಗಳು ಪಿ. ಬಸವಣ್ಣನವರ 'ಬೋಳು ಬಸವನ ಬೊಂತೆ' ಇಲ್ಲದುದು ಬಹುದೊಡ್ಡ ಕೊರತೆಯಾಗಿದೆ. ಏಕೆಂದರೆ ಅದು ಮಾನವನ ಆಸೆ-ಆಮಿಷ, ಪಾಪ-ಪುಣ್ಯಗಳ ಚಿತ್ರಣಕ್ಕೆ ಕೈಗನ್ನಡಿ. ಆದ್ದರಿಂದ ಮುಂದಿನ ಸಂಚಿಕೆಯು ಕಲ್ಯಾಣ ಕಿರಣದಲ್ಲಾದರೂ ಅದನ್ನು ನಿರೀಕ್ಷಿಸುವೆವು.

ಮುಡಿಗುಂಡ. **ಪನ್ನಗವೇಣಿ.**

ಕಲ್ಯಾಣ ಕಿರಣವನ್ನು ಪ್ರತಿ ಸಾರಿ ಚಾಚೂ ತಪ್ಪದೆ ಓದುತ್ತೇನೆ. ಅಧ್ಯಾತ್ಮಿಕ ಮಾರ್ಗದರ್ಶನ ಮಾಡುವ ಗುರುವೆಂದು ನನ್ನ ನಂಬುಗೆ. ಇದರಲ್ಲಿಯ ಅಧ್ಯಾತ್ಮಿಕ ವಿಷಯಗಳು ಮನಸ್ಸಿಗೆ ಒಂದು ರೀತಿಯ ಶಾಂತಿ ಮತ್ತು ನೆಮ್ಮದಿ ನೀಡುತ್ತವೆ. ಈ ಪತ್ರಿಕೆ ಇನ್ನೂ ಉನ್ನತಿಗೆ ಹೋಗಲಿ, ಸಾವಿರಾರು ಜನ ಮುಮುಕ್ಷುಗಳಿಗೆ ಮಾರ್ಗದರ್ಶನ ಮಾಡಲೆಂದು ನಾನು ಹಾರೈಸುವೆ.

ಕಿಟ್ಟದಾಳ **ಸಂಪತ್ ಮಲ್ಲಿಕಾರ್ಜುನಸ್ವಾಮಿ**



ಸದ್ಗುರು ಚರಣಕ್ಕೆ ಶುಭನಮನ

ವರುಷ ನಲವತ್ತೇಳು ತುಂಬುತ್ತ ಬಂದಿರಲು
ಪರುಷಮಯ ದೈವೀಜೀವನವ ತಾವ್ ಹೊಂದಿರಲು
ಚರಿಪ ದೀಪ್ತಿಯೊಲು ಭಕ್ತರಿಗೆ ಬೆಳಕಾಗಿರಲು
ಸಚ್ಚಿದಾನಂದರೂಪಿ ಸದ್ಗುರುವೇ ತಮ್ಮಡಿಗೆ
ಭಕ್ತಿ ಸೌರಭ ಬೆರೆದ ಶರಣು-ಶರಣಾರ್ಥಿ.

ಜನನದಿಂದ ಮರಣದವರೆಗೆ ಜೀವನವೊಂದು ನಿರಂತರವಾಗಿ ಹರಿವ ಪ್ರವಾಹ. ಬಯಸಲಿ ಬಿಡಲಿ, ಕಾರ್ಯಮಾಡಲಿ ನಿಷ್ಕ್ರಿಯನಾಗಿ ಕಾಲ ಕಳೆಯಲಿ ಕಾಲನು ಮಾತ್ರ ನಿರ್ವಿಕಾರವಾಗಿ ಮುದ್ರೆಯನ್ನು ಒತ್ತುತ್ತಾ ಹೋಗುವನು. ಬದುಕನ್ನು ಸದುಪಯೋಗ ಪಡಿಸಿಕೊಂಡು, ಏನಾದರೂ ಉಪಕಾರವನ್ನು ಲೋಕಕ್ಕೆ ಮಾಡಿ, ನಾಲ್ವರಿಗಾದರೂ ನೆರಳಾಗಿ ಬಾಳುವುದು ಅರ್ಥಪೂರ್ಣ ಮತ್ತು ಸಾರ್ಥಕ್ಯದ ಜೀವನ. ತ್ಯಾಗ-ಸೇವೆ-ಜ್ಞಾನಗಳ ಧೀಮಂತ ಸಂಗಮವಾಗಿ, ಸಾರ್ಥಕ್ಯದ ಬಾಳನ್ನು ಲೋಕಹಿತಾರ್ಥಕ್ಕಾಗಿ ಸವೆಸಿದ ಅದಮ್ಯ ಉತ್ಸಾಹದ ಅವಿಶ್ರಾಂತ ಚೇತನ ಪೂಜ್ಯ ಸದ್ಗುರು ಲಿಂಗಾನಂದ ಸ್ವಾಮಿಗಳು. ಈ ಮಹಾಚೇತನವು ದೈಹಿಕವಾಗಿ 47 ವರ್ಷಗಳನ್ನು ಕಳೆದು 48ನೆಯ ವರ್ಷಕ್ಕೆ ಪಾದಾರ್ಪಣ ಮಾಡುತ್ತಲಿದೆ.

ಪೂಜ್ಯ ಸದ್ಗುರುಗಳದು 'ಪ್ರವಾಹ ಪತಿತ' ಸತ್ತ ಮೀನಿನಂತಹ ಜೀವನವಲ್ಲ, 'ಸತ್ಯ ಸಹಿತ', ಧೀರೋದಾತ್ತ, ತತ್ತ್ವನಿಷ್ಠೆಯ ಜೀವಂತ ಬದುಕು. ಉಪ್ಪಿಗೆ 'ರುಚಿ' ಎಂಬ, ನೀರಿಗೆ 'ಜೀವನ' ಎಂಬ ಪದಗಳಿದ್ದಂತೆ ಅವರ ಬಾಳಿಗೆ ಅನ್ವಯಾರ್ಥಕ

ಸೂಕ್ತ ಸಪದ "ಹೋರಾಟ." ಅದರಲ್ಲಿಯೇ ಅವರ ತಪಸ್ಸು, ಸಾಧನೆ, ಸಿದ್ಧಿ, ಸಂತೃಪ್ತಿ ಎಲ್ಲವೂ ! ಬಾಳಿನ ಸುಪ್ರಭಾತದಲ್ಲಿ ಹೋರಾಟವು ಬಡತನದೊಡನೆ, ಮಧ್ಯಾಹ್ನದಲ್ಲಿ ಅನ್ಯಾಯದೊಡನೆ, ಮಧ್ಯಮವಯದಲ್ಲಿ ಸಂಪ್ರದಾಯದೊಡನೆ. ಎಂಥಾ ಕಷ್ಟ ಕಾರ್ಪಣ್ಯ ಬಡತನದ ಬವಣೆಯ ಮಧ್ಯದಲ್ಲೂ ತತ್ತ್ವವನ್ನು ಬಿಟ್ಟುಕೊಡುವ ಹಂದೆ ತನವಿಲ್ಲ. ವಿದ್ಯಾರ್ಥಿ ಜೀವನದಲ್ಲಿ ಕೆಚ್ಚು-ಸಾಹಸಗಳ ಮೇಳ. ನಂತರ ಬಸವ ವಾಣಿಯ ಆದೇಶದೊಡನೆ ಸ್ವಯಂ ಸ್ವೀಕೃತ ಸನ್ಯಾಸ. ಜಾತಿವಾದದ ಜಡ ಪಂಕದ ಮಧ್ಯದಲ್ಲೇ ಸತ್ಯನಿಷ್ಠೆಯಿಂದ ಈಜುವ ಸಾಹಸ. ಧರ್ಮಮಂದಿರದ ಬಾಗಿಲನ್ನು ಜಾತಿನಿಷ್ಠರು ತೆರೆಯದಿದ್ದ ಮಾತ್ರಕ್ಕೆ ದೈವೀಕರುಣೆಯಿಂದ ವಂಚಿತರಾಗಬೇಕಿಲ್ಲವೆಂಬ ದೈವೀಸತ್ಯವನ್ನು ಸಿದ್ಧಿಸಿಕೊಂಡ ಮಹಾಜೀವ. ಅನ್ಯರ ಅವಹೇಳನದ ಮೇಲೆಯೇ ತಮ್ಮ ಕೀರ್ತಿಸೌಧ ನಿರ್ಮಿಸಿಕೊಳ್ಳಬಯಸುವ, ಪ್ರತಿಭಾವಂತರ ತೇಜೋವಧೆ ಯನ್ನೇ ತಮ್ಮ ಏಕೈಕ "ಧರ್ಮಪ್ರಸಾರ ಕಾಯಕ" ಮಾಡಿಕೊಂಡವರ ಚಕ್ರ ವ್ಯೂಹವನ್ನು ಭೇದಿಸಿಕೊಂಡು ಈ ತರುಣ ಸನ್ಯಾಸಿ ಪ್ರಗತಿಪಥ ತುಳಿದರು.

ಗುಡ್ಡರಿಸಿದ ಕಲ್ಲಿನ ರಾಶಿಯ ಮೇಲೆ ಅತ್ಯತಿಷ್ಟದಶಾಂಗುಲನಾಗಿ ನಿಂತು ನಸುನಕ್ಕ ಅಲ್ಲಮ ಪ್ರಭುವಿನಂತೆ, ಲಿಂಗಾನಂದ ಶ್ರೀಗಳು-ದುರುದ್ದೇಶದಿಂದ ಮಹಾಮಹಾ ಪ್ರಭೃತಿಗಳೊಡ್ಡಿದ ಎಡರುಗಳನ್ನು ಮೆಟ್ಟಿ ಮೇಲೇರಿ, ಎಸೆದು ರಟ್ಟೆ ನೋಯಿಸಿ ಕೊಂಡವರನ್ನು ಅನುಕಂಪದಿಂದ ನೋಡಿ ಮುಗುಳ್ನಗಿದರು. "ಅಯ್ಯೋ ಎಳೆಮಗುವು ತಾನೇನು ಮಾಡುತ್ತಿರುವೆನೆಂಬರಿವೂ ಇಲ್ಲದೆ ಬೆಂಕಿಯಲ್ಲಿ ನಗುನಗುತ್ತಾ ಕೈಯಿಡು ವಂತೆ, ಇವರೇಕೆ ಮಾಡುತ್ತಿರುವರು? ಶಿವನ ಕೋಪಕ್ಕೇಕೆ ಆಹ್ವಾನವೀಯುತ್ತಿರು ವರು?" ಎಂದು ಪರಿತಾಪಪಟ್ಟರು ; ತಮ್ಮ ಪಾಡಿಗೆ ತಾವು ತಮ್ಮ ಗುರಿ ಎಡೆಗೆ ನಡೆದೇ ನಡೆದರು. ಏಕಾಂಗಿಯಾಗಿ ಸಂಪ್ರದಾಯಬದ್ಧ ಸಮಾಜದಲ್ಲಿ ನಿರ್ಭಯರಾಗಿ ಎಡರನ್ನೆ ದುರಿಸಿ ಮುನ್ನಡೆದ ಇವರ ಎಂಟೆದೆಗೆ ಅಚ್ಚರಿ ಎನಿಸುತ್ತದೆ. ಮಾತ್ರವಲ್ಲ ಯಾವುದೋ ಮಹಾದೈವೀಶಕ್ತಿ ಇವರ ಬೆಂಗಾವಲಿಗಿರಲೇಬೇಕೆಂದು ದೃಢವಾಗುತ್ತದೆ. ಸನ್ಯಾಸ ಜೀವನದ ಆರಂಭದಲ್ಲಿ ಉಗ್ರ ತಪಸ್ಸು. ಯಾನಾಗುಂದಿಯ ಮಾಣಿಕ್ಯ ಗಿರಿ, ಸೊಗಲದ ಗಿರಿಗಂಹ್ವರ, ಬಸವ ಕಲ್ಯಾಣದ ಪ್ರಭುದೇವ ಮಂದಿರ, -ಇನ್ನೂ ಮುಂತಾದ ಪ್ರಕೃತಿ ರಮ್ಯ ಗಿರಿಕಂದರಗಳಲ್ಲಿ ಅನುಷ್ಠಾನ. ಎಂಟು ವರುಷ ಕಾಲ ಒಪ್ಪೊತ್ತಿನ ಸಪ್ಪೆ ಆಹಾರ; ಕೆಲವೊಮ್ಮೆ ವಾರಗಟ್ಟಳೆ ನಿರಾಹಾರ. ಇಂಥಾ ತಪಸ್ಸಿನಿಂದಾಗಿ ಅದ್ಭುತ ಚೇತನದ ಮಿಂಚಿನ ಸಂಚಾರ. ನಂತರ ತಮ್ಮ ವೈಯಕ್ತಿಕ ಆತ್ಮಾನುಭೂತಿಯನ್ನು ವಾಣಿಯ ಮೂಲಕ ಲೋಕಕ್ಕೆ ಧಾರೆ ಎರೆಯಲು ನಿರಂತರ ಪ್ರವಾಸ. ವಿಶಿಷ್ಟ ಪ್ರಕಾರದ ಪ್ರವಚನ ಶೈಲಿಯ ಪಿತಾಮಹ ಪೂಜ್ಯ ಶ್ರೀ ಸದ್ಗುರು ಲಿಂಗಾನಂದ ಸ್ವಾಮಿಗಳೆಂದರೆ ಉತ್ಪ್ರೇಕ್ಷೆ ಯಲ್ಲ. ಪುರಾಣಕಾರರು, ಕೀರ್ತನಕಾರರು, ಭಾಷಣಕಾರರು, ಕೀರ್ತಿವಿಶ್ಲೇಷಿತ

ರಾಗಿದ್ದರೂ, ತಾತ್ತ್ವಿಕ-ವೈಚಾರಿಕ ದೃಷ್ಟಿಕೋನದೊಡನೆ ಧರ್ಮವನ್ನು ಜನಪ್ರಿಯ ಗೊಳಿಸಿ ವ್ಯಾಪಕವಾಗಿ ಜ್ಞಾನಾಭಿರುಚಿ ಹುಟ್ಟಿಸಿದ ಮಹಾನುಭಾವರು ಸದ್ಗುರುಗಳು. ಮುಖ್ಯವಾಗಿ ವಚನಗಳನ್ನು ಆಧಾರವಾಗಿ ಬಳಸಿಕೊಂಡು, ಶರಣರ ಜೀವನಗಳನ್ನು ಸೂತ್ರವಾಗಿರಿಸಿಕೊಂಡು ತಿಂಗಳುಗಟ್ಟಳೆ ಪ್ರವಚನ ಹೇಳುವ ಮತ್ತು ವಿದ್ಯಾವಂತ ರನ್ನು, ಪಂಡಿತ-ಪಾಮರರನ್ನು ಆಕರ್ಷಿಸುವ ವಿಶಿಷ್ಟ ಪ್ರಾಕಾರದ ಪ್ರವಚನದ ಬಗೆಯ ಆದ್ಯರು ಪೂಜ್ಯ ಶ್ರೀಗಳು. [ಲಂಡನ್ನಿನ Alien yoga Centre ನಲ್ಲಿ ನಾನು ಭಾಷಣ ಮಾಡುವಾಗ ಮತ್ತು Baptist church ನಲ್ಲಿ ಮಾಡಿದಾಗ ನನ್ನ ವಿವರಣಾ ವಿಧಾನವನ್ನು ತುಂಬಾ ಮೆಚ್ಚಿಕೊಂಡರು ಅಲ್ಲಿಯ ಶ್ರೋತೃಗಳು. ನೀರಸ ಎನಿಸುವಷ್ಟು ಕಥೆಯೂ ಇಲ್ಲ ; ಅರ್ಥವಾಗದ ತತ್ತ್ವಜ್ಞಾನವೂ ಇಲ್ಲ. ಅಂಥ ಸರಸ-ಸುಂದರ ತಾತ್ತ್ವಿಕ ಶೈಲಿ ಎಂದರು. ಇದರ ಶ್ರೇಯಸ್ಸು ಪೂಜ್ಯ ಗುರುಗಳಿಗೇ !]

ಒಮ್ಮೆ, ಚಿಕ್ಕಮಗಳೂರಲ್ಲಿ ಪ್ರವಚನ ಮಾಡುತ್ತಿದ್ದೆ. ಮುಗಿದಾನಂತರ ಓರ್ವ ವ್ಯಕ್ತಿ ಬಂದು "ತಾಯಿಯವರೇ, ಇಂಥಾ ಪ್ರವಚನ ಒಂದೇ ಒಂದು ಬಾರಿ ಕೇಳಿದ್ದೆ. ಹತ್ತು ವರ್ಷಗಳ ಹಿಂದೆ ಮೈಸೂರಿನ ಸಂತೇಪೇಟೆ ಚೌಕದಲ್ಲಿ. ಶ್ರೀ ಲಿಂಗಾನಂದ ಸ್ವಾಮಿಗಳು ಅಂತ ಅವರು ಹೇಳುತ್ತಿದ್ದರು. ಆ ಭವ್ಯ ಪ್ರಭಾವ ಇನ್ನೂ ನನ್ನ ಮನದಲ್ಲಿ ಅಚ್ಚೊತ್ತಿದೆ. ಆ ಬಳಿಕ ಅಂಥಾ ಪ್ರಭಾವೀ ಶೈಲಿ ಏನಾದರೂ ನೋಡಿದ್ದರೆ ಈಗ ನೋಡಿ...." ನಾನು ಮುಗುಳ್ನಕ್ಕೆ ; ಷಣ್ಮುಖಸ್ವಾಮಿಗಳ ವಚನ ನೆನಪಾಯಿತು :

ಬೀಜದಿಂದ ಹುಟ್ಟಿದ ವೃಕ್ಷವು ಬೀಜವ ಹೋಲುವಂತೆ
ತಾಯಿಯಿಂದ ಹುಟ್ಟಿದ ಮಕ್ಕಳು ತಾಯಿಯ ಹೋಲುವಂತೆ
ಧಾನ್ಯಂಗಳಿಂದ ಬೆಳೆದ ಬೆಳಸು ಧಾನ್ಯಂಗಳ ಹೋಲುವಂತೆ
ಗುರುವಿನಿಂದ ಹುಟ್ಟಿದ ಶಿಷ್ಯನು ಗುರುರೂಪವಲ್ಲದೆ
ಬೇರೊಂದು ರೂಪವಲ್ಲವಯ್ಯ ಅಖಂಡೇಶ್ವರ.

ಹೆಣವನ್ನೂ ಎಬ್ಬಿಸುವ ಸಿಂಹವಾಣಿ ಪೂಜ್ಯ ಶ್ರೀಗಳದು ; ಸಮಾಜದ ಬಹುವಿಧ ಶತ್ರುಗಳಾದ ಜಾತೀಯತೆ, ಮೂಢನಂಬಿಕೆ ಮುಂತಾದವುಗಳ ವಿರುದ್ಧ ಸಮರದ ಕಹಳೆ ಮೊಳಗುವ ಪಾಂಚಜನ್ಯ. ತಾವು ನಂಬಿದ ತತ್ತ್ವವನ್ನು ಪ್ರಾಣವನ್ನಾದರೂ ಪಣಕ್ಕಿಟ್ಟು ಪ್ರತಿಷ್ಠಾಪಿಸುವ ಸಾಹಸ. ಪೂಜ್ಯ ಶ್ರೀಗಳ ಇನ್ನೊಂದು ವೈಶಿಷ್ಟ್ಯ ವೆಂದರೆ ಮತ್ಸರ ರಹಿತ ಮನೋಭಾವ. ಸಾಮಾನ್ಯವಾಗಿ ಗುರುಗಳೆಂದರೆ ಗುರ್ ಗುರ್ ಎಂಬುವ ಮನೋಭಾವದವರೆಂದು, [ಉಳಿದ ಸಾಮಾನ್ಯ ಗೃಹಸ್ಥರಿಗಿಂತಲೂ

ಮಠ-ಪೀಠಾಧಿಪತಿಗಳಲ್ಲೇ ಮತ್ಸರ ಅಧಿಕವೆಂದು ಪ್ರಚಲಿತವಾಗಿರುವ ಕಾಲದಲ್ಲಿ ಇತರರತ್ತಲಿರಲಿ ತಮ್ಮ ಹಸ್ತಜಾತ ಶಿಷ್ಯರು ಪ್ರತಿಭಾವಂತರಾದರೆ ಮತ್ಸರಿಸುವ ಅಸಂಖ್ಯಾತ ಗುರುಗಳಿರುವಾಗ, ತಮ್ಮ ಭಾವೀ ಶಿಷ್ಯರನ್ನು ತೆರೆಯ ಹಿಂದಿರಿಸಿ ತಾವೇ ಮೆರೆಯಬೇಕೆಂಬ ಚಪಲ ಉಳ್ಳವರಿರುವಾಗ ಪೂಜ್ಯ ಸದ್ಗುರು ಲಿಂಗಾನಂದ ಸ್ವಾಮಿಗಳವರು ಇದಕ್ಕೆ ಸಂಪೂರ್ಣ ಹೊರತು. ಉತ್ಸಾಹ ತುಂಬಿ, ಪ್ರೋತ್ಸಾಹ ನೀಡಿ ಶಿಷ್ಯರನ್ನು ಮುಂದೆ ತರುವ ಆಸೆ. "ತಾನು ತಾನಾಗಿಯೇ ನಿಲ್ಲಬೇಕು; ಯಾರೂ ಪ್ರತಿಸ್ಪರ್ಧಿಗಳಾಗಿ ನಿಲ್ಲಬಾರದು" ಎಂದು ಆಲದ ಮರದಂತೆ ನೆರಳಿಗೆ ಬಂದ ಯಾರನ್ನೂ ಬೆಳೆಯಗೊಡದ ಮಹಾನುಭಾವರೇ ಬಹಳ. ಆದರೆ ಸದ್ಗುರುಗಳ ವರಪು 'ತನ್ನಂತೆಯೇ ಇತರರೂ ಪ್ರಭಾವಿಗಳಾಗಬೇಕು ; ತಮ್ಮನ್ನೂ ಮೀರಿಸಬೇಕು' ಎಂಬ ಆಕಾಂಕ್ಷೆ. ಎಂತೆಂಥಾ ಅತಿರಥ ಮಹಾರಥರು 'ಮತ್ಸರ ಮಾಯೆ'ಗೆ ಬಲಿಯಾಗುವಾಗ ಅದಕ್ಕೆ ಹೊರತಾಗಿ ನಿಂತ ಪೂಜ್ಯ ಸದ್ಗುರುಗಳದು ಬಹುದೊಡ್ಡ ಸಿದ್ಧಿ.

ತ್ಯಾಗ-ನಿಸ್ವಾರ್ಥತೆಯ ಪ್ರತೀಕ ಪೂಜ್ಯ ಸ್ವಾಮೀಜಿ. ಅವರು ಪ್ರವಚನಿಸುವಾಗ ಕಾಣಿಕೆ ನೀಡಿರೆಂದು ಕೇಳುವ ವೈಖರಿ ನೋಡಿ ಬಹುಪಾಲು ಜನ ಊಹಿಸುವುದು, "ಇವರಿಗೆ ಆಸೆ ಬಹಳ; ಅಥವಾ ಬಹಳ ಹಣ ಕೂಡಿಹಾಕಿರಬೇಕು" ಎಂದು. ಆದರೆ ಪೂಜ್ಯ ಸ್ವಾಮೀಜಿಯವರ ಬ್ಯಾಂಕ್ ಬ್ಯಾಲೆನ್ಸ್ ನೋಡಿದಾಗಲೇ ವಸ್ತುಸ್ಥಿತಿ ತಿಳಿಯುವದು. ಸಾಮಾನ್ಯವಾಗಿ ಅವರ ಪಾಸ್ ಬುಕ್ ಅವರ ಒಳಿ ಇರುವುದೇ ದುರ್ಲಭ. ತಮ್ಮ ಹೆಸರಿನಲ್ಲಿ ಏನನ್ನೂ ಇರಿಸಿಕೊಳ್ಳಬಯಸರು. ಸಂಸ್ಥೆಯೇ ಅವರ ಸರ್ವಸ್ವ. ಇದನ್ನರಿತು ಓರ್ವ ಹಿತೈಷಿಗಳು ನುಡಿದರು : "ವಾರ್ಧಿಕ್ಯದಲ್ಲಿ ಬೇಕಾಗುತ್ತದೆ. ಏನಾದರೂ ವೈಯಕ್ತಿಕ ಆಸ್ತಿ ಮಾಡಿಕೊಳ್ಳಿ. ನಂತರ ಸಂಸ್ಥೆಗೆ ವಿಲ್ ಬರೆಯಿರಿ...." ಪೂಜ್ಯ ಸ್ವಾಮೀಜಿ ನಕ್ಕುಬಿಟ್ಟು ನುಡಿದರು : "ಸನ್ಯಾಸಿಗೆ ನಾಳೆಯ ಚಿಂತೆ ಇರಬಾರದು. ಸಮಾಜಕ್ಕೆ ಹಗಲಿರುಳು ದುಡಿದವರಿಗೆ ಅವಶ್ಯ ಬಿದ್ದಾಗ ಸಮಾಜವು ಸಹಾಯ ಮಾಡದಿರದೆ ? ಹಾಗೆ ನಾಳೆಯ ಚಿಂತೆ ಮಾಡುವುದೆಂದರೆ ದೇವರಲ್ಲಿ ಅವಿಶ್ವಾಸ ಮಾಡಿದಂತೆ. ನಾನು ನಿರಾಭಾರಿಯಾಗಿದ್ದಷ್ಟೂ ಸುಖಿಯಾಗಿರುತ್ತೇನೆ ಮತ್ತು ಸಮಾಜದಲ್ಲಿ ದುಡಿಯಲು ಧೈರ್ಯವಿರುತ್ತೆ; ನಿಶ್ಚಿಂತತೆ ಇರುತ್ತದೆ. ಆತ್ಮಬಲ ಬರುತ್ತದೆ."

ಧನದಲ್ಲಿ ಶುಚಿ ಪ್ರಾಣದಲ್ಲಿ ನಿರ್ಭಯ
ಇದಾವಂಗಳವಡುವುದಯ್ಯಾ ?
ನಿಧಾನ ತಪ್ಪಿ ಬಂದರೆ ಒಲ್ಲೆನೆಂಬವರಿಲ್ಲ
ಪ್ರಮಾದವಶಾತ್ ಬಂದರೆ ಹುಸಿಯೆನೆಂಬವರಿಲ್ಲ.

ನಿರಾಶೆ-ನಿರ್ಭಯ ಕೂಡಲ ಸಂಗಮದೇವಾ
ನೀನೊಲಿದ ಶರಣಂಗಲ್ಲದಿಲ್ಲ.

ಮಹಾಗುರು ಬಸವಣ್ಣನವರ ಅಮರವಾಣಿಯ ಕಡೆಯ ಎರಡು ಸಾಲುಗಳಿಗೆ ಜೀವಂತ ಉದಾಹರಣೆ ಪೂಜ್ಯ ಸದ್ಗುರುಗಳು. ಬಟ್ಟೆಬರೆ, ಕಾಲಿನ ಬೂಟು ಹರಿದಿದ್ದರೂ ಸಹ ಅದರತ್ತ ಗಮನವಿರದು. ಶಿಷ್ಯರೇ ಗಮನಿಸಿ ಬೇರೆ ತಯಾರುಮಾಡಿ ಇರಿಸಬೇಕು. ಪೂಜ್ಯರ ನಿಸ್ವಾರ್ಥ ಮನೋಭಾವ, ಸಂಸ್ಥೆಯನ್ನು ಬಹುವಿಧವಾಗಿ ಬೆಳೆಸಿ, ಅನೇಕ ಜನರಿಗೆ ಆಶ್ರಯನೀಡಬೇಕೆಂಬ ಕಳಕಳಿ-ಇವೇ ನಮಗೆಲ್ಲ ದುಡಿಯುವ ಆಕಾಂಕ್ಷೆಯನ್ನು ಪ್ರೇರೇಪಿಸುತ್ತವೆ.

ಕೈಯಲ್ಲಿ ಹಣವಿರುವುದಕ್ಕಿಂತ ಹೆಚ್ಚು ಯೋಜನೆಗಳ ಪಟ್ಟಿ. ಪುಸ್ತಕ ಪ್ರಕಟಣೆ, ವಿದ್ಯಾಲಯ ಸ್ಥಾಪನೆ ಒಂದೇ ಎರಡೇ. "ಅಪ್ಪಾಜಿ, ಒಂದಾಗುತ್ತಲೇ ಒಂದು ಯೋಜನೆ ಸಿದ್ಧಮಾಡುವಿರಿ. ಪ್ರವಚನಕ್ಕೆ ಬಿಡುವೇ ಬೇಡವೇ? " ಎಂದರೆ ಅದಕ್ಕೆ ಪೂಜ್ಯರ ಉತ್ತರ : "ಅಲ್ಪ ಆಕಾಂಕ್ಷೆ ಸಲ್ಲದು. ಕಣ್ಣೆದುರಿಗೆ ನೂತನ ಸಾಧನೆಗಳು ಗುರಿಯಾಗಿರಬೇಕು- ಇಷ್ಟೇ ಸಾಕು ಎಂಬ ಅಲ್ಪ ತೃಪ್ತಿ ಹೋರಾಟ ಮನೋಭಾವವನ್ನೇ ಕಳೆಯುತ್ತದೆ. ಹೋರಾಟವಿಲ್ಲದ್ದು ಬದುಕೇ ಅಲ್ಲ. ಆಲಸ್ಯದ ಅಲ್ಪತೃಪ್ತಿಗಿಂತ ಕಾರ್ಯಮಗ್ನತೆಯ ಅತೃಪ್ತಿ ಲೇಸು. ದೊಡ್ಡ ದೊಡ್ಡ ಗುರಿ ಇರಿಸಿಕೊಳ್ಳುತ್ತಾ ಮುಂದೆ ಸಾಗಬೇಕು." ಒಮ್ಮೊಮ್ಮೆ ಅನೇಕ ನೂತನ ಯೋಜನೆಗಳು ತಲೆಯಲ್ಲಿ ಬಂದು ಅವುಗಳನ್ನು ಕಾರ್ಯಗತಮಾಡಲು ಆರ್ಥಿಕ ಸಹಾಯ ಒದಗದಾಗ ನೊಂದು ಬಿಸಿಯುಸಿರು ಬಿಟ್ಟು ನುಡಿದರು. "ದೇವರು ಎಷ್ಟೆಲ್ಲ ಹೊಸ ವಿಚಾರಕೊಟ್ಟು ಆಸ್ತಿಯನ್ನೇಕೆ ಕೊಟ್ಟಿಲ್ಲ.. ಆಸ್ತಿ ಇರುವ ಶ್ರೀಮಂತ ಮಠಾಧಿಪತಿಗಳ ತಲೆಯಲ್ಲಾದರೂ ಈ ಯೋಜನೆ ಬಂದಿದ್ದರೆ ! ಹಲ್ಲಿದ್ದೋರಿಗೆ ಕಡಲೆ ಇಲ್ಲ ; ಕಡಲೆ ಇದ್ದೋರಿಗೆ ಹಲ್ಲಿಲ್ಲ. ಹೀಗಾದರೆ ಯೋಜನೆಗಳು ಕಾರ್ಯಗತವಾಗದೆ ನಮ್ಮೊಡನೆಯೇ ಸತ್ತುಬಿಟ್ಟಾವು...." ಆದರೆ ಮರುಕ್ಷಣವೇ ನುಡಿವರು, "ದೇವರು ಆಸ್ತಿಕೊಡದಿದ್ದುದೇ ಒಳಿತಾಯಿತು. ಪ್ರವಚನವನ್ನೇ ಕಾಯಕವನ್ನಾಗಿ ಇರಿಸಿಕೊಂಡು ಹೊರಟಿದ್ದರಿಂದ ಹೊಸ ವಿಚಾರ ತಲೆಯಲ್ಲಿ ಸುಳಿಯುತ್ತವೆ. ಸಮಾಜದ ಜನರ ಸಂಪರ್ಕ ಬರುತ್ತದೆ. ಅವರ ಸುಖ-ದುಃಖ, ಅವಶ್ಯಕತೆಗಳ ಅರಿವಾಗುತ್ತದೆ. ಚೆನ್ನಾಗಿ ಆಸ್ತಿ ಇದ್ದಿದ್ದರೆ ಮಠ ಬಿಟ್ಟು ಹೊರಗೇ ಹೋಗದೆ, ಸ್ವಪ್ರತಿಷ್ಠೆಯ ಬಂಧನದಲ್ಲಿ ಸಿಕ್ಕಿ ಪ್ರತಿಭೆಯನ್ನು ಮುಚ್ಚಿಟ್ಟುಕೊಂಡು ಉಳಿದು ಬಿಡುತ್ತಿದ್ದೆವೇನೋ! ಏಕೆಂದರೆ ಲೋಕೋತ್ತರ ಕಾರ್ಯಗಳು ಧೀಮಂತರು, ಪ್ರತಿಭಾವಂತರು, ಗುಣವಂತರಿಂದ ಆಗಿವೆಯೇ ವಿನಾ ಕೇವಲ ಆಸ್ತಿವಂತರಿಂದಲ್ಲ."

ಹೀಗೆ ಎಲ್ಲಾ ವಿಧದಿಂದಲೂ ಹೋರಾಟವೇ ಪ್ರಿಯ ಸದ್ಗುರುಗಳಿಗೆ! ವಿಶ್ವ ಕಲ್ಯಾಣ ವಿರ್ಷ ಹೆಮ್ಮರವು ಇಂದು ಅನೇಕ ಸದ್ಗ್ರಂಥಗಳೆಂಬ ಫಲಗಳನ್ನು ಜಗತ್ತಿಗಿತ್ತಿದೆ. ಅನಂತ ಮುಮುಕ್ಷುಗಳ ಆಶ್ರಯತಾಣವಾಗಿದೆ. ಈ ಸಂಸ್ಥೆಯ ಹೆಮ್ಮರದ ಉಗಮಕ್ಕೆ ಬೀಜ ಬಿತ್ತಿದವರು ಪೂಜ್ಯ ಸದ್ಗುರುಗಳು, ವಿಶ್ವ ಕಲ್ಯಾಣ ಮಂಟಪವನ್ನು ಸಂಸ್ಥಾಪಿಸುವುದರ ಮೂಲಕ. ಉಪ್ಪು ನೀರನ್ನುಂಡು ಸಿಹಿ ನೀರನ್ನೆರೆವ ಮೇಘಾಳಿಯಂತೆ, ಲೋಕವಿತ್ತ ಕಹಿಯನ್ನುಂಡು ನಂಜುಂಡರಾಗಿ ಸದಾ ಅಮೃತವನ್ನೇ ಅಸಂಖ್ಯಾತ ಮುಮುಕ್ಷುಗಳಿಗೆ ಧಾರೆಯೆರೆಯುತ್ತ ಬಂದ ಈ ಮಹಾಗುರುವು ಸಂಸ್ಥೆಯ-ಸಮಾಜದ, ನಮ್ಮ-ನಿಮ್ಮೆಲ್ಲರ ಬೆನ್ನ ಹಿಂದಿನ ಶಕ್ತಿಯಾಗಿ ದೀರ್ಘಕಾಲವಿರುವ ಸೌಭಾಗ್ಯವನ್ನು ಬಸವ ಗುರುವು ದಯಪಾಲಿಸಲೆಂದು ಪ್ರಾರ್ಥಿಸಿ, 48 ನೆಯ ಹುಟ್ಟು ಹಬ್ಬದ ಶುಭನಮನಗಳನ್ನು ಸಲ್ಲಿಸುವೆ.

ಮಾತೆ ಮಹಾದೇವಿ

o — o

ಆಸ್ತಿಕ-ನಾಸ್ತಿಕ

ಒಂದೇ ಜಾತಿ
ಯ
ಎರಡು ಬಳ್ಳಿ
ಗಳವು
ಹಬ್ಬಿವೆ
ಸ್ಥಿರವೂ, ಪವಿತ್ರವೂ
ಆದ
ದೇವರು
ಎಂಬ
ವಿಶಾಲ ವೃಕ್ಷವೊಂದಕ್ಕೆ,
ವೃಕ್ಷವೇ ತನ್ನ
ರಕ್ಷಕನೆಂದರಿತ
ಬಳ್ಳಿಯೊಂದು
ಶಿರಬಾಗಿ ವಂದಿಸುವುದು
ಆ ವೃಕ್ಷಕ್ಕೆ,
ವೃಕ್ಷದ ಅಸ್ತಿತ್ವವನ್ನೇ
ಅಲ್ಲ ಗಳೆವುದು
ಇನ್ನೊಂದು ಬಳ್ಳಿಯು,
ಆ....ದ....ರೆ
ಇವೆರಡೂ ಬಳ್ಳಿಗೂ....
ಆ ಧಾ ರ
ಆ ವೃಕ್ಷವೇ....

ಚೈತ್ರ, ಹಾಸನ.

ಸಮಸ್ಯೆ! ಸಮಾಧಾನ!

—ಮಂಚೇಗೌಡ, ಮಂಡ್ಯ.

** ಶಿವದಾರದಲ್ಲಿ ದೇವರನ್ನು ಕಟ್ಟಿಕೊಳ್ಳುವ ಪದ್ಧತಿಯನ್ನು ಬಸವಣ್ಣನವರು ಏಕೆ ಬಳಕೆಗೆ ತಂದರು ?

* ಕೊರಳಲ್ಲಿ ದಾರ ಕಂಡರೆ ಅವನು ಶೂದ್ರನಲ್ಲ, ಅಸ್ಪೃಶ್ಯನಲ್ಲ ಎಂಬ ತಿಳುವಳಿಕೆ ಸಾಮಾನ್ಯವಾಗಿ ಬರುವುದಷ್ಟೆ. ಜನ್ನಿವಾರವಂತೂ ವರ್ಣ, ಲಿಂಗ, ಜಾತಿ ಭೇದವಿಲ್ಲದೆ ಕೊಡಲ್ಪಡಲಿಲ್ಲ. ಈ ಅಸಮಾನತೆಯ ವಿರುದ್ಧ ಹೋರಾಡಲೆಂದು ಎಲ್ಲರಿಗೆ ಧರ್ಮ ಸಂಸ್ಕಾರ ನೀಡಲಾಯಿತು; ಮತ್ತು ದಾರದಲ್ಲಿ ಲಿಂಗಧಾರಣೆಗೆ ಅವಕಾಶ ಮಾಡಲಾಯಿತು.

—ಬೀಳೂರಪ್ಪ, ಬಾಗಲಕೋಟೆ.

** ಸಾಮಾನ್ಯವಾಗಿ ಲಿಂಗಾಯತ ಧರ್ಮದ ಸನ್ಯಾಸಿಗಳು ಶಿವದಾರ-ಕರಡಿಗೆ ಬಳಸುವುದಿಲ್ಲವೇಕೆ ?

* ಬೆಳ್ಳಿ-ಬಂಗಾರಗಳಂತಹ ಲೋಹಗಳ ಬಗ್ಗೆ ವ್ಯಾಮೋಹ ಬೆಳೆಯದಿರಲೆಂಬ ಮುನ್ನೆಚ್ಚರಿಕೆಯಿಂದ ಮತ್ತು ಸಾಮಾನ್ಯವಾಗಿ ಬಸವ ಧರ್ಮದ ಸನ್ಯಾಸಿಗಳು ಊರಿಂದೂರಿಗೆ ಸಂಚರಿಸುತ್ತ ಧರ್ಮಪ್ರಚಾರದಲ್ಲಿ ನಿರತರಾಗಿರುತ್ತಿದ್ದರಿಂದ ಅಪಾಯರಹಿತರಾಗಿರಲು ಲೋಹಗಳನ್ನು ಬಳಸುತ್ತಿರಲಿಲ್ಲ. ಬೆಳ್ಳಿ-ಬಂಗಾರಗಳ ಜೊತೆಗೆ ಇಷ್ಟಲಿಂಗವನ್ನೂ ಕಳೆದುಕೊಳ್ಳಬಾರದಷ್ಟೆ.

—ರಾಘವೇಂದ್ರ, ಮಂಗಳೂರು.

** ನಮ್ಮಲ್ಲಿ ಸನ್ಯಾಸ ಕೊಡುವಾಗ ಜನ್ನಿವಾರ ತೆಗೆಯುತ್ತಾರೆ. ಅದೇ ಲಿಂಗಾಯತ ಧರ್ಮದಲ್ಲಿ ಶಿವದಾರ ಅಥವಾ ಇಷ್ಟಲಿಂಗ ತೆಗೆಯದೆ ಕಾವಿ ಲಾಂಛನ ಕೊಡುತ್ತಾರೆ. ಹೀಗೇಕೆ ?

* ಮೂರೆಳೆಯಿಂದ ಕೂಡಿದ ಜನ್ನಿವಾರ ಪಿತೃ ಋಣ, ಶಾಸ್ತ್ರ ಋಣ, ಋಷಿ ಋಣ ಎಂಬ ಮೂರು ಋಣಗಳನ್ನು ಸಂಕೇತಿಸುತ್ತದೆ. ಯಾವ ಋಣಗಳಿಗೂ ಬದ್ಧನಾಗಿರಬೇಕಿಲ್ಲದ ಸನ್ಯಾಸಿ ಅದನ್ನು ತೆಗೆಯುತ್ತಾನೆ. ಲಿಂಗಾಯಿತ ಧರ್ಮದಲ್ಲಿ ದಾರ ಮುಖ್ಯವಲ್ಲ ಅದರ ತುದಿಗಿರುವ ಇಷ್ಟ ಲಿಂಗ ಮುಖ್ಯ. ಇದು ವಿಶ್ವಾತ್ಮನ ಸಂಕೇತ ಮತ್ತು ತ್ರಾಟಕ ಯೋಗಕ್ಕೆ ಸಹಾಯಕ ಸಾಧನ. ಸನ್ಯಾಸಿಯಾದರೂ ಯೋಗಾಭ್ಯಾಸಿಯಾಗಿರಲೇ ಬೇಕಾದ್ದರಿಂದ ಅವನು ಇಷ್ಟ ಲಿಂಗವಿರಹಿತನಾಗಬೇಕಿಲ್ಲ.

—ಹೆಸರು ಬೇಡ, ಊರುಬೇಡ.

** ವೈಚಾರಿಕತೆ ಎಂದರೇನು ? ಕೆಲವರು ವಿಚಾರವಾದಿಗಳೆಂದು ಹೇಳಿಕೊಳ್ಳುತ್ತ ನಾಸ್ತಿಕತೆಗೆ ವಾಲುವರಲ್ಲ. ಇದು ಸರಿಯೆ ?

* ಮನುಷ್ಯ ಪ್ರಾಣಿಗೆ ದೇವದತ್ತ, ಅಥವಾ ಪ್ರಕೃತಿ ದತ್ತವಾಗಿ ಬಂದ ಬುದ್ಧಿಯನ್ನು ಚಿಂತನ ಶೀಲತೆಯಲ್ಲಿ ತೊಡಗಿಸುವುದು ವೈಚಾರಿಕತೆ. ವಿಚಾರವಂತನಾದ ಮಾತ್ರಕ್ಕೆ ನಾಸ್ತಿಕನೇ ಆಗಬೇಕಿಲ್ಲ. ಶಂಕರ, ಬಸವಣ್ಣ, ಅರವಿಂದ ಐನ್‌ಸ್ಟೈನ್‌ರಂತಹ ವಿಚಾರವಾದಿಗಳು ಶುದ್ಧ ಆಸ್ತಿಕರಾಗಿರಲಿಲ್ಲವೆ ?

—ನರಹರಿ, ರಾಷ್ಟ್ರೀಯ ವಿದ್ಯಾಲಯ, ಬೆಂಗಳೂರು.

** ವಿಜ್ಞಾನವು ಬಹಳಷ್ಟು ಮುಂದುವರಿದಂತೆಲ್ಲ ದೇವರ ನಂಬಿಗೆ ಕುಸಿಯುತ್ತೇನೋ ಎನ್ನಿಸುತ್ತದೆ. ಪ್ರನಾಳ ಶಿಶು ಹುಟ್ಟಿರುವುದನ್ನು ಕೇಳಿದ ಮೇಲೆ ದೇವರನ್ನು ನಂಬುವುದು ಹೇಗೆ ?

* ಅದಕ್ಕೆ ಇದಕ್ಕೆ ಏನು ಸಂಬಂಧ. ಅಲ್ಲದೆ ವಿಜ್ಞಾನವು ಸೃಷ್ಟಿಯ ರಹಸ್ಯಗಳನ್ನು ಹೆಚ್ಚು ಹೆಚ್ಚಾಗಿ ಬಿಚ್ಚಿಟ್ಟಂತೆ, ಸೃಷ್ಟಿಯೂ ಇನ್ನೂ ಅಭೇದ್ಯವಾಗಿಯೇ ಉಳಿಯುತ್ತ ಹೋದಂತೆ ವಿಜ್ಞಾನಿಯ ದೈವೀಪ್ರಜ್ಞೆ ಅಧಿಕಗೊಳ್ಳುತ್ತದೆ. ಬುದ್ಧಿಗತೀತವಾದ ಕರ್ತನ ಕೌಶಲ್ಯದ ಬಗ್ಗೆ ವಿಸ್ಮಯವೆನಿಸುತ್ತೆ. ಪ್ರನಾಳ ಶಿಶುವಿನ ಜನನಕ್ಕೆ ದೇವರ ಸೃಷ್ಟಿಯ (ತಾಯಿ ತಂದೆಗಳ) ರೇತೋಬಿಂದುವನ್ನೇ ತೆಗೆದುಕೊಂಡು, ಶರೀರದೊಳಗೆ ಫಲಿಸುವುದನ್ನು ಪ್ರನಾಳದಲ್ಲಿ ಫಲಿಸುವ ಕಾರ್ಯಮಾಡಿದಾಗ, ದೈವೀ ಸೃಷ್ಟಿಗೆ ವಿರೋಧವೆಲ್ಲಿ ಬಂತು !

—ರಾಜಶೇಖರಪ್ಪ, ದಾವಣಗೆರೆ.

** ಪಂಡಿತನಿಗೆ ಮತ್ತು ವಿಚಾರವಾದಿಗೆ ಇರುವ ವ್ಯತ್ಯಾಸವೇನು ?

* ಕೆಲವೊಂದು ವಿಶಿಷ್ಟ ವಿಷಯಗಳ ಆಳವಾದ ಶಾಸ್ತ್ರೀಯ ಜ್ಞಾನ ಪಡೆದವನು ಪಂಡಿತ. ಸ್ವತಂತ್ರ ಚಿಂತನಶೀಲತೆಯಲ್ಲಿ ತೊಡಗಿದವ ವಿಚಾರವಾದಿ. ಪಂಡಿತ ಸತ್ಯವನ್ನು ಶಾಸ್ತ್ರಾಧಾರದಿಂದ ಸಮರ್ಥಿಸುವ. ವಿಚಾರವಾದಿ ಬುದ್ಧಿ ಮತ್ತು ಅನುಭವಗಳ ಆಧಾರದಿಂದ ಸತ್ಯವನ್ನು ನಿರ್ಣಯಿಸುವ. ಪಂಡಿತನು ಕೆಲವೊಂದು ನಗ್ನ ಸತ್ಯಗಳು ಮನವರಿಕೆಯಾದರೂ ಸತ್ಯವನ್ನೊಪ್ಪಲು ತಲ್ಲಣಿಸುವ. ವಿಚಾರವಾದಿ ನಿರ್ಭಯವಾಗಿ ಸತ್ಯವನ್ನು ಒಪ್ಪಿಕೊಳ್ಳುವ. ನಿರ್ಣಯವನ್ನು (Conclusion) ಮೊದಲೇ ಒಪ್ಪಿಕೊಂಡು ಅದರ ಸಮರ್ಥನೆಗೆ ಪಂಡಿತ ಪ್ರಯತ್ನಿಸಿದರೆ, ವಿಚಾರವಾದಿ ಸತ್ಯದ ಅನ್ವೇಷಣೆಗೆ ಹೊರಟು ಸರಿಯೆಂದು ಮನಗಂಡ ತತ್ತ್ವಗಳನ್ನು ನಿಷ್ಕಲ್ಮಶ ಹೃದಯದಿಂದ ಸ್ವೀಕರಿಸುವನು.

—ಬಸವ ಕುಮಾರ, ಕೋಳಾರ.

** ಇಲ್ಲೊಬ್ಬ ಧಾರ್ಮಿಕನಂತೆ ತೋರುವ ವ್ಯಕ್ತಿ ಧಾರ್ಮಿಕ ಪತ್ರಿಕೆಗೆ ಲೇಖನ ಬರೆಯುವಾಗ ಶುದ್ಧ ಆಸ್ತಿಕನಂತೆಯೂ, ನಾಸ್ತಿಕ ಪತ್ರಿಕೆಗೆ ಬರೆಯುವಾಗ ಅದರ ಆಳ ಅರಿತಂತೆಯೂ ಬರೆಯುವನು. ಅವನ ಸ್ವಂತ ವಿಚಾರಧಾರೆ ಏನೆಂದೇ ಸಮರ್ಗಥವಾಗದು. ನಿಮ್ಮ ಅಭಿಪ್ರಾಯ.

* ಸ್ವಂತ ವ್ಯಕ್ತಿತ್ವವಿದ್ದರೆ ತಾನೇ ಸ್ವಂತ ಅಭಿಪ್ರಾಯ ಇರುವುದು ! "ಉದರ ನಿಮಿತ್ತಂ ಬಹುಕೃತ ವೇಷಂ," ಸಂಭಾವನೆಯ ಆಸೆಗಾಗಿಯೂ ಇರಬಹುದು ಅಥವಾ ಹೇಗಾದರೂ ತಮ್ಮ ಲೇಖನ ಪ್ರಕಟವಾದರೆ ಸಾಕೆಂಬ ಆಸೆಯೂ ಇರಬಹುದು. ಅವನ ವೃತ್ತಿಗೆ ನೀವೇಕೆ ತಲೆ ಕೆಡಿಸಿಕೊಳ್ಳುವಿರಿ. ಬೇರೆ ಬೇರೆ ಸಿನೆಮಾಗಳಲ್ಲಿ ದುರಂತ, ಸುಖಾಂತ್ಯ, ನಾಯಕಿ, ಖಳನಾಯಕಿ -ಇತ್ಯಾದಿ ಪಾತ್ರ ಮಾಡುವ ನಟಿಯಂಥೆ ಉದ್ಯೋಗದವರವರಿರಬಹುದು.

—ಬಿ. ಸಿ. ಸಂಪತ್‌ಮಲ್ಲಿಕಾರ್ಜುನಸ್ವಾಮಿ, ಕಿಟ್ಟದಾಳ.

೧. ಮನಸ್ಸಿನ ಸ್ಥಿರತೆಗೆ ಏನು ಮಾಡಬೇಕು ?

* ಸಮ ಪ್ರಮಾಣದಲ್ಲಿ ಉಚ್ಛ್ವಾಸ-ನಿಶ್ವಾಸ ಮಾಡುತ್ತ ಷಡಕ್ಷರಿ ಮಂತ್ರವನ್ನು ಧ್ಯಾನಿಸುವ ಕಾರ್ಯದಲ್ಲಿ ಮನಸ್ಸನ್ನು ಲೀನ ಗೊಳಿಸಬೇಕು.

೨. ಬ್ರಹ್ಮಚರ್ಯ ಪಾಲನೆ ಸಾಧ್ಯವೆ ? ಹೇಗೆ ? ಅದರ ಗುಣಾವಗುಣಗಳನ್ನು ತಿಳಿಸಿ ?

* ಬ್ರಹ್ಮಚರ್ಯವೆಂದರೆ ಮೊದಲನೆ ಅರ್ಥ ಬ್ರಹ್ಮನ ಆಚರಣೆ. ಬ್ರಹ್ಮಜ್ಞಾನ

ಪಡೆದುಕೊಂಡು, ಮಂತ್ರಧ್ಯಾನವಲ್ಲಿ ತಲ್ಲೀನವಾಗುವುದು. ಇದರ ಪ್ರಚಲಿತ ಅರ್ಥ ಇಂದ್ರಿಯ ಸಂಯಮ. ಇಂದ್ರಿಯಗಳನ್ನು ಬಹಿರಂಗದಲ್ಲಿ ಹರಿಯ ಬಿಡದೆ ದೇವ, ಅರಿವು, ಅನುಭಾವಗಳತ್ತ ಹರಿಯಬಿಡುವುದು. ಬ್ರಹ್ಮಚರ್ಯ ಪಾಲನೆಯನ್ನು ಯಶಸ್ವಿಯಾಗಿ ಸಾಧಿಸಬೇಕಾದರೆ ಮನಸ್ಸನ್ನು ಸದಾ ಕಾಲದಲ್ಲಿ ೧. ಕಾಯಕ ೨. ಧಾರ್ಮಿಕ ಸಾಹಿತ್ಯಾಧ್ಯಯನ ೩. ಪೂಜೆ-ಧ್ಯಾನ ೪. ಸೇವೆ-ಇವುಗಳಲ್ಲಿ ಓಡಾಡಲು ಬಿಡಬೇಕು. ಶರಣರ ಸಂಗವೆಂಬ ಬೇಲಿ ಇರಬೇಕು ; ಮಹಾತ್ಮರ ಮಾರ್ಗದರ್ಶನದ ಕಾವಲಿರಬೇಕು.

ಯಾವುದಾದರೊಂದು ಉನ್ನತ ಗುರಿಯನ್ನು ಮುಟ್ಟುವ ಅದಮ್ಯ ಆಕಾಂಕ್ಷೆ ಇದ್ದಾಗ ಮನಸ್ಸು ವಿಚ್ಛಂದವಾಗದು. ಸಾಧಿಸುವ ಪ್ರಗತಿಯು ಸಂತೃಪ್ತಿಯನ್ನು ತಂದುಕೊಡುವುದು. ಗುರಿ ಕಣ್ಣೆದುರಿಲ್ಲದೆ, ಸಾಧನೆಯಲ್ಲಿ ನಿಷ್ಠೆಯಿಲ್ಲದೆ, ಗುರುವಿನ ಮಾರ್ಗದರ್ಶನವಿಲ್ಲದೆ ಹೊರಟರೆ ಕಾಲಾನಂತರದಲ್ಲಿ ಸಂಯಮದ ಬದುಕು ನೀರಸವೆನಿಸಿ, ಮನ ವಿಚ್ಛಂದವಾಗಬಹುದು. ಉದಾತ್ತೀಕರಣಗೊಂಡ ಇಂದ್ರಿಯ ಶಕ್ತಿಯಿಂದ ಅದ್ಭುತ ಜ್ಞಾನ-ತಪಸ್ಸನ್ನು ಗಳಿಸಲು ಸಾಧ್ಯವಿದೆ. ತಪ್ಪು ಮಾರ್ಗದರ್ಶನದಿಂದ ವಾಮಾಚಾರದ ದಾರಿ ತುಳಿಯಲೂ ಸಾಧ್ಯವಿದೆ. ಬ್ರಹ್ಮಚರ್ಯಾಚರಣೆಯಿಂದ ನೆನಪಿನ ಶಕ್ತಿ ವರ್ಧಿಸುವುದು, ಆತ್ಮಬಲ ಅಧಿಕಗೊಳ್ಳುವುದು. ವಾಣಿಯು ಪ್ರಭಾವಕಾರಿಯಾಗುವುದು, ವ್ಯಕ್ತಿತ್ವವು ಬಹುಮುಖವಾಗಿ ವಿಕಾಸಗೊಳ್ಳುವದು. ದಾರಿ ತಪ್ಪಿದರೆ ಮನೋರೋಗಿಯು ಆಗಬಹುದು.

—ಒಬ್ಬ ಸಾಧಕ ಸ್ವಾಮಿ, ಲೋಕ ಸಂಚಾರಿ.

** ಓರ್ವ ಧಾರ್ಮಿಕ ನೇತಾರರು ನನ್ನ ಬೆನ್ನುಹತ್ತಿ ಬರೀ ಕುಹಕ ಆರೋಪ, ಮಿಥ್ಯಾಪವಾದ, ನಿಂದೆಗಳಲ್ಲಿ ತೊಡಗಿದ್ದಾರೆ. ನಾನು ಪರಿಶುದ್ಧ ಆಧ್ಯಾತ್ಮ ಪಥದಲ್ಲಿ ಸಾಗಿ ಜನಪ್ರಿಯನಾಗುತ್ತಿರುವದೇ ಅದಕ್ಕೆ ಕಾರಣ. ಅವರು ಯಾವ ಯಾವ ಹೀನ ಕೃತ್ಯಗಳನ್ನು ಮಾಡಿದ್ದಾರೆ, ಎಷ್ಟು ದೌರ್ಜನ್ಯ ಪ್ರವೃತ್ತಿಯವರು ಎಂಬುದು ನನಗೆ ಚೆನ್ನಾಗಿಗೊತ್ತು, ಅವನ್ನೆಲ್ಲ ಬಯಲಿಗಿಟ್ಟು ನಾನು ಸೇಡು ತೀರಿಸಿಕೊಳ್ಳಲೇ ಎಂಬಷ್ಟು ರೋಷ ಉಕ್ಕಿ ಹರಿಯುತ್ತದೆ ಒಮ್ಮೊಮ್ಮೆ. ಆದರೆ ನನ್ನಂತರಾತ್ಮ ಎಂದೂ ದುಷ್ಪ್ರವೃತ್ತಿಗೆ ಅವಕಾಶ ನೀಡದು. ನಿಮ್ಮ ಅಭಿಪ್ರಾಯ ?

* ಕತ್ತಿಗೆ ಕತ್ತಿ ಇರಿದಾಗ ಅಂತಃಶಕ್ತಿ ಕುಸಿಯುತ್ತದೆ. ಕತ್ತಿಗೆ ಪ್ರೀತಿ ತೋರಿ

ದಾಗ ಅಂತಃಶಕ್ತಿ ಹೆಚ್ಚುತ್ತದೆ. ದುರ್ಜನರಿಗೆ ಪ್ರತೀಕಾರ ಮಾಡಹೋದರೆ ನಿಮ್ಮ ತಪಸ್ಸು ವ್ಯಯವಾಗುತ್ತದೆ. ಅವರ ಕಡೆ ಗಮನ ಕೊಡಬೇಡಿ. ಅವರ ಪಾಪದ ಕೊಡ ಸ್ವಂತಕಾರ್ಯಗಳಿಂದಲೇ ತುಂಬಿ ಉರುಳುತ್ತದೆ. ಮೌನವಾಗಿ, ನಿರ್ಲಿಪ್ತರಾಗಿ ಗಮನಿಸಿ "ಸತ್ಯ ಮೇವ ಜಯತೆ" ಎಂಬುದನ್ನು. ಮನುಕುಲದ ಇತಿಹಾಸದಲ್ಲಿ ಬೈದವರಾರೂ ದೊಡ್ಡವರಾಗಿಲ್ಲ, ಬೈಸಿಕೊಂಡು ಆತ್ಮವಂತಿಕೆ ಕಾಪಾಡಿಕೊಂಡವರೇ ದೊಡ್ಡವರಾಗಿರುವುದು.

—ಗುರು , ಊರುಬೇಡ

** ಭಕ್ತರೂ ಗುರುವಾಗಬಲ್ಲರೆಂಬ ವಿಚಾರವನ್ನು ಒಪ್ಪುವ ಒಂದು ಮಠದವರು, ನಾನು (ಜಾತಿಯಿಂದ ಭಕ್ತನಾಗಿ ಹುಟ್ಟಿದವನು) ಸ್ವಯಂ ಇಚ್ಛೆಯಿಂದ ಗುರುವಾಗಿ, ಸಾಕಷ್ಟು ಅನುಯಾಯಿಗಳನ್ನು ಹೊಂದಿ ಕೀರ್ತಿಶಾಲಿಯಾಗಿದ್ದರೂ ನನ್ನನ್ನು ಅಗೌರವದಿಂದ ಸಂಬೋಧಿಸುವರು. ಇದು ಸರಿಯೇ ? ಜಾತಿವಾದಿಗಳು ಹೀಗೆ ಮಾಡಿದ್ದರೆ ನನಗೆ ಬೇಸರವೆನಿಸುತ್ತಿರಲಿಲ್ಲ. ತತ್ವನಿಷ್ಠರು ಎಂದು ಹೋರಾಡುವವರು ಹೀಗೆ ಮಾಡುವುದು ಖೇದವನ್ನುಂಟು ಮಾಡುತ್ತದೆ.

* ತತ್ತ್ವನಿಷ್ಠರು ಎನ್ನುವುದಕ್ಕಿಂತ ಅಂಥವರನ್ನು ಸ್ವಪ್ರತಿಷ್ಠಾ ಪ್ರಿಯರು ಎನ್ನಬಹುದು. ಕೆಲವರು ಪರನಿಂದೆಯ ಬುನಾದಿಯ ಮೇಲೆ ಸ್ವಕೀರ್ತಿಯ ಭವನ ಕಟ್ಟಿಸಿಕೊಳ್ಳಬಯಸುವವರು. ತನ್ನಂತೆ ಪರರ ಬಗೆದೊಡೆ ಕೈಲಾಸ ನೆರಮನೆಯಕ್ಕು ಸರ್ವಜ್ಞ ಎಂಬ ವಾಣಿ ಕೇಳಿಲ್ಲವೆ? ತನ್ನಂತೆ ಪರರ ಬಗೆವ ಔದಾರ್ಯ ಎಲ್ಲರಲ್ಲಿ ಬರುವದು ಕಷ್ಟ ; ಆದರಲ್ಲೂ ಸ್ವಪ್ರಶಂಸೆಯ ಕೋಟೆ ಕಟ್ಟಿಕೊಂಡ ಮೆರೆವ ಸ್ವಾಮಿಗಳಲ್ಲಿ ಬರುವುದು ಇನ್ನೂ ಕಷ್ಟ. ನೀವೇಕೆ ವ್ಯಥೆ ಪಡುವಿರಿ; ಮಾನವ ಸ್ವಭಾವ ಹೀಗಿದೆ ಎಂದು ಅರ್ಥಮಾಡಿಕೊಳ್ಳಿ ಸಾಕು.

** ಮಠ-ಪೀಠ, ಶ್ರೀಮಂತಿಕೆ ವೈಭವಗಳಿಂದ ಸ್ವಾಮಿಯು ದೊಡ್ಡವನಾಗುವನೋ ಅಥವಾ ಆತ್ಮಜ್ಞಾನದಿಂದಲೋ ?

* ದೊಡ್ಡಸ್ತಿಕೆ ಹೊರಗಿನಿಂದ ಹೇರಲ್ಪಡುವ ವಸ್ತುವೆಂದು ನೀವು ಅರ್ಥವಿಸುವುದಾದರೆ ಮೊದಲನೆಯದು ಸರಿ. ದೊಡ್ಡಸ್ತಿಕೆ ಬರುವುದು ವ್ಯಕ್ತಿತ್ವ ವಿಕಸನದಿಂದ ಎಂದು ನಂಬುವುದಾದರೆ ಎರಡನೆಯದು ಸರಿ. ನನ್ನ ಅಭಿಪ್ರಾಯದಲ್ಲಿ ಮೊದಲನೆಯದು ಕಾಗದದ ಹೂವಿಗೆ ಪರಿಮಳ ಸಿಂಪಡಿಸಿದಂತೆ ; ಎರಡನೆಯದು ನಿಜವಾದ ಹೂವಿನಲ್ಲಿ ಸೌರಭವು ಅರಳಿದಂತೆ. ನೀವು ಕಾಗದದ ಹೂವಿಗೆ ಎಷ್ಟೇ ಪರಿಮಳ ಸಿಂಪಡಿಸಿದರೂ ದುಂಬಿಯು ಮಕರಂದ ಪಾನಕ್ಕೆ ಧಾವಿಸಿ

ಬರದು, ಸಹಜ ಸುಮವನ್ನು ಅರಸಿ ಹೋಗುವುದು. ಹಾಗೆಯೇ ಅಧ್ಯಾತ್ಮ ಜೀವಿಗಳೆಂಬ ಪಾರಮಾರ್ಥಿಕ ದುಂಬಿಗಳು ಜ್ಞಾನ-ಭಕ್ತಿಗಳಿಂದ ಶೋಭಿಸುವ ಸದ್ಗುರುವಿನ ಪಾದಪೆಡೆಗೆ ಧಾವಿಸುವವೇ ವಿನಾ, ಮಠ-ಪೀಠ ವೈಭವ ನೋಡಿ ಅಲ್ಲ.

—ಸೋಮಶೇಖರ ಶಿವಾಚಾರ್ಯ ಪಟ್ಟದ್ದೇವರು, ಊರು ಹೇಳಲಾರೆ.

** ಬಸವಣ್ಣನವರು ಗುರುವೆಂದು ಒಪ್ಪಿಕೊಳ್ಳಲು ನಾವು ಸಿದ್ಧರಿಲ್ಲ. ಸ್ವತಃ ಅವರೇ ಹೇಳಿಕೊಂಡಿಲ್ಲ ಗುರುವೆಂದು ; ನೀವೇಕೆ ಅವರಿಗೆ ಗುರುತ್ವ ಆರೋಪಿಸುತ್ತೀರಿ ?


* 'ಶ್ರೀಗುರುಬಸವಲಿಂಗಾಯನಮಃ' ನಾವು ಮಾಡಿರುವ ಮಂತ್ರವಲ್ಲ, ವಿಶ್ವ ಗುರು ಬಸವೇಶ್ವರರ ಸಮಕಾಲೀನರೇ ದೈವೀಕರಿಸಿದ ಮಂತ್ರ. ನೀವು ಒಪ್ಪದಿದ್ದರೆ ಒಂದು ಸತ್ಯ ಸುಳ್ಳಾಗದು. ತನ್ನ ಕೋಳಿ ಕೂಗದಿದ್ದರೆ ಬೆಳಕೇ ಆಗದು ಎಂಬ ನಂಬಿಕೆ ಬದಿಗಿಡಿ. ಏಸುವನ್ನು ಗುರುವೆಂದು ಮನ್ನಿಸಿ ಬೈಬಲ್ ಧರ್ಮಶಾಸ್ತ್ರ ಎಂಬುವವ ಕ್ರೈಸ್ತ ; ಮಹಮ್ಮದನನ್ನು ಪೈಗಂಬರ ನೆಂದು ನಂಬಿ ಕುರಾನ್ ಧರ್ಮಶಾಸ್ತ್ರ ಎಂದು ನಂಬುವವ ಮುಸ್ಲೀಮ್. ಬುದ್ಧನಲ್ಲಿ ವಿಶ್ವಾಸವಿಟ್ಟು ತ್ರಿಪೀಟಕಗಳು ಧರ್ಮಶಾಸ್ತ್ರಗಳೆಂಬುವವ ಬೌದ್ಧ. ಹಾಗೇ ಬಸವಣ್ಣನವರನ್ನು ಆದಿಗುರುವೆಂದು, ವಚನ ಶಾಸ್ತ್ರವನ್ನು ಧರ್ಮ ಶಾಸ್ತ್ರವೆಂದು ಪರಿಗಣಿಸುವವ ಮಾತ್ರ ಲಿಂಗಾಯತ ; ಅಥವಾ ಬಸವ ಧರ್ಮಿ-ನಿಮಗಿದು ಸಹ್ಯವಾಗದಿದ್ದರೆ ಬಿಡಿ.

—ಒಂದಾನೊಂದು ನಗರದ ಓರ್ವ ಸದ್ಭಕ್ತ

** ಜ್ಞಾನ-ಸೇವೆ ಈ ಮುಂತಾದ ವಿಚಾರಗಳಲ್ಲಿ ಆಸಕ್ತಿ ಇಲ್ಲದ ಓರ್ವ ವ್ಯಾಪಾರಿ ಗಳು ನಮ್ಮೂರಿಗೆ ಆಡಂಬರದ ಆಷಾಢಭೂತಿಯನ್ನು ಕರೆಸಿ, ಸಾರ್ವಜನಿಕರಿಂದ ಹಣ ಕಿತ್ತು ವೈಭವದ ಪೂಜೆಗಳನ್ನು ಮಾಡಿಸುತ್ತಿರುವರು. ಇದರಿಂದ ಯಾರಿಗೆ ಪ್ರಯೋಜನ?

* ನಿಮಗಿಲ್ಲದಿರಬಹುದು, ಜನಸಾಮಾನ್ಯರಿಗೂ ಇಲ್ಲದಿರಬಹುದು, ಆದರೆ ಆ ಗುರು-ಶಿಷ್ಯರಿಗೆ ಇಲ್ಲ ಎಂದು ಹೇಗೆ ತಿಳಿಯುವಿರಿ? ಕೆಲವು ಸಾರ್ವಜನಿಕ ಸೇವೆಗಳು ಒಳ್ಳೇ ಆದಾಯದ ಮೂಲ ಎಂಬುದು ನಿಮಗೆ ಗೊತ್ತಿಲ್ಲದ್ದಕ್ಕಾಗಿ ವಿಷಾದ ವ್ಯಕ್ತಪಡಿಸುವೆ.

★



ಸದಾಚಾರ ಮತ್ತು ದೇವನೊಲಿಮೆ

ಸದ್ಗುರು ಶ್ರೀ ಲಿಂಗಾನಂದ ಸ್ವಾಮಿಗಳು.

ಸದಾಚಾರ ಸದ್ಭಕ್ತಿ ಇಲ್ಲದವರನೊಲ್ಲನಯ್ಯಾ ;
ಅವರಾರಾಧನೆ ದಂಡ !
ನಿಚ್ಚ ನಿಚ್ಚ ಪ್ರಾಯಶ್ಚಿತ್ತರನೊಲ್ಲ
ಕೂಡಲ ಸಂಗಮದೇವ ಭೂಭಾರಕರ

ಮಾನವನ ಅಜ್ಞಾನದ ಪರಿಣಾಮವಾಗ್ಯಿ ಕೆಲವು ಮೂಢನಂಬಿಕೆಗಳು ಉದಿಸುವುದೂ, ಬೆಳೆದು ಬರುವುದೂ ಉಂಟು. ಕೆಲವೊಮ್ಮೆ ಮೂಢರ ಅಜ್ಞಾನದ ಶೋಷಣೆಗಾಗಿ ಕುತಂತ್ರ ಬುದ್ಧಿಯ ಹಲವರು ಮೂಢನಂಬಿಕೆಗಳನ್ನು ಸೃಷ್ಟಿಸುವುದೂ ಉಂಟು. ಅಜ್ಞಾನಿಗಳು ಮತ್ತು ಕುತಂತ್ರಿಗಳು-ಉಭಯತರ ಮಧ್ಯೆ ಸಿಕ್ಕಿ ದೇವರು ನುಗ್ಗುಮುಗ್ಗಾಗುತ್ತಿರುವನು. ಅದರಲ್ಲಿಯೂ ಭಾರತದಲ್ಲಿ ಮೂಢನಂಬಿಕೆಗಳು ಪಾರ್ಥೇನಿಯಮ್ ಹುಲ್ಲಿನಷ್ಟೇ ತೀವ್ರವಾಗಿ ಬೆಳೆದು ಬಲಗೊಂಡಿರುವವು. ಹಿಂದೂ ತರುಣರು ತ್ವರಿತ ಪ್ರಮಾಣದಲ್ಲಿ ನಾಸ್ತಿಕರಾಗುತ್ತಿದ್ದಾರೆ. ಪ್ರಮುಖ ಕಾರಣ ವೆಂದರೆ ಆಚರಣೆಯಲ್ಲಿರುವ, ಜಿಗುಪ್ಸೆ ಹುಟ್ಟಿಸುವ ಮೂಢಾಚಾರಗಳೇ ಕಾರಣ.

ಆಚರಣೆಗಳನ್ನು ೭ ಪ್ರಕಾರವಾಗಿ ವಿಂಗಡಿಸಬಹುದು. ೧. ಅನಾಚಾರ ೨. ದುರಾಚಾರ ೩. ಮೂಢಾಚಾರ ೪. ಕಂದಾಚಾರ ೫. ಶುಷ್ಕಾಚಾರ ೬. ಡಂಭಾಚಾರ ೭. ಸದಾಚಾರ. ಆಚಾರ ಎಂದರೆ ಅಳವಟ್ಟ ಕೆಲವು ನಡತೆಗಳು. ಅನಾಚಾರವೆಂದರೆ ಸ್ವೇಚ್ಛೆಯ, ನೀತಿ-ನಿಯಮಗಳಿಲ್ಲದ ಸ್ವೈರ ನಡತೆ. ನಾಲಿಗೆಗೆ ಹಿಡಿತವಿಲ್ಲದ, ಬದುಕಿನಲ್ಲಿ ನೈತಿಕ ಸೂತ್ರ, ನಿರ್ಬಂಧಗಳಿಲ್ಲದ, ಮನಸ್ಸಿಗೆ ಬಂದಂತೆ

ನಡೆದ ಸ್ವಚ್ಛಂದ ನಡೆ. ತರುಣ-ತರುಣಿಯರಲ್ಲಿ ಸ್ವಚ್ಛಂದ ಪ್ರವೃತ್ತಿ, ಭೀತಿಗೆ ಬೆಲೆ ಕೊಡದ ಅವಿವೇಕ, ಹಿರಿಯರ ಮಾತಿಗೆ ಸೊಪ್ಪು ಹಾಕದ ಉದ್ಧಟತನ, ಆಧುನಿಕತೆಯ ಸೋಗಿನಲ್ಲಿ ಕುಡಿಯುವ ಹವ್ಯಾಸ, ತನ್ನನ್ನು ತಾನು ಮಾರಿಕೊಳ್ಳುವ ಸಂಯಮ ರಹಿತ ಜೀವನ-ಇವು ಅನಾಚಾರದ ಉದಾಹರಣೆಗಳು. ಇದಕ್ಕಿಂತಲೂ ಹಾನಿಕಾರಕ ದುರಾಚಾರ. ಅನಾಚಾರಿ ತನ್ನನ್ನು ತಾನು ಹಾಳುಮಾಡಿಕೊಂಡರೆ ದುರಾಚಾರಿ ಅನ್ಯರನ್ನು ಹಾಳುಮಾಡುವವನು. ಅನ್ಯರನ್ನು ಬೆದರಿಸಿ, ದೌರ್ಜನ್ಯದಿಂದ ಘಾತಿಸಿ ತನ್ನ ಅನಾಚಾರದ ಬದುಕಿಗೆ ಆಹಾರ ನೀಡುವವನು ದುರಾಚಾರಿ. ಇಲ್ಲಿ 'ಕ್ರೌರ್ಯ'ದ ಅಂಶವಿದೆ. ಗ್ರಾಮವನ್ನು, ಸಮಾಜವನ್ನು ಆಳುವ ಮುಖಂಡರುಗಳು ತಮ್ಮ ಹೇಳಿಕೆಗೆ ತಕ್ಕಂತೆ ತಾಳಹಾಕುವವರನ್ನು ಬೇಟೆಯ ನಾಯಿಗಳಂತೆ ಮುಂದೆ ಬಿಟ್ಟು ಮುಗ್ಧರನ್ನು, ಸಾತ್ವಿಕರನ್ನು, ಸ್ವಾತಂತ್ರ್ಯ ಪ್ರಿಯರನ್ನು, ಸ್ವಾಭಿಮಾನಿಗಳನ್ನು ಬಲಿಹಾಕುವದು ದುರಾಚಾರಕ್ಕೆ ಉದಾಹರಣೆ. ಮೂಢಾಚಾರದಲ್ಲಿ ವೈಚಾರಿಕತೆಯ ದಿವಾಳಿಯಾಗಿ ಕೇವಲ ಅಂಧಃಶ್ರದ್ಧೆಗಳ ಮೇಲೆ ಬದುಕನ್ನು ನಿಲ್ಲಿಸುವ ದುರ್ಬಲ ಸಾಹಸವಿದೆ. ತಿರುಪತಿಗೆ ಹೋಗಿ ತಲೆಗೂದಲನ್ನು ಕೊಡುವ ಭಕ್ತ, "ಕೂದಲನ್ನು ತೆಗೆದುಕೊಂಡು ದೇವರೇನು ಮಾಡಿಯಾನು ? ಎಂಬುದನ್ನು ಆಲೋಚಿಸದೆ, ತಲೆಬೋಳಾಗುವುದು ಮುಖ್ಯವಲ್ಲ, ಮನವು ದುರ್ಗುಣ, ದುರಾಚಾರಗಳಿಂದ ಬೋಳಾಗುವುದು ಮುಖ್ಯ ಎಂದರಿಯದೆ ತನು ಮನಗಳನ್ನು ದಣಿಸಿ, ಧನವನ್ನು ವ್ಯಯಿಸಿ, ಪ್ರವಾಸದಲ್ಲಿ ಸುಗ್ಗಾಗಿ, ಪೂಜಾರಿಗಳೆಂಬ ಅಷ್ಟಪದಿಗಳ ಕೈಯಲ್ಲಿ ವಿಲಿವಿಲಿ ಒದ್ದಾಡಿ 'ಹೈರಾಣಾಗಿ' ಬರುವನು. ಈ ಯಾತ್ರೆಯಿಂದ ಏನು ಪ್ರಯೋಜನವಾಯಿತು. ತೀರ್ಥಯಾತ್ರೆಯ ಮೊದಲಿಗೆ ನಾನಿದ್ದುದಕ್ಕಿಂತ ಈಗ ಬದಲಾಗಿರುವೆನೆ ? ಅಂತಃಕರಣಗಳು ಪರಿಶುದ್ಧವಾದವೆ ? " ಎಂದು ಮುಂತಾಗಿ ಯೋಚಿಸದೆ ಮಾಡುವ ಕ್ರಿಯೆ ಮೂಢಾಚಾರ. ಇನ್ನೂ ಕೆಲವರು ಎಂದೋ ಉಪಯುಕ್ತವಿದ್ದು ಇಂದು ಏನೇನೂ ಪ್ರಯೋಜನವಿಲ್ಲದ ಕಠಿಣ ಮತ್ತು ನಿಷ್ಪ್ರಯೋಜಕ ಆಚರಣೆಗಳನ್ನು ಚಾಚೂ ತಪ್ಪದೆ ಪಾಲಿಸುವರು. ಇದಕ್ಕೇನು ಆಧಾರ ? ಎಂಬ ವೈಚಾರಿಕ ತರ್ಕಕ್ಕೆ ಒಂದೇ ಉತ್ತರ : "ಶಾಸ್ತ್ರಗಳಲ್ಲಿ ಹೇಳಲ್ಪಟ್ಟದೆ ಅಥವಾ ನಮ್ಮ ಪೂರ್ವಿಕರು ಅನುಸರಿಸುತ್ತಿದ್ದರು. ಅವರು ಮಾಡುತ್ತಿದ್ದುದೆಲ್ಲ ಸತ್ಯ ಮತ್ತು ಉಪಯುಕ್ತವಿರಲೇ ಬೇಕು. " ಇದು ಕಂದಾಚಾರ. ರಜಸ್ವಲೆಯಾದ ಸ್ತ್ರೀಯನ್ನು ಹೊಲತಿಯನ್ನು ಮಾಡಿ ಹೊರಗಿಕ್ಕುವುದು ; ಸ್ವಲ್ಪ ಪ್ರಗತಿ ಪರ ವಿಚಾರಧಾರೆಯ ಸ್ತ್ರೀಯು ವೈಧವ್ಯದ ನಂತರ ತಲೆ ಬೋಳಿಸಿಕೊಳ್ಳದಿದ್ದರೆ ಆಕೆಯ ಕೈಯ್ಯಿಂದ ಅನ್ನ ಸಹ ಮುಟ್ಟದಿರುವುದು ಕಂದಾಚಾರವೇ ಸರಿ. ಇನ್ನೊಂದು ಬಗೆಯದು ಶುಷ್ಕಾಚಾರ. ಅರ್ಥಸಹಿತವಾದ ಅಂಶ ಸ್ವಲ್ಪ ಇದ್ದರೂ ಅರ್ಥರಹಿತ ಹೊರೆಯೇ ಬಹಳಷ್ಟು. ದಿನಕ್ಕೆ ನಾಲ್ಕು ಬಾರಿ ಸ್ನಾನ ಮಾಡುವುದು. ಪ್ರತಿ

೩೪ ನೇ ಪುಟ ನೋಡಿ

ಶೂನ್ಯ ಸಂಪಾದನೆಯ ವೈಚಾರಿಕ ಮಹತ್ವ

—ಎಸ್. ಬಸವರಾಜು, ಎಂ. ಎ.
ಕುವೆಂಪು ಮಹಾವಿದ್ಯಾಲಯ, ಚನ್ನಪಟ್ಟಣ.

[ಹನ್ನೆರಡನೆಯ ಶತಮಾನದಲ್ಲಿ ಘಟಿಸಿದ ಐತಿಹಾಸಿಕ ಪ್ರಸಂಗ 'ಕಲ್ಯಾಣ ಕ್ರಾಂತಿ'ಯ ಫಲವಾಗಿ ವಚನಕಾರರು ನಾಡಿನ ಮೂಲೆ ಮೂಲೆಗಳಿಗೆ ಚದುರಿ ಹೋದರು. ಅಂತೆಯೇ ಅವರ ವಚನಗಳೂ ಚೆಲ್ಲಾಪಿಲ್ಲಿಯಾದವು. ಅನಂತರ ಬಂದ ಅನೇಕ ಪ್ರಜ್ಞಾವಂತರು ವಚನಕಾರರ ವಚನಗಳ ಹಿರಿಮೆ-ಗರಿಮೆಗಳನ್ನೂ, ನೆಲೆ-ಬೆಲೆಗಳನ್ನೂ ಅರಿತವರಾಗಿ, ಆ ವಚನಗಳ ಸಂಯೋಜನೆಗೆ ಹೆಣಗಿದರು. ಈ ಪ್ರಯತ್ನ ಹಂತ ಹಂತವಾಗಿ ವ್ಯವಸ್ಥಿತವಾಗಿ ನಡೆಯಿತು. ಇದರ ಫಲಶ್ರುತಿಯೇ 'ಶೂನ್ಯ ಸಂಪಾದನೆ'. ವಚನಸಾಹಿತ್ಯದ 'ಅಮೃತ ಫಲ'ವಾದ ಶೂನ್ಯ ಸಂಪಾದನೆಯನ್ನು ಹಲವು ನಿಟ್ಟುಗಳಿಂದ ಅಧ್ಯಯನ ಮಾಡುವ ಸಾಧ್ಯತೆಯಿದೆ. ಇದರ ವೈಚಾರಿಕ ಮಹತ್ವದ ಸಂಕ್ಷಿಪ್ತ ಅವಲೋಕನವೇ ಈ ಲೇಖನದ ಉದ್ದೇಶ.]

'ಶೂನ್ಯ ಸಂಪಾದನೆ' ಇದೊಂದು ವಿಚಾರಾತ್ಮಕ ಧ್ವನಿ ಸಮನ್ವಿತ ಕಾವ್ಯ ; ವಚನ ವಾಙ್ಮಯದ ರಸಘಟ್ಟಿ ; ಧರ್ಮ-ಸಾಹಿತ್ಯಗಳ ರಸಪಾಕ. ಈ ಗ್ರಂಥಕ್ಕೆ ಶರಣ ಧರ್ಮ ಕೇವಲ ಹಂದರ. ಅದರ ಅಂತಸ್ಸತ್ವ ವಿಶ್ವಧರ್ಮದ ಪರಿಪಾಕ. ಮಾನವೀಯ ಮೌಲ್ಯಗಳನ್ನು ಧಾರಣೆಮಾಡಿಕೊಂಡು ಕಾಲ-ದೇಶ-ಧರ್ಮಗಳ ಎಲ್ಲೆಯನ್ನು ಮೀರಿರುವ ಅನುಭಾವ ಪ್ರಧಾನವಾದ ಗ್ರಂಥ. ಸ್ವರೂಪದಲ್ಲಿ ಗ್ರೀಕ್ ದಾರ್ಶನಿಕ ಪ್ಲೇಟೋನ ಸಂಭಾಷಣಾ ಗ್ರಂಥಕ್ಕೆ ಸಂವಾದಿ. ಅಹಂಕಾರಾತೀತರಾಗಿ ಸಾಧನೆಯಲ್ಲಿ ಮುನ್ನಡೆದು 'ಪರಿಪೂರ್ಣ ಶೂನ್ಯ ತತ್ತ್ವ'ವನ್ನು ಪಡೆದ ಅನುಭಾವಿಗಳ ಸಾರ್ಥಕ ಜೀವನದ ಸಾಕಾರ ಸ್ವರೂಪ 'ಶೂನ್ಯ ಸಂಪಾದನೆ.'

ಶೂನ್ಯ ಸಂಪಾದನೆಗಳು ಸಂಖ್ಯೆಯಲ್ಲಿ ಐದು ಎಂಬ ವಾದವಿದ್ದರೂ, ಸದ್ಯಕ್ಕೆ ನಾಲ್ಕು ಎಂದೇ ದೃಢವಾಗಿ ಹೇಳಬಹುದು. ಮೊದಲ ಶೂನ್ಯ ಸಂಪಾದನೆಕಾರ ಶಿವಗಣ ಪ್ರಸಾದಿ ಮಹಾದೇವಯ್ಯ. ಇವನ ಕೃತಿಯಲ್ಲಿ 'ಸಿದ್ಧರಾಮನಿಗೆ ದೀಕ್ಷೆಯಿಲ್ಲ' ಎಂಬ ಕಾರಣದಿಂದ ಎರಡನೆಯದಾದ [1] ಕೆಂಚ ವೀರಣ್ಣೊಡೆಯ ಅಥವಾ

ಹಲಗೆಯಾರ್ಯನ ಸಂಪಾದನೆ ಹುಟ್ಟಿ ಕೊಂಡಿತು. ಮೇಲಾಗಿ 'ನುಲಿಯ ಚಂದಯ್ಯ'ಗಳ ಪ್ರಸಂಗ ಈ ಸಂಪಾದನೆಯಲ್ಲಿ ಮೂಲಕ್ಕೆ ಸೇರ್ಪಡೆಯಾಯಿತು. ಮುಂದೆ ಎರಡನೆಯ ಸಂಪಾದನೆಯಲ್ಲಿ 'ಸಾವಿರದೇಳನೂರು ವಚನಗಳಿಂದ' ಸುದೀರ್ಘವಾಗಿ ನಿರೂಪಿತವಾದ ಸಿದ್ಧರಾಮನ ದೀಕ್ಷಾ ಪ್ರಸಂಗವನ್ನು ಸೌಕರ್ಯದ ದೃಷ್ಟಿಗೆ ತಕ್ಕಂತೆ ಸಂಗ್ರಹವಾಗಿ ಹೇಳುವ ಉದ್ದೇಶದಿಂದ ಗುಮ್ಮಳಾಪುರದ ಸಿದ್ಧಲಿಂಗಯತಿಯ ಮೂರನೆಯ ಸಂಪಾದನೆ ಮೈದಳೆಯಿತು. ಈ ಸಂಪಾದನೆಯಲ್ಲಿ ಮೂಲದಲ್ಲಿಲ್ಲದ 'ಗೋರಕ್ಷನ ಪ್ರಸಂಗ' ಮತ್ತು 'ಆಯ್ದಕ್ಕಿ ಮಾರಯ್ಯಗಳ ಸಂಪಾದನೆ'– ಎಂಬೆರಡು ಹೊಸ ಸನ್ನಿವೇಶಗಳು ನಿರೂಪಿತವಾದವು. ಮೂರನೆಯ ಸಂಪಾದನೆಯನ್ನು ಮತ್ತಷ್ಟು ಪರಿಷ್ಕರಿಸುವ ದೃಷ್ಟಿಯಿಂದ ಗೂಳೂರು ಸಿದ್ಧವೀರಣಾರ್ಯನ ನಾಲ್ಕನೆಯ ಸಂಪಾದನೆ ರೂಪುದಳೆಯಿತು. ಜೊತೆಗೆ ಈ ಸಂಪಾದನೆಯಲ್ಲಿಯೂ ಎರಡು ಹೊಸ ಪ್ರಸಂಗಗಳು ಮೂಲ ಸಂಪಾದನೆಗೆ ಜೊತೆ ಗೂಡಿದವು. ಅವೆಂದರೆ 'ಮೋಳಿಗೆ ಮಾರಯ್ಯ' ಮತ್ತು 'ಘಟ್ಟಿವಾಳಯ್ಯ'ನ ಸಂಪಾದನೆಗಳು. ಮೇಲಾಗಿ ಮೇಲಿನ ಮೂವರು ಶೂನ್ಯ ಸಂಪಾದನೆಕಾರರಿಗಿಂತ ಹೆಚ್ಚು ವ್ಯವಸ್ಥೆ ಮತ್ತು ಪರಿಷ್ಕರಣ ದೃಷ್ಟಿಯನ್ನು ಸಿದ್ಧವೀರಣಾರ್ಯನಲ್ಲಿ ಕಾಣುತ್ತೇವೆ. ಆ ಕಾರಣದಿಂದಲೇ ಮೊದಲ ಮೂರು ಸಂಪಾದನೆಗಳಿಗಿಂತ, ಇವನ ಸಂಪಾದನೆಯೇ ಜನಜನಿತ ಹಾಗೂ ಜನಪ್ರಿಯವಾಗಿದೆ. ಹೀಗೆ ಶೂನ್ಯ ಸಂಪಾದನೆ ಮೇಲಿಂದ ಮೇಲೆ ಪರಿಷ್ಕರಣವನ್ನು ಪಡೆಯುತ್ತಾ ಬಂದು; ಸಂಪಾದನೆಕಾರರ ಎರಡೆರಡು ಕಾಣಿಕೆಗಳನ್ನು ಕೂಡಿಸಿಕೊಳ್ಳುತ್ತಾ ಬಂದು, ಗೂಳೂರು ಸಿದ್ಧವೀರಣಾರ್ಯನಲ್ಲಿ ಪರಿಪೂರ್ಣತೆಯನ್ನು ಪಡೆದಿದೆ.

'ಶೂನ್ಯ'ವೆಂದರೆ ಏನೂ ಇಲ್ಲವೆಂದಲ್ಲ. ಶರಣ ಧರ್ಮದ ಪರಿಭಾಷೆಯಲ್ಲಿ ಅದು ಎಲ್ಲವನ್ನೂ ಒಳಗೊಂಡ 'ಪರಿಪೂರ್ಣ ತತ್ತ್ವ'. ಆ ಪರಿಪೂರ್ಣ ತತ್ತ್ವವನ್ನು ಪಡೆಯುವುದೇ ಅಥವಾ ಅದರೊಂದಿಗೆ ಸಮರಸಗೊಳ್ಳುವುದೇ 'ಶೂನ್ಯ-ಸಂಪಾದನೆ'. ಶರಣರಿಗೂ ಪೂರ್ವದಿಂದ ಶೂನ್ಯ ತತ್ತ್ವದ ವಿವೇಚನೆ ಬೌದ್ಧ ಧರ್ಮದಲ್ಲಿ ಕಂಡು ಬರುತ್ತದೆ. ಆದರೆ ಅಲ್ಲಿ ಅದು 'ನಿಷೇಧಾತ್ಮಕ' (Negative) ಅರ್ಥವನ್ನು ಪಡೆದಿದೆ. ಆದರೆ ಶರಣರು ಅದನ್ನು 'ವಿಧಾಯಾತ್ಮಕ' (Positive) ಅರ್ಥದಲ್ಲಿ ಬಳಸಿಕೊಂಡಿದ್ದಾರೆ. ಶೂನ್ಯ ಸಂಪಾದನೆ ಹನ್ನೆರಡನೆಯ ಶತಮಾನದ ವಚನಕಾರರ ವಚನಪುಷ್ಪಗಳಿಂದ ಕಟ್ಟಿದ ಹೂಮಾಲೆ. ಅಂದರೆ ಶರಣರ ವಚನಗಳೇ ಈ ಕೃತಿಯ ಬಂಡವಾಳ. ಉಪಲಬ್ಧವಿದ್ದ ವಚನಗಳ ಆಧಾರದ ಮೇಲೆ 'ಅನುಭವ ಮಂಟಪ'ದ ಕಾರ್ಯಾಚರಣೆಯ ಕಲ್ಪನೆಯ ಮೇಲೆ ನಡೆದಿರಬಹುದಾದ ಪ್ರಸಂಗಗಳನ್ನು ಊಹಿಸಿ, ವಚನಗಳನ್ನು ಸಂಭಾಷಣೆಯ ರೂಪದಲ್ಲಿ ಹೆಣೆದಿರುವ ಶೂನ್ಯ ಸಂಪಾದನೆಕಾರರ

ಜಾಣ್ಮೆ ಮೆಚ್ಚತಕ್ಕದ್ದು. ಶೂನ್ಯ ಸಂಪಾದನೆಗೆ 'ಶೂನ್ಯ ಸಿಂಹಾಸನಾಧೀಶ್ವರ'ನಾದ, 'ಜ್ಞಾನ ಮೂರ್ತಿ'ಯಾದ, ಅನುಭವಮೇರುವಾದ ಅಲ್ಲಮ ಪ್ರಭುವೇ ಕೇಂದ್ರವ್ಯಕ್ತಿ – ಚಾಲಕಶಕ್ತಿ. ಉಳಿದೆಲ್ಲಾ ಅನುಭಾವಿಗಳ ಜೀವನ ಚಕ್ರ; ಆ ಕೇಂದ್ರ ವ್ಯಕ್ತಿಯ ಸುತ್ತಲೂ ಸುತ್ತುತ್ತಾ ಹೋಗುವುದನ್ನು ಹಾಗೂ ಅವರ ಸಾಧನೆಯ ಸೂತ್ರ ಆ ಹಿರಿಯ ಅನುಭಾವಿಯಿಂದ ಪ್ರತ್ಯಕ್ಷವಾಗಿಯೋ, ಪರೋಕ್ಷವಾಗಿಯೋ ನಿಯಂತ್ರಿತವಾಗಿರುವುದನ್ನು ಶೂನ್ಯ ಸಂಪಾದನೆಯುದ್ದಕ್ಕೂ ನೋಡುತ್ತಾ ಹೋಗುತ್ತೇವೆ. ಇದರೊಂದಿಗೆ ಬಸವಣ್ಣನವರ ಧಾರ್ಮಿಕ ಜೀವನವೂ ಸಂಲಗ್ನವಾಗಿರುವುದನ್ನು ಕಾಣುತ್ತೇವೆ.

ಶೂನ್ಯ ಸಂಪಾದನೆ ವಿಭಿನ್ನಕಾಯಕದ, ವಿಭಿನ್ನಮನೋಧರ್ಮದ ಶರಣರ ಸಂಗಮ ಕ್ಷೇತ್ರ. ಸಮಾಜದ ಸರ್ವಾಂಗೀಣ ಉನ್ನತಿಯನ್ನು ಬಯಸಿನಿಂತ ಬಸವಣ್ಣ, ಗುರುಕರುಣೆಗಾಗಿ ಹಂಬಲಿಸುವ ಮುಕ್ತಾಯಕ್ಕ, 'ಕರ್ಮಯೋಗ'ವೇ ಸಾಧನೆಯ ಪರಮಗಂತವ್ಯವೆಂದು ತಿಳಿದ ಸಿದ್ಧರಾಮ, ಲೋಕದ ಕಣ್ಣಿಗೆ 'ಮರುಳಂತೆ' ಕಂಡರೂ ಒಳಗೊಳಗೆ ಸಮರಸ ಭಕ್ತಿಯಿಂದ ಕೂಡಿ 'ಮಹಾಲಿಂಗೈಕ್ಯ' ಸ್ಥಿತಿಯನ್ನು ಮುಟ್ಟಿದ್ದ ಮರುಳ ಶಂಕರ ದೇವ, 'ಸಾವಿಲ್ಲದ ಕೇಡಿಲ್ಲದ ರೂಹಿಲ್ಲದ ಭವವಿಲ್ಲದ ಭಯವಿಲ್ಲದ ನಿರ್ಭಯದ ಚೆಲುವಂಗೊಲಿದು – ಮಿಕ್ಕಿನ ಲೋಕದ ಗಂಡರೆನಗೆ ಸಂಬಂಧವಿಲ್ಲವಯ್ಯಾ, – ಎಂಬ ದೃಢ ನಿಷ್ಠೆಯ ಮಹಾದೇವಿಯಕ್ಕ, ಬಟ್ಟೆಗಳ ಮಲಿನತೆಯನ್ನು ಹೋಗಲಾಡಿಸಿ ಮಡಿ ಮಾಡುವ ಬಾಹ್ಯದ ಕಾಯಕದೊಂದಿಗೆ ಮನದ ಮೈಲಿಗೆಯನ್ನು ತೊಳೆದ ಸತ್ಯ ಶುದ್ಧ ಆಧ್ಯಾತ್ಮಿಕ ಕಾಯಕದ ಮಡಿವಾಳ ಮಾಚಯ್ಯ, 'ಜಂಗಮದಾಸೋಹವೇ ಪರಮಪದ'ವೆಂದು ತಿಳಿದ ನುಲಿಯಚಂದಯ್ಯ, ಲೌಕಿಕ ಜೀವನದಲ್ಲಿ ಹೇಗೋ ಆಧ್ಯಾತ್ಮಿಕ ಜೀವನದಲ್ಲೂ ಹಾಗೆಯೇ ತಮ್ಮ ತಮ್ಮ ಗಂಡಂದಿರಿಗೆ ಊರು ಗೋಲಾಗಿ – ಅವರ ವಿವೇಕ ಮಂಕಾದಾಗ ಆ ಮಂಕಿನ ತೆರೆಯನು ಸರಿಸಿ ಸಾಧನಾಪಥದಲ್ಲಿ ಕೈಹಿಡಿದು ಕರೆದೊಯ್ಯುವ ಲಕ್ಕಮ್ಮ ಮತ್ತು ಮಹಾದೇವಮ್ಮ; ತೋರಿಕೆಯ ಭಕ್ತರನ್ನು ಕಂಡು ಸಾತ್ತ್ವಿಕ ಸಿಡುಕನ್ನು ಕಾರುವ ಘಟ್ಟಿವಾಳಯ್ಯ – ಮುಂತಾದವರ ಅನುಭಾವದ ಅಪೂರ್ವದರ್ಶನ ನಮಗಿಲ್ಲಿ ಆಗುತ್ತದೆ. ಅವರಲ್ಲಿರುವ ಅರೆ-ಕೊರೆಗಳನ್ನು ಕಂಡು, ಅವರ ಓರೆ-ಕೋರೆಗಳನ್ನು ತಿದ್ದಿ, ಅವರ ಸಾಧನೆಗೆ ಸಮಗ್ರತೆಯನ್ನು ತಂದು ಕೊಡುತ್ತಾನೆ ಅಲ್ಲಮ ಪ್ರಭು. ಅವರಲ್ಲಿ ಮೇಲು-ಕೀಳೆಂಬ ಭೇದವಿಲ್ಲ. ಸ್ಪೃಶ್ಯ-ಅಸ್ಪೃಶ್ಯರೆಂಬ ಭಾವವಿಲ್ಲ. ಧನಿಕ-ದಲಿತರೆಂಬ ತಾರತಮ್ಯವಿಲ್ಲ. ಹೆಣ್ಣು – ಗಂಡೆಂಬ ಸಣ್ಣತನವಿಲ್ಲ – ಸಂಕೋಚವಿಲ್ಲ – ಕೀಳರಿಮೆಯೂ ಇಲ್ಲ - ಮೇಲರಿಮೆ ಮೊದಲೇ ಇಲ್ಲ. ಅವರು ವೇದದ ಮಾತುಗಳನ್ನು ಒಲ್ಲೈಸಿದವರಲ್ಲ. ಶಾಸ್ತ್ರದ ಮಾತುಗಳಿಗೆ ಶರಣಾದವರಲ್ಲ. ಅನುಭವದ ಮಾತುಗಳಿಗೆ ಮನ್ನಣೆ

ಕೊಟ್ಟವರು. ಯಾರಲ್ಲಿಯೇ ಅಹಂಕಾರ ತಲೆದೋರಲಿ ಅದನ್ನು ನಿರ್ದಾಕ್ಷಿಣ್ಯವಾಗಿ ಖಂಡಿಸಿದವರು. ಅವರೆಲ್ಲಾ 'ಸಂಗದಿಂದಲ್ಲದೆ ಅಗ್ನಿ ಹುಟ್ಟದು' – ಎಂಬುದನ್ನು ಮನಗಂಡು ಶರಣರ ಅನುಭಾವ ಸಂಗದಿಂದ ಆತ್ಮ ಶಕ್ತಿಯನ್ನು ದೀಪ್ತಗೊಳಿಸಿಕೊಂಡು, ಅರೆ–ಕೊರೆಗಳನ್ನು ತುಂಬಿಕೊಂಡು ನಿತ್ಯಸುಖಿ-ಪರಮಸುಖಿಯಾದವರು. ಅವರು ವಿಚಾರ ಸ್ವಾತಂತ್ರ್ಯವುಳ್ಳವರೇ ವಿನಾ ವಿಚಾರ ವಿಧೇಯರಲ್ಲ. ಅವರೆಂದಿಗೂ 'ಪ್ರಾಯದ ಪೆಂಪಿಗೆ' ಮನ್ನಣೆ ಕೊಟ್ಟವರಲ್ಲ. "ಕಿರಿಯರಾದಡೇನು? ಹಿರಿಯರಾದಡೇನು ? ಅರಿವಿಂಗೆ ಹಿರಿದು ಕಿರಿದುಂಟೇ?" ಎಂಬುದನ್ನು ಅನುಭವದಿಂದ ಕಂಡು ಕೊಂಡವರು. ಅಲ್ಲಿ ತಪ್ಪು ಮಾಡಿದರೆ ತಿದ್ದುವವರಿದ್ದರು. ದಾರಿ ತಪ್ಪಿದರೆ ಮಾರ್ಗ ತೋರುವವರಿದ್ದರು. ಎಲ್ಲಕ್ಕೂ ಮಿಗಿಲಾಗಿ ಅವರಲ್ಲಿ ಸತ್ಯ-ಶ್ರದ್ಧೆ-ನಿಷ್ಠೆಗಳಿದ್ದವು. ಅವರು ನಡೆದಂತೆ ನುಡಿದವರು. ನುಡಿದಂತೆ ನಡೆದವರು. ನಡೆ-ನುಡಿಗಳೊಂದಾದವರು. "ನಡೆ - ನುಡಿ ಶುದ್ಧವಿಲ್ಲದಿದ್ದರೆ ಈಶ್ವರ ಲಿಂಗವಾದರೂ ತಪ್ಪನೊಳಕೊಳ್ಳದವರು" ಸತ್ಯ-ಶುದ್ಧ ಕಾಯಕದವರು. "ಕಾರೆಯ ಸೊಪ್ಪಾದರೂ ಕಾಯಕದಿಂದ ಬಂದುದು ಲಿಂಗಕ್ಕರ್ಪಿತವಲ್ಲದೆ ದುರಾಶೆಯಿಂದ ಬಂದುದು ಅನರ್ಪಿತ" –ಎಂದು ನುಡಿದು, ಅದರಂತೆ ನಡೆದವರು. ಕಾಯಕದ ಪವಿತ್ರ ಅರ್ಥವನ್ನು ಕಂಡುಕೊಂಡವರು. 'ಕಾಯಕವೇ ಕೈಲಾಸ'ವೆಂದು ತೋರಿಕೊಟ್ಟವರು. ಅವರೆಂದಿಗೂ "ಕಾಯಕವೆಂದು ದಾಯಗಾರಿಕೆಯಲ್ಲಿ ತಂದು ದಾಸೋಹವ ಮಾಡಿದವರಲ್ಲ, ಒಮ್ಮನದಿ ತಂದು ಒಮ್ಮನದಲ್ಲಿಯೇ ಮಾಡಿ ಇಮ್ಮನವಾಗದ ಮುನ್ನವೇ ಲಿಂಗಕ್ಕೆ ಅರ್ಪಿಸಿ" ಕೃತಾರ್ಥರಾದವರು. ಅವರು ಎಂದೂ ನಾಳೆಗೆಂದು ಬಚ್ಚಿಟ್ಟವರಲ್ಲ. ಹಾಗೆ ಬಚ್ಚಿಡುವುದು ಅವರ ಕಾಯಕ ತತ್ತ್ವಕ್ಕೆ ಹೊರಗು. ಅವರು ಅಂದಂದಿನ ಕಾಯಕವ ಅಂದಂದು ಮಾಡಿ ಶುದ್ಧರಾದವರು. ಇದಕ್ಕೆ ಒಂದು ಜ್ವಲಂತ ನಿದರ್ಶನ –ಆಯ್ದಕ್ಕಿ ಮಾರಯ್ಯನೆಂಬೊಬ್ಬ ಶರಣ ಅಲ್ಲಲ್ಲಿ ಚೆಲ್ಲಿದ ಅಕ್ಕಿಯನ್ನು ಆರಿಸಿ ತರುವುದೇ ಅವನ ಕಾಯಕ. ಆಯ್ದು ತಂದ ಅಕ್ಕಿಯೇ ಅವನ ಜೀವನಾಧಾರ. ಒಮ್ಮೆ ಮಾರಯ್ಯ ಅನುಭವ ಮಂಟಪದಲ್ಲಿ ಶರಣರ ಅನುಭಾವ ಗೋಷ್ಠಿಯಲ್ಲಿರುತ್ತ, ತನ್ನ ಕಾಯಕವನ್ನು ಮರೆತಿರುತ್ತಾನೆ. ಪತ್ನಿ ಲಕ್ಕಮ್ಮ ಬಂದು ಎಚ್ಚರಿಸುತ್ತಾಳೆ. ಆತುರದಲ್ಲಿ ಕಾಯಕಕ್ಕೆ ಹೋದ ಮಾರಯ್ಯ ಎಂದಿಗಿಂತ ಅಂದು ಹೆಚ್ಚಿನ ಅಕ್ಕಿಯನ್ನು ಆರಿಸಿ ತರುತ್ತಾನೆ. ಅದನ್ನು ಕಂಡ ಲಕ್ಕಮ್ಮ ,. ತನ್ನ ಗಂಡನನ್ನು ಕುರಿತು–

ಆಸೆಯೆಂಬುದು ಅರಸಿಂಗಲ್ಲದೆ ಶಿವಭಕ್ತರಿಗುಂಟೇ ಅಯ್ಯಾ ?

ರೋಷವೆಂಬುದು ಯಮದೂತರಿಗಲ್ಲದೆ ಅಜಾತರಿಗುಂಟೇ ಅಯ್ಯಾ ?

ಈಸಕ್ಕಿಯಾಸೆ ನಿಮಗೇಕೆ? ಈಶ್ವರನೊಪ್ಪ

ಮಾರಯ್ಯ ಪ್ರಿಯ ಅಮರೇಶ್ವರ ಲಿಂಗಕ್ಕೆ ದೂರ ಮಾರಯ್ಯ.

ಎನ್ನುತ್ತಾಳೆ. ಮುಂದುವರಿದು "ಒಮ್ಮನವಮೀರಿ ಇಮ್ಮನದಲ್ಲಿ ತಂದಿರಿ. ಮಾರಯ್ಯ ಪ್ರಿಯ ಅಮರೇಶ್ವರ ಲಿಂಗಕ್ಕೆ ಸಲ್ಲದ ಬೋನ–ಅಲ್ಲಿಯೇ ಸುರಿದು ಬನ್ನಿ" ಎನ್ನುತ್ತಾಳೆ. ಪತ್ನಿಯ ಬುದ್ಧಿಯ ಮಾತುಗಳಿಗೆ ಮನ್ನಣೆ ಕೊಟ್ಟು ಮಾರಯ್ಯ, ಹೆಚ್ಚಿನ ಅಕ್ಕಿಯನ್ನು ಎಲ್ಲಿ ಆರಿಸಿತಂದಿದ್ದನೋ, ಅಲ್ಲಿಯೇ ಸುರಿದು ಬರುತ್ತಾನೆ.

ಆಯ್ದಕ್ಕಿ ಮಾರಯ್ಯನ ದೃಷ್ಟಾಂತ ಶರಣರ ಸತ್ಯ ಶುದ್ಧ ಕಾಯಕಕ್ಕೆ ಉತ್ತಮ ನಿದರ್ಶನವಾಗಿದೆ. "ಜೀವನಾಧಾರವಾದ ಅಕ್ಕಿಯು ಕಾಳಿನಲ್ಲಿ ಪವಿತ್ರತೆಯನ್ನೇ ಗುರುತಿಸಿ, ಅದು ವ್ಯರ್ಥವಾಗಿ ಚೆಲ್ಲಬಾರದು, ಲಿಂಗ-ಜಂಗಮಕ್ಕುಣಿಸಾಗಬೇಕು"– ಎಂಬುದು ಮಾರಯ್ಯನ ಮನೋಧರ್ಮ, ಅವನ ಕಾಯಕದ ನೆಲೆಗಟ್ಟು. "ನಾಳೆಗೆಂದು ಆಹಾರವನ್ನು ಸಂಗ್ರಹಿಸುವುದು ಬೇರೆಯವರ ಅನ್ನವನ್ನು ಕಸಿದುಕೊಂಡಂತೆ. ನಾವು ಅಂದಂದಿನ ಅನ್ನಕ್ಕೆ ಮಾತ್ರ ಹೊಣೆಗಾರರು. ಅಂದಂದಿನ ಕಾಯಕವ ಅಂದಂದು ಮಾಡಿ ಶುದ್ಧರಾಗಬೇಕು"–ಎಂಬುದು ಶರಣೆ ಲಕ್ಕಮ್ಮನ ಧೋರಣೆ. ಶರಣರು ಬಹು ಹಿಂದೆ ಬಾಳಿದವರಾದರೂ, ಅವರ ದೃಷ್ಟಿ ಬಲು ಮುಂದಿತ್ತು. ಆರ್ಥಿಕ ಅಸಮಾನತೆಯಿಂದ ನೊಂದು ಬೆಂದು ಹೋಗಿರುವ ನಮ್ಮ ಸಮಾಜದಲ್ಲಿ ಶರಣರ ಈ ಉದಾತ್ತವಾದ ಕಾಯಕ ನಿಷ್ಠೆ ಕೃತಿಗಿಳಿಯಲು ಸಾಧ್ಯವೇ ? ಇಳಿದಲ್ಲಿ ಕಲ್ಯಾಣರಾಜ್ಯದ ಕನಸು ನನಸಾದೀತು.

'ಹೆಣ್ಣು ಸ್ವಾತಂತ್ರ್ಯಕ್ಕೆ ಅರ್ಹಳಲ್ಲ – ಆಕೆಗೆ ವೇದಾಧಿಕಾರವಿಲ್ಲ' ಎಂಬುದು ವೈದಿಕ ಧರ್ಮದ ಧೋರಣೆ. 'ಹೆಣ್ಣು ಮೋಕ್ಷಕ್ಕೆ ದೂರಳಾದವಳು' ಎಂಬುದು ಜೈನ ಧರ್ಮದ ವಾದ. ಪಾಶ್ಚಾತ್ಯರ ದೃಷ್ಟಿಯೂ ಇದಕ್ಕೆ ಭಿನ್ನವೇನಲ್ಲ. 'ಬೈಬಲ್'ನಲ್ಲಿ ಸ್ತ್ರೀಯನ್ನು 'ಎಲ್ಲ ರೀತಿಯ ಅನರ್ಥ – ಅಹಿತಗಳ ಮೂಲ' (Root of all Evils) ಎನ್ನಲಾಗಿದೆ. ಸುಮಾರು ೧೪೦೦ ವರ್ಷಗಳ ಹಿಂದೆ ಸೇರಿದ್ದ ಕ್ರೈಸ್ತ ಧರ್ಮ ಸಂಘವೊಂದರಲ್ಲಿ 'ಸ್ತ್ರೀಗೆ ಆತ್ಮವೇ ಇಲ್ಲ'ವೆಂದು ತೀರ್ಮಾನಿಸಿದ್ದಂತೆ ತಿಳಿದು ಬರುತ್ತದೆ. ಭಗವಾನ್ ಶಂಕರಾಚಾರ್ಯರಂತಹವರೇ 'ನಾರಿ ನರಕಕ್ಕೆ ದಾರಿ' ಎಂದಿದ್ದಾರೆ ಎಂದಮೇಲೆ ಹೇಳುವುದೇನಿದೆ. ಈ ಎಲ್ಲ ಹೇಳಿಕೆಗಳು ಹೆಣ್ಣಿನ ಒಂದು ಮುಖವನ್ನು ಕುರಿತು. ಅವಳ ಮತ್ತೊಂದು ಮುಖದ ದರ್ಶನವನ್ನು ಶರಣರು ನಮಗೆ ಮಾಡಿ ಕೊಟ್ಟಿದ್ದಾರೆ. "ಹೆಣ್ಣು ಪ್ರತ್ಯಕ್ಷ ಕಪಿಲಸಿದ್ಧ ಮಲ್ಲಿಕಾರ್ಜುನ" ಎಂದು ತೋರಿಕೊಟ್ಟಿದಾರೆ. ಸಾಧನಾಪಥದಲ್ಲಿ ಸತಿಯಿಂದಲೇ ಮಾರ್ಗದರ್ಶನವನ್ನು ಪಡೆದು, 'ಸಮರಸ' ನಿಲುವಿಗೇರಿದ್ದಾರೆ. ಶೂನ್ಯ ಸಂಪಾದನೆಯಿಂದ ಇದಕ್ಕೊಂದು ಉಜ್ವಲ ದೃಷ್ಟಾಂತ-ಕಾಶ್ಮೀರದ ಮಹಾದೇವ ಭೂಪಾಲ ಬಸವಣ್ಣನವರ ಕ್ರಾಂತಿಗೆ ಮನಸೋತು, ಅವರ ಕಾಯಕ ತತ್ತ್ವಕ್ಕೆ ಮೈಜೋತು ಮಡದಿ

ಮಹಾದೇವಮ್ಮನೊಂದಿಗೆ ಕಲ್ಯಾಣಕ್ಕೆ ಬಂದು, ಕಾಡಿನಿಂದ ಸೌದೆಯನ್ನು ಹೊತ್ತು ತಂದು ಮಾರಿ ಜೀವಿಸುವ ಕಾಯಕವನ್ನು ಕೈಗೊಂಡು 'ಮೋಳಿಗೆ ಮಾರಯ್ಯ' ನಾಗುತ್ತಾನೆ. ಈತನಿಗೆ ಒಮ್ಮೆ 'ಲಿಂಗೈಕ್ಯ'ನಾಗಬೇಕೆಂಬ ಉತ್ಕಟೇಚ್ಛೆಯುಂಟಾಗುತ್ತದೆ. ಅದನ್ನು ಕಂಡು ಮಹಾದೇವಮ್ಮ–

"ಅದೇತಕ್ಕಯ್ಯ ಶಿವನೊಳಗೆ ಕೂಟಸ್ಥನಾದಹೆನೆಂಬ ಹಲುಬಾಟ
ಇದು ಭಕ್ತಿ ಸತ್ಯದ ಆಟವಲ್ಲ: ಇನ್ನಾರ ಕೇಳಿ ಮತ್ತಿನ್ನಾರಿಗೆ ಹೇಳಿ,
ನೀ ಮಾಡುವ ಮಾಟ, ಮುನ್ನ ನೀನಾರೆಂದಿದ್ದೆ ಹೇಳಾ ?
ಆ ಭಾವವನರಿದು ನಿನ್ನ ನೀನೇ ತಿಳಿ" ಎನ್ನುತ್ತಾಳೆ.

ಮುಂದುವರಿದು "ಸಕಲ ದೇಶ-ಕೋಶವಾಸ ಭಂಡಾರ ಸವಾಲಕ್ಷ ಮುಂತಾದ ಸಂಬಂಧ ಸ್ತ್ರೀಯರ ಬಿಟ್ಟು ಬಂದಿಹೆನೆಂಬ ಕೈ ಕೂಲಿಯೇ ನಿಮ್ಮ 'ಭಕ್ತಿ'?—"ನಿಮ್ಮ ಅರಿವಿಂಗೆ ಇದಿರಲ್ಲಿ ಕೂಡಿಹೆನೆಂಬ ಭಿನ್ನಭಾವ ಉಂಟೆ ಅಯ್ಯಾ? ಕರ್ಪುರದ ಅರಣ್ಯದ ಕಿಚ್ಚು ಹತ್ತಿ ಬೆಂದಲ್ಲಿ ಭಸ್ಮ-ಇದ್ದಿತೆಂದು ಲಕ್ಷಿಸಲುಂಟೇ ? ನಿಮ್ಮ ಭಾವವ ನಿಮ್ಮಲ್ಲಿಗೆ ತಿಳಿದು ಕೊಳ್ಳಿ"—ಎಂದು ತನ್ನ ಪತಿಗೆ ಉಪದೇಶಮಾಡುತ್ತಾಳೆ. "ಲಿಂಗಾಂಗ ಸಾಮರಸ್ಯ"ದ ಸುಸೂಕ್ಷ್ಮ ಅನುಭವವನ್ನು ತನ್ನ ಪತಿಗೆ ಮನಗಾಣಿಸಿಕೊಡುತ್ತಾಳೆ. "ಐಕ್ಯ ಸ್ಥಿತಿಯೆಂದರೆ ಲಿಂಗವನ್ನು ಬಾಹ್ಯದಲ್ಲಿ ಬೆರೆಯುವುದಲ್ಲ – ಉರಿಉಂಡ ಕರ್ಪುರದಂತೆ ಅಹಂಕಾರ ನಿರಸನವನ್ನು ಸಾಧಿಸಿ ಕ್ರಮೇಣ ಅಂಗ ಭಾವವಳಿದು ಬಯಲಾಗುವುದು" – ಎಂದು ಒಳತಾಗುವಂತೆ ಹೇಳುತ್ತಾಳೆ. ಮತ್ತೂ ಮುಂದುವರಿದು—

ಕೈಯಲ್ಲಿ ಜ್ಯೋತಿಯ ಹಿಡಿದು. ಕತ್ತಲೆ ಎನ್ನಲೇತಕ್ಕೆ?
ಪರುಷರಸ ಕೈಯಲ್ಲಿದ್ದು ಕೂಲಿಯ ಮಾಡಲೇತಕ್ಕೆ?
ಕ್ಷುತ್ತು ನಿವೃತ್ತಿಯಾದವಂಗೆ ಕಟ್ಟೋಗರದ ಹೊರೆಯ ಹೊರಲೇತಕ್ಕೆ?
ನಿತ್ಯ-ಅನಿತ್ಯವ ನೀ ತಿಳಿದು, ಮರ್ತ್ಯ-ಕೈಲಾಸವೆಂಬುದು ಭಕ್ತರಿಗೆ ಯುಕ್ತಿಯಲ್ಲ
ನಿಶ್ಚಯವ ತಾನರಿತು ಅತ್ತಣ ಇತ್ತಣ ಗೊತ್ತು ನಿಶ್ಚಯವಾಗಿ ನಿಂದಲ್ಲಿ
ಆ ಬಚ್ಚ ಬಯಲ ಬೆಳಗ ನಿನ್ನ ನೀನೇ ನೋಡಿಕೋ ಎನ್ನಯ್ಯ
ಪ್ರಿಯ ಇಮ್ಮಡಿ ನಿಃಕಳಂಕ ಮಲ್ಲಿಕಾರ್ಜುನನಲ್ಲಿ /

–ಎಂದು ಮಾರಯ್ಯನ ಮರವೆಯ ತೆರೆ ಸರಿಯುವಂತೆ, ಅವನೊಳಗೆ ವಿವೇಕದ ಬೆಳಕು ಬೆಳಗುವಂತೆ ಮಹಾದೇವಮ್ಮ ನುಡಿಯುತ್ತಾಳೆ. ಆಗ ಮಾರಯ್ಯನಿಗೆ ತನ್ನ ಸತಿಯ ಸಾಧನೆಯು ಅರಿವಾಗುತ್ತದೆ. ಅವಳ ಅನುಭವದ ನಿಲುವಿಗೆ ಬೆರಗಾಗಿ, ಶರಣಾಗಿ ತನ್ನ ಮುಂದಿನ ಸಾಧನೆಗೆ ಅವಳೇ ಮಾರ್ಗದರ್ಶಕಳೆಂದು ಭಾವಿಸುತ್ತಾನೆ. ಅಳಿದುಳಿದ ಸಂಶಯಗಳನ್ನೂ ಅವಳ ಮುಂದಿಟ್ಟು ನಿವಾರಿಸಿಕೊಳ್ಳುತ್ತಾನೆ. ಅರೆ-ಕೊರೆಗಳನ್ನು ತುಂಬಿಕೊಳ್ಳುತ್ತಾನೆ–ಪರಿಪೂರ್ಣತೆಗೇರುತ್ತಾನೆ.

ನಿರ್ಣಾಯಕವಾಗಿ, ಶೂನ್ಯಸಂಪಾದನೆ ತನ್ನ ವೈಚಾರಿಕತೆಯಿಂದಲೂ, ಮೌಲ್ಯಗಳಿಂದಲೂ ದೇಶ–ಕಾಲ–ಧರ್ಮಾತೀತವಾಗಿ, ವಿಶ್ವದ ಯಾವುದೇ ಉತ್ಕೃಷ್ಟ ಸಾಹಿತ್ಯಕ್ಕೆ ಸರಿಸಾಟಿಯಾಗಿ, ಹೆಗಲೆಣೆಯಾಗಿ, ಹೊಯ್‌ಕಯ್ಯಾಗಿ ನಿಲ್ಲ ಬಲ್ಲದ್ದಾಗಿದೆ. ಅಲೌಕಿಕಾನುಭವವನ್ನು ಆಡುನುಡಿಯಲ್ಲಿ ಹಿಡಿದಿಟ್ಟು ಕೊಂಡಿದೆ. ಸಾಹಿತ್ಯಿಕ ಸೊಬಗನ್ನೂ, ಮಹಾಕೃತಿಗೆ ಬೇಕಾದ ಮಹತ್ತು–ಬೃಹತ್ತುಗಳನ್ನೂ ಒಳಗೊಂಡು ಕನ್ನಡ ಸಾಹಿತ್ಯದ ಅಪೂರ್ವ ಹಾಗೂ ವಿಶಿಷ್ಟ ಕೃತಿಯಾಗಿದೆ. ಅಂದಿಗೂ, ಎಂದೆಂದಿಗೂ ನಿಲ್ಲ ಬಲ್ಲ ಗ್ರಂಥವಾಗಿದೆ.

[ದಿ. ೨೩-೭-೭೮ರಂದು ರಾಮನಗರದಲ್ಲಿ ಜರುಗಿದ ಸಾಹಿತ್ಯ ಗೋಷ್ಠಿಯಲ್ಲಿ ಓದಿದ ಪ್ರಬಂಧ]

೧ ಕೆಂಚ ವೀರಣ್ಣೊಡೆಯ ಮತ್ತು ಹಲಗೆಯಾರ್ಯರ ಸಂಪಾದನೆಗಳು ಬೇರೆ ಬೇರೆ ಎನ್ನುವುದು, 'ಶೂನ್ಯ ಸಂಪಾದನೆಗಳು ಐದು' ಎನ್ನುವವರವಾದ. ಇವರ ಪ್ರಕಾರ ಹಲಗೆಯಾರ್ಯನ ಕೃತಿ ಸಂಖ್ಯೆಯಲ್ಲಿ ಮಾತ್ರವಲ್ಲದೆ, ಕಾಲದ ದೃಷ್ಟಿಯಿಂದಲೂ ಕೊನೆಯ ಸಂಪಾದನೆ. ಹಲಗೆಯಾರ್ಯನ ಶಿಷ್ಯನಾದ ಕೆಂಚ ವೀರಣ್ಣೊಡೆಯ (೧೪೯೫) ನ ಸಂಪಾದನೆ ಸಂಖ್ಯೆಯಲ್ಲಿ ಮತ್ತು ಕಾಲದಲ್ಲಿ ಎರಡನೆಯದು. ಹೀಗಿರುವಾಗ ಗುರು ಹಲಗೆಯಾರ್ಯ (೧೫೨೦) ನ ಸಂಪಾದನೆ ಕೊನೆಯದು ಎನ್ನುವುದು ಹಾಸ್ಯಾಸ್ಪದವಾಗುತ್ತದೆ. ಮೇಲಾಗಿ ಸಿಕ್ಕದೇ ಇರುವ ಹಲಗೆಯಾರ್ಯನ ಕೃತಿಯ ಬಗ್ಗೆ ವಾದವೂ ಅನುಪಯುಕ್ತ. ಸದ್ಯಕ್ಕೆ 'ಒಂದೇ ಕೃತಿ ಗುರು–ಶಿಷ್ಯರಿಬ್ಬರ ಹೆಸರಿನಲ್ಲಿಯೂ ಪ್ರಚಲಿತವಲ್ಲಿದೆ' ಎಂಬ ಬಹುಮಂದಿ ವಿದ್ವಾಂಸರ ಸ್ವೀಕೃತ ಅಭಿಪ್ರಾಯವೇ ಸ್ವೀಕಾರ ಯೋಗ್ಯ.

o — o

ಗೀತಾಮೃತ

ಅಧ್ಯಾಯ-೨

ಸ್ವಾಮಿ ಶಂಕರಾನಂದ.

ಸಾಂಖ್ಯಯೋಗಃ

ಆತ್ಮೀಯರೆ !

ನಿಮ್ಮೆಲ್ಲರ ಶುದ್ಧವಾದ ಬುದ್ಧಿಯಲ್ಲಿ ಪ್ರಕಾಶಿಸುವ ಪರಮಾತ್ಮನಿಗೆ ಅನಂತ ನಮಸ್ಕಾರಗಳು.

ಭಗವದ್ಗೀತೆಯ ಎರಡನೇ ಅಧ್ಯಾಯಕ್ಕೆ ಸಾಂಖ್ಯಯೋಗವೆಂದು ಹೆಸರು. 'ಸಮ್ಯಕ್ ಖ್ಯಾಯತೆ ಪ್ರಕಾಶ್ಯತೆ ತತ್ವಮನಯೋಃ ಇತಿ ಸಾಂಖ್ಯ' ಎಂಬುದರಿಂದ ಸಾಂಖ್ಯ ಪದದ ಉತ್ಪತ್ತಿಯಾಗಿದೆ. ಅಂದರೆ ಪ್ರತಿ ವಸ್ತುವಿನ ಶುದ್ಧ ಸ್ವರೂಪವನ್ನು ಪ್ರಕಾಶ ಮಾಡುವುದಕ್ಕೆ ಸಾಂಖ್ಯವೆನ್ನುತ್ತಾರೆ. ಈ ಅಧ್ಯಾಯದಲ್ಲಿ ಶರಣಾಗತಿಯ ಲಕ್ಷಣ, ಆತ್ಮ - ಅನಾತ್ಮರುಗಳ ಲಕ್ಷಣ, ನಿಷ್ಕಾಮಕರ್ಮ ಲಕ್ಷಣ, ಸ್ಥಿತ ಪ್ರಜ್ಞನ ಲಕ್ಷಣ—ಇವುಗಳು ಸಮ್ಯಗ್ ರೀತಿಯಿಂದ (ಶುದ್ಧ ರೀತಿಯಿಂದ) ವರ್ಣಿಸಲ್ಪಟ್ಟಿವೆ. ಆದುದರಿಂದ ಇದು ಸಾಂಖ್ಯಯೋಗ.

ಸಂಬಂಧ : ಈ ಎರಡನೆಯ ಅಧ್ಯಾಯವು ಆರಂಭವಾಗುವುದಕ್ಕೆ ಕಾರಣವೇನೆಂದರೆ—ವಿವೇಕ, ವೈರಾಗ್ಯ, ಶಮಾದಿ ಷಟ್ಕ ಸಂಪತ್ತಿ ಮತ್ತು ಮುಮುಕ್ಷತ್ವ ಇವುಗಳಿಗೆ ಸಾಧನ ಚತುಷ್ಟಯ ಸಂಪತ್ತಿ ಎನ್ನುತಾರೆ; ಈ ಸಾಧನ ಚತುಷ್ಟಯ ಸಂಪನ್ನನಾದ ಪುರುಷನು ಕರ್ಮ ಫಲವು ಅನಿತ್ಯವಾದುದೆಂದು ತಿಳಿದು ಕರ್ಮವನ್ನು ತ್ಯಾಗ ಮಾಡಿ ಮತ್ತು ಕ್ಷಯ ಸಾತಿಶಯ ಮತ್ತು ಪತನಗಳೆಂಬ ದೋಷಗಳನ್ನು ಕಂಡು ಸ್ವರ್ಗವನ್ನೂ ಸಹ ದೂರ ಮಾಡಿರುತ್ತಾನೆ. ಇಂತಹ ಅಧಿಕಾರಿ ಪುರುಷನ ಮುಂದಿನ ಕರ್ತವ್ಯವೇನೆಂದರೆ ಶ್ರವಣಾದಿಗಳನ್ನು ಮಾಡಿ ಮುಕ್ತನಾಗುವುದು. ಇದನ್ನೇ ಬ್ರಹ್ಮಸೂತ್ರದಲ್ಲಿ "ಅಥಾತೋ ಬ್ರಹ್ಮಜಿಜ್ಞಾಸಾ" ಎಂದು ಹೇಳಿದೆ; ಮತ್ತು ಉಪನಿಷತ್ತುಗಳಲ್ಲಿ "ಆತ್ಮಾವಾಽರೆ ದ್ರಷ್ಟವ್ಯಃ ಶ್ರೋತವ್ಯೋ ಮಂತವ್ಯೋ ನಿಧಿಧ್ಯಾಸಿತವ್ಯಃ" ಎಂದೂ, "ತದ್ವಿಜ್ಞಾನಾರ್ಥಂ ಸಗುರು ಮೇವಾಭಿಗಚ್ಛೇತ್" ಎಂದೂ ಹೇಳಿದೆ. ಇದರ ಮೇಲಿಂದ ಮುಮುಕ್ಷುವು ಗುರು ಸನ್ನಿಧಿಯನ್ನು ಸೇರಿ ಆತ್ಮ ವಿಚಾರವನ್ನು ಮಾಡಬೇಕೆಂದರ್ಥ. ಇದರಂತೆ ಅರ್ಜುನನೂ ಸಹ ಕರ್ಮಬಾಧೆಗೆ ಅಳುಕಿ, ಕರ್ಮವು

ಬೇಕಿಲ್ಲವೆಂದು ಇಹಮಾತ್ರಫಲವಿರಾಗವನ್ನು ಹೊಂದಿದವನಾಗಿ ಜಗದ್ಗುರುವಾದ ಶ್ರೀ ಕೃಷ್ಣನನ್ನು ಸೇರಿ ಆತ್ಮ ವಿಚಾರ ಶ್ರವಣವನ್ನು ಕೋರಲು, ಶ್ರೀ ಕೃಷ್ಣನು ಗುರುಸ್ಥಾನದಲ್ಲಿದ್ದು ಅರ್ಜುನನ ದುಃಖ ನಿವೃತ್ತಿಗಾಗಿ ಈ ಎರಡನೇ ಅಧ್ಯಾಯವನ್ನು ಆರಂಭಿಸುತ್ತಾನೆ. ಇದೇ ವಿಷಯವು ಛಾಂದೋಗ್ಯೋಪನಿಷತ್ತಿನಲ್ಲಿ ನಾರದ ಸನತ್ಕುಮಾರರ ಸಂವಾದದಲ್ಲಿ ಕಂಡುಬರುತ್ತದೆ. "ಸೋಽಹಂ ಭಗವಃ ಶೋಚಾಮಿ ತಂ ಮಾ ಭಗರ್ವ ಶೋಚಂ ಪಾರಂ ತಾರಯತು"—ಹೇ ಭಗವಂತನಾದ ಸನತ್ಕುಮಾರನೇ ! ನಾನು ದುಃಖಿಯಾಗಿದ್ದೇನೆ, ನನ್ನನ್ನು ದುಃಖದಿಂದ ಪಾರು ಮಾಡಿರಿ ಎಂದು ನಾರದರು ಪ್ರಾರ್ಥಿಸಲು, ಶ್ರೀ ಸನತ್ಕುಮಾರರು ನಾರದರನ್ನು ದುಃಖದಿಂದ ಪಾರು ಮಾಡಲು ಭೂಮಾವಿದ್ಯೆಯನ್ನು ಬೋಧಿಸಿರುತ್ತಾರೆ. ಅಂದರೆ ನೀನು ಭೂಮಾಸ್ವರೂಪನೆಂದು ತೋರಿಸಿರುತ್ತಾರೆ. ಇದೇ ವಿಷಯವನ್ನು ಶ್ರೀಮನ್ನಿಜಗುಣ ಶಿವಯೋಗಿಗಳು—"ಘೋರ ಭವಮಾಲೆಗಳುಕಿ ಮನದೊಳಿದಾರಿಂದ ತೊಲಗುವುದೆಂದು ಚಾರುಗುರುಪದವಿಡಿಯೆ ಮೊದಲು ಸಂಸಾರವೆನಗಿಲ್ಲವಾದುದು" ಎಂದು ಹೇಳಿದ್ದಾರೆ. ಇದರ ಅರ್ಥವೇನೆಂದರೆ, ೮೪ ಲಕ್ಷ ಯೋನಿಗಳಲ್ಲಿ ಹುಟ್ಟಿ ಹುಟ್ಟಿ ಬೇಸತ್ತು ಪ್ರತಿ ಜನ್ಮದಲ್ಲಿಯೂ ಆಧ್ಯಾತ್ಮಿಕ, ಆದಿದೈವಿಕ ಮತ್ತು ಆದಿಭೌತಿಕ ದುಃಖಗಳನ್ನು ಭೋಗಿಸಿ ಬಳಲಿ ಗುರು ಸನ್ನಿಧಿಯನ್ನು ಸೇರಿ, ಹೇ ಗುರುಗಳೆ ! ನಾನು ಈ ದುಃಖದಿಂದ ಹೇಗೆ ಪಾರಾಗುವೆನೆಂದು ಪ್ರಾರ್ಥಿಸಲು, ಗುರುಗಳು "ಶಿಷ್ಯನೇ ! ನಿನಗೆ ದುಃಖವು ಎಂದೆಂದೂ ಇಲ್ಲ. ಅದು ಅತ್ಯಂತಾಭಾವ. ನೀನು ಭೂಮಾಸ್ವರೂಪನು ; ಆನಂದಸ್ವರೂಪನು" ಎಂದು ಬೋಧಿಸಿ ದುಃಖದಿಂದ ಪಾರುಮಾಡಿದರು—ಎಂದು ಹೇಳಿರುತ್ತಾರೆ. ಇದರಂತೆಯೇ ಶ್ರೀ ಕೃಷ್ಣ ಭಗವಂತನು ಅರ್ಜುನನನ್ನು ನಿಮಿತ್ತ ಮಾತ್ರನನ್ನಾಗಿ ಮಾಡಿಕೊಂಡು ಸರ್ವ ಮಾನವರ ದುಃಖ ನಿವೃತ್ತಿಗಾಗಿ ಈ ಎರಡನೇ ಅಧ್ಯಾಯವನ್ನು ಆರಂಭ ಮಾಡಿರುತ್ತಾನೆ.

ಸಂಜಯ ಉವಾಚ :-

ತಂ ತಥಾ ಕೃಪಯಾವಿಷ್ಟ-ಮಶ್ರುಪೂರ್ಣಾಕುಲೇಕ್ಷಣಮ್ ।
ವಿಷೀದಂತಮಿದಂ ವಾಕ್ಯ-ಮುವಾಚ ಮಧುಸೂದನಃ ॥೧॥

ತಾತ್ಪರ್ಯ : ಈ ಪ್ರಕಾರ ದಯಾರ್ದ್ರನೂ, ಕಂಬನಿ ತುಂಬಿ ಮಂಜಾದ ಕಣ್ಣುಳ್ಳವನೂ, ಶೋಕಗ್ರಸ್ತನೂ ಆದ ಅರ್ಜುನನನ್ನು ಕುರಿತು ಮಧುಸೂದನನು ಈ ವಾಕ್ಯವನ್ನು ಹೇಳಿದನು.

ಸಂಜಯನೆಂದರೆ ಯಾರು ? ಇಂದ್ರಿಯಗಳನ್ನು ಜಯಿಸಿ ಗುರು ಕೃಪೆಯಿಂದ

ಜ್ಞಾನನೇತ್ರವನ್ನು ಸಂಪಾದಿಸಿದವನು. ಈ ರೀತಿ ಇರುವವರೆಲ್ಲರೂ ಸಂಜಯರೇ. ತನ್ನನ್ನು ತಾನು ತಿಳಿದು ಬ್ರಹ್ಮಾತ್ಮ ಬುದ್ಧಿಯಲ್ಲಿರುವವನು ಸಂಜಯ. ಇವನು ವಕ್ತೃ, ಅಂದರೆ ಹೇಳುವವನು. ತನ್ನನ್ನು ತಾನು ತಿಳಿಯದ ದೇಹಾತ್ಮ ಬುದ್ಧಿಯಲ್ಲಿರುವವನು ಧೃತರಾಷ್ಟ್ರ. ಇವನು ಶ್ರೋತೃ. ಇಂತಹವರು ಈಗಲೂ ಇದ್ದಾರೆ.

ಈ ಶ್ಲೋಕದಲ್ಲಿ ಬಂದಿರುವ 'ತಥಾ' ಎಂಬ ಪದಕ್ಕೆ 'ಈ ಪ್ರಕಾರ' ಎಂದರ್ಥ. ಯಾವ ಪ್ರಕಾರ? ಒಂದನೇ ಅಧ್ಯಾಯದಲ್ಲಿ ಹೇಳಿದ ಪ್ರಕಾರ; ಅಂದರೆ ಯುದ್ಧ ಮಾಡುವುದು ಅಧರ್ಮ, ಅದರಿಂದ ಮಹಾ ಪಾಪ ಬರುತ್ತದೆ, ವರ್ಣಸಂಕರವಾಗುತ್ತದೆ ಎಂದು ಮೊದಲಾಗಿ ಹೇಳಿದ ಅರ್ಜುನನು 'ಕೃಪಯಾ' ಅಂದರೆ ದಯೆಯಿಂದ ಕೂಡಿದವನಾಗಿದ್ದನು. ದಯೆಯು ಅವನಿಗೆ ಸ್ವಭಾವಸಿದ್ಧವಾಗಿದ್ದುದರಿಂದ ಅವನು ಜ್ಞಾನಕ್ಕೆ ಅಧಿಕಾರಿಯಾದನು. ಗೌತಮ ಸ್ಮೃತಿಯಲ್ಲಿ ಮೋಕ್ಷಕ್ಕೆ ಅಧಿಕಾರಿಯಾಗಬೇಕಾದರೆ ಎಂಟು ಗುಣಗಳಿರಬೇಕೆಂದು ಹೇಳಿರುತ್ತಾರೆ: "ದಯಾ ಸರ್ವ ಭೂತೇಷು ಕ್ಷಾಂತಿರನಸೂಯ, ಅಶುಚಿರನಾಯಾಸೊ ಮಾಂಗಲ್ಯ ಮಕಾರ್ಪಣ್ಯಮಸ್ಪೃಹ ಚೇತಿ ಅಷ್ಟವಾತ್ಮಗುಣಃ ||". ಇದರಲ್ಲಿ ಮೊದಲನೆಯದು 'ದಯಾಸರ್ವ ಭೂತೇಷು' – ಇತರರ ಕಷ್ಟವನ್ನು ನೋಡಿ ಮರುಕ ತೋರಿಸುವುದು ಒಂದು ಮಹಾ ಸದ್ಗುಣ. "ದಯೆಯಿಲ್ಲದ ಧರ್ಮವದಾವುದಯ್ಯಾ? ದಯೆಯೇ ಬೇಕು. ಸಕಲ ಪ್ರಾಣಿಗಳಲ್ಲಿ, ದಯೆಯೇ ಧರ್ಮದ ಮೂಲವಯ್ಯಾ" ಎಂದು ಶ್ರೀ ಬಸವಣ್ಣನವರು ನುಡಿದಿದ್ದಾರೆ. 'ಕ್ಷಾಂತಿ' ಅಂದರೆ ಸಹನೆ ಎಂಬುದು ಎರಡನೆಯದು. ಇತರರ ಏಳಿಗೆಯನ್ನು ನೋಡಿ ಸಹಿಸುವುದೂ ಒಂದು ಮಹಾ ಸದ್ಗುಣವೇ. ಮೂರನೆಯದು ಅನಸೂಯ ಅಂದರೆ ಅಸೂಯೆ ಇಲ್ಲದಿರುವುದು. ಅಸೂಯೆ ಇಲ್ಲದಿರುವವಳೇ ಅನಸೂಯ. ತ್ರಿಗುಣಗಳಿಗೆ ಅತೀತನಾದವನೇ ಅತ್ರಿ. ಇವರಿಗೆ ಬ್ರಹ್ಮಜ್ಞಾನರೂಪಿ ದತ್ತಾತ್ರೇಯರು ಜನಿಸಿದರು. ಅಸೂಯಾ ರಹಿತರೇ ಜ್ಞಾನಕ್ಕೆ ಅಧಿಕಾರಿಗಳು. ಶುಚಿ ಎಂಬುದು ನಾಲ್ಕನೆಯದು. ದೇಹ ಹಾಗೂ ಮನಸ್ಸು ಎರಡೂ ಶುಚಿಯಾಗಿರಬೇಕು. ದೇಹ ಮಾತ್ರ ಶುಚಿಯಾಗಿದ್ದರೆ ಸಾಲದು. ಮನಸ್ಸು ಶುಚಿಯಾಗಿರುವುದು ಬಹಳ ಮುಖ್ಯ. ಅನಾಯಾಸವೆಂಬುದು ಐದನೆಯದು. ರಜೋಗುಣದಿಂದಲೇ ಆಯಾಸ; ಸತ್ವಗುಣಿಗಳಿಗೆ ಸದಾ ನಿರಾಯಾಸವಾಗಿರುತ್ತದೆ. ದೇಹಬುದ್ಧಿ ಇರುವವರೆಗೆ ಆಯಾಸ ತಪ್ಪಿದ್ದಲ್ಲ. ಮಾಂಗಲ್ಯವೆಂಬುದು ಆರನೆಯ ಲಕ್ಷಣ. ಯಾವಾಗಲೂ ಪ್ರಸನ್ನ ಮುಖವುಳ್ಳವರಾಗಿರಬೇಕು. ಯಾವಾಗಲೂ, ಎಂದರೆ ಸುಖ ದುಃಖ - ಎರಡು ಸ್ಥಿತಿಗಳಲ್ಲೂ, ಸದಾಹಸನ್ಮುಖವಾಗಿರಬೇಕು. ಅಕಾರ್ಪಣ್ಯವೆಂಬುದು ಏಳನೆಯದು, ಲೋಭಿಯಾಗಿರಬಾರದು; ಧಾರಾಳ ಬುದ್ಧಿ ಉಳ್ಳವನಾಗಿರಬೇಕು. ಅಸ್ಪೃಹ ಎಂಬುದು ಎಂಟನೆಯದು. ಅಸ್ಪೃಹ

ಎಂದರೆ ಸಂಗವಿಲ್ಲದಿರುವುದು. ಯಾವುದಕ್ಕೂ ಅಂಟದಂತೆ ಇರುವುದು. ಹೀಗೆ ಎಂಟು ಗುಣಗಳುಳ್ಳವನೇ ಬ್ರಹ್ಮವಿಚಾರಕ್ಕೆ ಅಧಿಕಾರಿ. ಇದರಲ್ಲಿ ಪ್ರಧಾನವಾದ ದಯಾಗುಣವು ಅರ್ಜುನನಲ್ಲಿತ್ತು; ಮತ್ತು 'ಅಶ್ರುಪೂರ್ಣಾಕುಲೇಕ್ಷಣಂ' - ಕಣ್ಣುಗಳಲ್ಲಿ ನೀರು ತುಂಬಿದವನಾಗಿದ್ದನು. ಸಂಸಾರದಿಂದ ಬಿಡುಗಡೆಯಾಗಬೇಕಾದರೆ ಅದರಲ್ಲಿ ಕಷ್ಟ ಅಂದರೆ ದುಃಖವಿದೆ ಎಂಬುದನ್ನು ತಿಳಿದುಕೊಂಡಿರುವುದನ್ನು ಗುರುಗಳಿಗೆ ತೋರಿಸಬೇಕಾದರೆ ಅಳಲೇಬೇಕು. "ವಿಷೀದಂತಂ" ಎಂಬುದು ಅರ್ಜುನನಲ್ಲಿರುವ ಮೂರನೇ ಗುಣ. ಇದರ ಅರ್ಥವೇನೆಂದರೆ ವಿಷಾದ ಉಳ್ಳವನಾಗಿದ್ದನು; ಅಂದರೆ ಅರ್ಜುನನಿಗೆ ಸಂಸಾರದ ವಿಷಯಸುಖದಲ್ಲಿ ಸುಖ ಬುದ್ಧಿ ಇರದೆ, ಅದರಲ್ಲಿ ದುಃಖ ಬುದ್ಧಿ ಉಂಟಾಗಿ ಆ ದುಃಖವು ಇನ್ನೂ ನಿವಾರಣೆಯಾಗಲಿಲ್ಲವಲ್ಲಾ ಎಂಬ ವಿಷಾದವು ಉಂಟಾಗಿದ್ದಿತು. ದುಃಖವು ದುಃಖವಾಗಿಯೇ ಅವನಿಗೆ ಗೋಚರವಾಗಿದ್ದಿತು. ದುಃಖ ಸ್ವರೂಪವಾದ ಸಂಸಾರವು ಸುಖ ಸ್ವರೂಪವಾಗಿ ಅವನಿಗೆ ಗೋಚರಿಸಲಿಲ್ಲ. ಅರ್ಜುನನಿಗೆ ಬಂದ ಈ ದುಃಖವು ಆಗುಂತಕವೋ ಸ್ವಭಾವವೋ ಅಂದರೆ ಆಗುಂತಕವೇ ಹೊರತು ಸ್ವಭಾವವಲ್ಲ. ಈ ಶ್ಲೋಕದಲ್ಲಿ ದುಃಖವೆಂಬುದು ಕರ್ಮ; ಅರ್ಜುನನು ಕರ್ತೃ. ಆದುದರಿಂದ ದುಃಖವು ಅರ್ಜುನನ ಸಹಜವಾದ ಲಕ್ಷಣವಲ್ಲ; ಅದು ಅತ್ಯಂತಾಭಾವ. ಅಗ್ನಿಗೆ ಉಷ್ಣವು ಸ್ವರೂಪವೇ ಆಗಿರುವುದರಿಂದ ಅದನ್ನು ಅದರಿಂದ ಬೇರ್ಪಡಿಸಲು ಸಾಧ್ಯವಿಲ್ಲ. ಆದರೆ ದುಃಖವು ಆಗುಂತಕವಾದುದರಿಂದ ಅದನ್ನು ಕಳೆದುಕೊಳ್ಳಬಹುದು. ಈ ಶ್ಲೋಕದಲ್ಲಿ ಬಂದಿರುವ 'ತಂ' ಎಂಬ ಪದವು ಇಂತಹ ಲಕ್ಷಣಗಳುಳ್ಳ ಅರ್ಜುನನಿಗೆ ಎಂದೂ, 'ಇದಂ' ಎಂಬ ಪದವು ಇನ್ನು ಮುಂದೆ ಹೇಳುವ ವಿಷಯವನ್ನೂ ಸೂಚಿಸುತ್ತವೆ. ಈ ಶ್ಲೋಕದಲ್ಲಿ ಬಂದಿರುವ 'ಮಧುಸೂದನ' ಎಂಬ ಪದಕ್ಕೆ ಮಧುಕೈಟಭನೆಂಬ ರಾಕ್ಷಸನನ್ನು ಕೊಂದವನೆಂದರ್ಥ. ಈ ಅರ್ಥದಿಂದ ಎಲ್ಲರಿಗೂ ಅಷ್ಟು ಪ್ರಯೋಜನವಿಲ್ಲ. ಮಹಾತ್ಮರು ಇದಕ್ಕೆ ಮತ್ತೊಂದು ಅರ್ಥವನ್ನು ಹೇಳಿರುತ್ತಾರೆ: "ಸರ್ವೇಷಾಂದೇಹೇ ಮಧುವದಿಷ್ಟತ್ವಾತ್ ಮಧುರಹಂಕಾರಃ| ತನ್ಮೊತ್ಮ ಪ್ರಕಾಶೇನ ಸೂದಯತಿ ನಾಶಯತೀತಿ ಮಧುಸೂದನ". ಎಲ್ಲರಲ್ಲಿಯೂ ಅಹಂಕಾರವಿರುತ್ತದೆ. ಎಲ್ಲರಿಗೂ ಅತ್ಯಂತ ಪ್ರಿಯವಾದುದು ಅಹಂಕಾರ. ಈ ಅಹಂಕಾರವು ಬಹಳ ಮಧುರವಾಗಿರುತ್ತದೆ. ಇದನ್ನು ಬಿಡುವುದು ಎಲ್ಲರಿಂದಲೂ ಅಸಾಧ್ಯ. ಇದು ಮಧುವಿನಂತೆ ಅಂದರೆ ಜೇನುತುಪ್ಪದಂತೆ ಬಹಳ ರುಚಿ. 'ನಾನು ಜ್ಞಾನಿ ಎಂಬ ಹಮ್ಮಿನೊಳು ಕೆಲರು ಕೆಡುತಿಹರು' ಎಂದು ಆರ್ಯರು ಹೇಳಿರುತ್ತಾರೆ. ಹೀಗೆ ಒಬ್ಬೊಬ್ಬರಿಗೆ ಒಂದೊಂದು ವಿಧವಾದ ಅಹಂಕಾರವು ಬಂಧಿಸುತ್ತಿರುತ್ತದೆ. ಇದರಿಂದಲೇ ಚಿಜ್ಜಡ ಗ್ರಂಥಿಯು ಉತ್ಪನ್ನವಾಗಿರುವುದು. ಅಹಂಕಾರವು ಎರಡು ಕಡೆ ಮುಖ ಉಳ್ಳ ಕನ್ನಡಿ ಇದ್ದಂತೆ. ಈ ನಾನೆಂಬ ಅಹಂಕಾರವು ಗುರುವಿನ ದಯೆಯಿಂದಲೇ ಹೋಗಬೇಕು. 'ಏನತ್ಯಜಸಿ ತತ್ಯಜ' ಎಂದು ಶ್ರುತಿಗಳಲ್ಲಿ ಹೇಳಿದೆ. ಈ ಪ್ರಥಮ ಶ್ಲೋಕ

ದಲ್ಲಿ ಕೃಷ್ಣನು ಅಧಿಕಾರಿಯ ಲಕ್ಷಣವನ್ನು ಹೇಳಿದ್ದಾನೆ. ಸುಳ್ಳಾದ ಅಹಂಕಾರವೆಂಬ ರಾಕ್ಷಸನನ್ನು ಸಂಹರಿಸುವವನೇ ಮಧುಸೂದನ. ಈ ಮಧುಸೂದನನು ಏನು ಹೇಳಿದನೆಂಬುದನ್ನು ಮುಂದಿನ ಶ್ಲೋಕದಲ್ಲಿ ಹೇಳಿದೆ.

ಶ್ರೀ ಭಗವಾನುವಾಚ :

ಕುತಸ್ತ್ವಾ ಕಶ್ಮಲಮಿದಂ ವಿಷಮೇ ಸಮುಪಸ್ಥಿತಮ್ ।
ಅನಾರ್ಯಜುಷ್ಟಮಸ್ವರ್ಗ್ಯ-ಮಕೀರ್ತಿಕರಮರ್ಜುನ ॥

ತಾತ್ಪರ್ಯ : ಷಡ್ಗುಣೈಶ್ವರ್ಯ ಸಂಪನ್ನನಾದ ಭಗವಂತನಿಂತೆಂದನು : ಎಲೈ ಅರ್ಜುನ ! ಆರ್ಯರಿಗೆ ಅಯೋಗ್ಯವೂ, ಸ್ವರ್ಗಗತಿಗೆ ವಿರೋಧವೂ, ಅಪಕೀರ್ತಿಯನ್ನುಂಟುಮಾಡುವುದೂ ಆದ ಈ ಮೋಹವು ಇಂತಹ ವಿಷಮ ಸಮಯದಲ್ಲಿ ನಿನಗೆ ಹೇಗೆ ಬಂದಿತು ?

ಇಲ್ಲಿ 'ಶ್ರೀ ಭಗವಾನುವಾಚ' ಎಂದಿದೆ. ಭಗವಂತನೆಂಬ ಹೆಸರಿಗೆ ಶ್ರೀ ಮಧುಸೂದನ ಸರಸ್ವತಿಗಳು ಈ ರೀತಿ ಅರ್ಥ ಹೇಳಿದ್ದಾರೆ :

"ಐಶ್ವರ್ಯಸ್ಯ ಸಮಗ್ರಸ್ಯ ಧರ್ಮಸ್ಯ ಯಶಸ ಶ್ರಿಯಃ ।
ವೈರಾಗ್ಯಾಶ್ಯಾಧಮೋಕ್ಷಸ್ಯ ಷಣ್ಣಾಭಗ: ಇತೀರಿಣಃ ॥"

ಯಾವುದಕ್ಕೂ ಕೊರತೆ ಇಲ್ಲದೆ ಸಮಗ್ರವಾದ ಐಶ್ವರ್ಯ ಉಳ್ಳವನೂ, ಎಲ್ಲಾ ಧರ್ಮ ಅಂದರೆ ಜ್ಞಾನವನ್ನು ಬಲ್ಲವನೂ, ಎಲ್ಲಾ ಕೀರ್ತಿಗಳನ್ನು ಹೊಂದಿದವನೂ, ಎಲ್ಲಾ ಐಶ್ವರ್ಯಗಳಿಗೆ ಅಂದರೆ ಸಮಸ್ತ ನಾಮರೂಪಗಳಿಗೆ ಅಧಿಷ್ಠಾನನೂ, ವೈರಾಗ್ಯನಿಧಿಯೂ, ಅಂದರೆ ಎಲ್ಲವನ್ನೂ ಉಳ್ಳವನಾಗಿದ್ದರೂ ಯಾವುದೂ ತನ್ನದಲ್ಲವೆಂದು ತಿಳಿದವನೂ, ಮೋಕ್ಷ ಸ್ವರೂಪನೂ ಆಗಿರುವವನು ಭಗವಂತ. ಇಲ್ಲಿ ಕೃಷ್ಣನನ್ನು ಭಗವಂತನೆಂದು ತಿಳಿಯುವುದರ ಜೊತೆಗೆ ಗುರುವೆಂದೂ ತಿಳಿದಿರಬೇಕು. ಯಾವನು ಷಡ್ಗುಣೈಶ್ವರ್ಯ ಸಂಪನ್ನನೋ ಅವನೇ ಗುರು. ಅವನೇ ಭಗವಂತ. ಭಗವಂತನೆಂಬ ಶಬ್ದಕ್ಕೆ ಅಪ್ಪಯ್ಯ ದೀಕ್ಷಿತರು ಈ ರೀತಿ ಅಭಿಪ್ರಾಯಪಟ್ಟಿರುತ್ತಾರೆ. ಪ್ರಾಣಿಗಳ ಉತ್ಪತ್ತಿ ನಾಶಗಳನ್ನು ಅರಿತವನೂ, ಭೂತಗಳ ಬರುವಿಕೆ ಹೋಗುವಿಕೆಗಳನ್ನು ನೋಡಬಲ್ಲವನೂ, ಅವಿದ್ಯೆ ಮತ್ತು ವಿದ್ಯೆಗಳ ಸ್ವರೂಪವನ್ನು ಬಲ್ಲವನೂ, ಅಂದರೆ ಭ್ರಮಾಜ್ಞಾನವೇ ಅವಿದ್ಯೆ ಯಥಾರ್ಥ ಜ್ಞಾನವೇ ವಿದ್ಯೆ ಎಂದು ತಿಳಿದವನೂ ಗುರುವೆಂದು ಹೇಳಿದ್ದಾರೆ. ಶ್ರೀ ಕೃಷ್ಣನಲ್ಲಿ ಈ ಎಲ್ಲಾ ಲಕ್ಷಣಗಳಿರುವುದರಿಂದ

"ಕೃಷ್ಣಂವಂದೇ ಜಗದ್ಗುರುಮ್" ಕೃಷ್ಣನು ಸಾಕ್ಷಾತ್. ಭಗವಂತನೆಂದು ತೋರಿಸಲು ವ್ಯಾಸರು "ಶ್ರೀ ಭಗವಾನುವಾಚ" ಎಂದು ಹೇಳಿದ್ದಾರೆ. ಕೃಷ್ಣನು ಕೇವಲ ವಸುದೇವ ದೇವಕಿಯರ ಪುತ್ರನಲ್ಲ. ಷಡ್ಗುಣೈಶ್ವರ್ಯ ಸಂಪನ್ನನಾದ ಭಗವಂತ. ಆದುದರಿಂದ ಇದು ಕೃಷ್ಣ ಗೀತೆಯಲ್ಲ, ಭಗವಂತನ ಗೀತೆ. ಅವನು ಸ್ವಯಂ ಭಗವಾನ್. ತನ್ನ ಸ್ವರೂಪದ ಮರವೆ ಅವನಿಗೆ ಎಂದಿಗೂ ಇರುವುದಿಲ್ಲ. ಸೂರ್ಯನಿಗೆ ಹೇಗೆ ಕತ್ತಲೆಯ ಪರಿಚಯವಿಲ್ಲವೋ ಹಾಗೆ ಜ್ಞಾನ ಸೂರ್ಯನಾದ ಕೃಷ್ಣನಿಗೆ ಅಜ್ಞಾನ ರೂಪಿ ಕತ್ತಲೆಯ ಪರಿಚಯ ಅಂದರೆ ಸಂಬಂಧವಿಲ್ಲ. ಇಂತಹ ಭಗವಂತನು ಶೋಕಗ್ರಸ್ತನಾಗಿರುವ ಅರ್ಜುನನನ್ನು ಕುರಿತು ಈ ಶ್ಲೋಕದಲ್ಲಿ ಈ ರೀತಿ ಪ್ರಶ್ನಿಸುತ್ತಿದ್ದಾನೆ.

ಈ ಶ್ಲೋಕದಲ್ಲಿ ಅರ್ಜುನಾ! ಎಂಬ ಸಂಬೋಧನಾ ಪದವಿದೆ. ರಜತಮ ಗುಣಗಳ ಸಂಬಂಧವಿಲ್ಲದ ಕೇವಲ ಶುದ್ಧ ಸತ್ವಗುಣಿಯಾದವನು ಅರ್ಜುನ. ಗೀತಾಜ್ಞಾನವನ್ನು ಅರಿಯಬೇಕಾದರೆ ಎಲ್ಲರೂ ಅರ್ಜುನರಾಗಿರಬೇಕು. ರಜತಮಗುಣಗಳಿರುವವನು ಅರ್ಜುನನಲ್ಲ ; ಅವನು ಧೃತರಾಷ್ಟ್ರ. ಆದುದರಿಂದ ಈ ಎರಡನೇ ಅಧ್ಯಾಯದ ವಿಚಾರವನ್ನು ಅರಿತು ಅನುಭವಿಸಬೇಕಾದರೆ ಮೊದಲು ನಿಷ್ಕಾಮಕರ್ಮ ಮೊದಲಾದ ಸಾಧನಗಳಿಂದ ಅಂತಃಕರಣವನ್ನು ಶುದ್ಧಿ ಮಾಡಿಕೊಳ್ಳಬೇಕು. ಹೀಗೆ ಶುದ್ಧಾಂತಃಕರಣಿಯಾದ ಅರ್ಜುನನನ್ನು ಕುರಿತು ಭಗವಂತನು ಈ ಶ್ಲೋಕದಲ್ಲಿ ಈ ವಿಷಮ ಪರಿಸ್ಥಿತಿಯಲ್ಲಿ ನಿನಗೆ ಈ ಕಶ್ಮಲವು ಎಲ್ಲಿಂದ ಬಂದಿತು? ಎಂದು ಪ್ರಶ್ನಿಸುತ್ತಿದ್ದಾನೆ. "ವಿಷಮ ಪರಿಸ್ಥಿತಿ" ಎಂಬುದಕ್ಕೆ ಭೌತಿಕ ಹಾಗೂ ಆಧ್ಯಾತ್ಮಿಕವಾದ ಎರಡು ಅರ್ಥಗಳಿವೆ. ಭೌತಿಕ ಅರ್ಥವೇನೆಂದರೆ ಪಾಂಡವರ ಪರವಾಗಿ ಶ್ರೀಕೃಷ್ಣನು ನಡೆಸಿದ ಸಂಧಿ ಸಂಧಾನವು ವಿಫಲವಾಗಿ ಎರಡೂ ಸೇನೆಗಳು ಯುದ್ಧಕ್ಕೆ ಸನ್ನದ್ಧರಾಗಿ ಯುದ್ಧರಂಗದಲ್ಲಿ ನಿಂತಿದ್ದಾರೆ. ಕೌರವರ ಕಡೆ ಹೆಚ್ಚು ಸೈನ್ಯವಿದೆ, ಆದರೆ ಪಾಂಡವರ ಕಡೆ ಬಹಳ ಅಲ್ಪ ಸೈನ್ಯವಿದೆ. ಪಾಂಡವರಲ್ಲಿ ಮುಖ್ಯನಾದ ಅರ್ಜುನನೇ ಈ ವೇಳೆಯಲ್ಲಿ ಯುದ್ಧ ಮಾಡುವುದಿಲ್ಲವೆಂದು ಕುಳಿತಿದ್ದಾನೆ. ಇದು ವಿಷಮ ಪರಿಸ್ಥಿತಿ. ಆಧ್ಯಾತ್ಮಿಕ ದೃಷ್ಟಿಯಿಂದ ಇದರ ಅರ್ಥವೇನೆಂದರೆ—ಮಾನವ ದೇಹಧಾರಣೆ ಮಾಡಿಕೊಂಡು ಬಂದು ಜ್ಞಾನವನ್ನು ಪಡೆಯದಿರುವುದೇ ವಿಷಮ ಪರಿಸ್ಥಿತಿ. ಏಕೆಂದರೆ ಆತ್ಮಜ್ಞಾನವನ್ನು ಸಂಪಾದಿಸುವುದಕ್ಕಾಗಿಯೇ ಮಾನವ ದೇಹವು ಪ್ರಾಪ್ತವಾಗಿರುವಾಗ ವ್ಯರ್ಥವಾಗಿ ಅದನ್ನು ಕಳೆದು ಕೊಂಡರೆ ಮತ್ತೆ ಮಾನವ ದೇಹವೇ ಬರುವುದೆಂಬ ವಿಶ್ವಾಸವೇನೂ ಇರುವುದಿಲ್ಲ. ಪಶು, ಪಕ್ಷಿ, ಕ್ರಿಮಿಕೀಟಾದಿ ಜನ್ಮ ಬಂದರೆ ಆಗ ಜ್ಞಾನವನ್ನು ಹೇಗೆ ಸಂಪಾದಿಸುವುದು ? ಆದುದರಿಂದ ಇದು ವಿಷಮ ಪರಿಸ್ಥಿತಿ. ಈ ಶ್ಲೋಕದಲ್ಲಿ ಬಂದಿರುವ 'ತ್ವಾ' ಎಂಬ ಪದಕ್ಕೆ ನಿನಗೆ ಅಂದರೆ ಅಧಿಕಾರಿಯಾದ

ನಿನಗೆ, 'ಕುತಃ' ಅಂದರೆ ಎಲ್ಲಿಂದ, 'ಇದಂಕಶ್ಮಲ' ಅಂದರೆ ಈ ಅನಿಷ್ಟವು (ನಪುಂಸಕತ್ವ) ಬಂದಿತು ? ಎಂದರ್ಥ. ಈ ಅನಿಷ್ಟವು ಅನಾರ್ಯರಿಗೆ ಅಂದರೆ ಮುಕ್ತರೂ ಅಲ್ಲದ, ಮುಮುಕ್ಷುಗಳೂ ಅಲ್ಲದವರಿಗೆ ಇರಬೇಕಾಗಿತ್ತು.

ಜಗತ್ತಿನಲ್ಲಿರುವ ಮಾನವರಿಗೆಲ್ಲಾ ಇರುವುದು ಮೂರು ಇಚ್ಛೆಗಳೇ : ೧. ಮೋಕ್ಷೇಚ್ಛೆ, ೨. ಸ್ವರ್ಗೇಚ್ಛೆ, ೩. ಕೀರ್ತಿ ಇಚ್ಛೆ. ಅರ್ಜುನಾ! ಈ ಕಶ್ಮಲವು ನಿನಗೆ ಯಾವ ಇಚ್ಛೆಯಿಂದ ಬಂದಿತು? ಮೋಕ್ಷೇಚ್ಛೆಯಿಂದ ಬಂದಿತೆನ್ನೋಣವೆಂದರೆ ಮೋಕ್ಷೇಚ್ಛೆಯುಳ್ಳ ಮುಮುಕ್ಷುವು ಎಂದಿಗೂ ತನ್ನ ಸ್ವಧರ್ಮವನ್ನು ಬಿಡಲಾರನು. ಅವನು ತನ್ನ ಎಲ್ಲಾ ಕರ್ಮಗಳನ್ನೂ ಕರ್ತೃತ್ವ ಬುದ್ಧಿ ಫಲಾಪೇಕ್ಷೆಗಳಿಲ್ಲದೆ ಮಾಡುತ್ತಾನೆ. ಆದುದರಿಂದ ಈ ಕರ್ತವ್ಯ ಭ್ರಷ್ಟತೆಯು ನಿನಗೆ ಮೋಕ್ಷೇಚ್ಛೆಯಿಂದ ಉಂಟಾಗಿಲ್ಲ. ಇನ್ನು ಸ್ವರ್ಗೇಚ್ಛೆಯಿಂದ ನಿನಗೆ ಈ ಕಶ್ಮಲ ಉಂಟಾಗಿದೆ ಎನ್ನೋಣವೆಂದರೆ ನಿನಗೆ ಸ್ವರ್ಗ ಸುಖವೇನೂ ಹೊಸದಲ್ಲ ಮತ್ತು ಮೂರು ಲೋಕದ ರಾಜ್ಯ ಕೊಟ್ಟರು ಬೇಡವೆಂದು ಈ ಹಿಂದೆಯೇ ಹೇಳಿರುವೆ. ಇನ್ನು ಮೂರನೆಯದಾದ ಕೀರ್ತಿ ಇಚ್ಛೆಯಿಂದ ಈ ಕಶ್ಮಲ ಬಂದಿರುವುದಾದರೆ ಯುದ್ಧವು ನಿನ್ನ ಸ್ವಧರ್ಮ ಮತ್ತು ಕೌರವರು ಅಧರ್ಮಿಗಳು ; ಆದುದರಿಂದ ನೀನು ಯುದ್ಧ ಮಾಡಿ, ಯುದ್ಧದಲ್ಲಿ ನಿನ್ನ ಬಂಧು ಬಾಂಧವರನ್ನು ಕೊಂದರೆ ಅಪಕೀರ್ತಿ ಏನೂ ಬರುವುದಿಲ್ಲ. ಯುದ್ಧ ಮಾಡದಿದ್ದರೆ ನಿನಗೆ ಅಪಕೀರ್ತಿ ಉಂಟಾಗುತ್ತದೆ. ನೀನು ಉತ್ತಮ ಕುಲದಲ್ಲಿ ಹುಟ್ಟಿದ ಆರ್ಯನಾಗಿರುವೆಯಾದುದರಿಂದ ಅನಾರ್ಯ, ಅಸ್ವರ್ಗ್ಯ, ಅಕೀರ್ತಿಕರವಾದ ಈ ಕಶ್ಮಲವು ನಿನಗೆ ತಕ್ಕದ್ದಲ್ಲ – ಎಂದು ಕೃಷ್ಣನು ಅರ್ಜುನನ ಹೇಡಿತನವನ್ನು ಅಲ್ಲಗಳೆಯುತ್ತಿದ್ದಾನೆ. ಇದರಂತೆ ಗುರುಗಳು ಮುಮುಕ್ಷುಗಳನ್ನು ನೋಡಿ, ಅಯ್ಯಾ, ಜಿಜ್ಞಾಸುಗಳೇ ! ನೀವು ಪರಮಾತ್ಮರೇ ಆಗಿದ್ದು, ಮೂರುವರೆ ಮೊಳದ ಶರೀರವೇ ನಾನೆಂಬ ಈ ಅಸಹ್ಯ ಬುದ್ಧಿಯು ಹೇಗೆ ಬಂದಿತು ? ಸಿಂಹರಾಗಿದ್ದು ಕುರಿ ಎಂದು ಏಕೆ ತಿಳಿದಿರುವಿರಿ ? ಎಂದು ಪ್ರಶ್ನಿಸುತ್ತಾರೆ. ಆದುದರಿಂದ ಈ ಶ್ಲೋಕದಲ್ಲಿ ಅರ್ಜುನನ ನಿಮಿತ್ತ ಮಾಡಿಕೊಂಡು ಭಗವಂತನು ನಮ್ಮನ್ನೆಲ್ಲರನ್ನು ಕುರಿತು ನೀವೆಲ್ಲರೂ ಆರ್ಯರು ಅಂದರೆ ಆತ್ಮಸ್ವರೂಪಿಗಳೇ ಆಗಿರುವಿರಿ. ಅಜ್ಞಾನದಿಂದ ದೇಹಾತ್ಮ ಬುದ್ಧಿ ಎಂಬ ನಪುಂಸಕತ್ವ(ಕಶ್ಮಲ)ವು ಬಂದಿದೆ. ಆದನ್ನು ಬಿಡಿರೆಂದು ಬೋಧಿಸಿದ್ದಾನೆ.

ಸಂಬಂಧ :— ಮುಂದಿನ ಶ್ಲೋಕದಲ್ಲಿ ಶ್ರೀ ಕೃಷ್ಣನು ಅರ್ಜುನನನ್ನು ಹುರಿದುಂಬಿಸಲು ಅವನಿಗೆ ಪ್ರೋತ್ಸಾಹ ಕೊಡುತ್ತಾ, ಅವನನ್ನು ಪ್ರಶಂಸಿಸುತ್ತಾ, ವಿಷಾದದಿಂದ ಹೇಡಿಯಂತೆ ಕುಳಿತಿದ್ದ ಅವನನ್ನು ಎಬ್ಬಿಸುತ್ತಾನೆ.

★

ದೃಷ್ಟಾಂತ ಕಥೆ

—ತ್ರಿನೇತ್ರಿ

ಬಹಳ ದಿನಗಳ ನಂತರ ಮೂವರು ಸ್ನೇಹಿತರು ಭೇಟಿಯಾದರು. ಓರ್ವ ವೈದ್ಯ, ಅವನ ಹೆಸರು ಶಿವರಾಜ; ಇನ್ನೊಬ್ಬ ಶಾಲಾ ಶಿಕ್ಷಕ ಚಂದ್ರಚೂಡ. ಮತ್ತೊಬ್ಬ ಮೃತ್ಯುಂಜಯ ವೃತ್ತಿಯಿಂದ ನ್ಯಾಯಾಧೀಶ. ಬಾಲ್ಯ ಸ್ನೇಹಿತರಾಗಿದ್ದ ಇವರು ತಮ್ಮ ತಮ್ಮ ವೃತ್ತಿಯಲ್ಲಿ ನಿರತರಾಗಿ, ದೂರದೂರದ ಊರುಗಳಲ್ಲಿ ಕಾಯಕ ಮಗ್ನರಾಗಿದ್ದರು. ರಾಜಧಾನಿಯಲ್ಲಿ ಪರಸ್ಪರ ಭೇಟಿಯಾದಗ ವೈದ್ಯ ಶಿವರಾಜ ಉಳಿದಿಬ್ಬರನ್ನು ತನ್ನ ಮನೆಗೆ ಆಹ್ವಾನಿಸಿದನು. ಕುಶಲವಾರ್ತೆಗಳ ವಿನಿಮಯ ಮುಗಿದ ಮೇಲೆ ತಮ್ಮ ವೃತ್ತಿಗಳ ವಿಷಯದಲ್ಲಿ ಮಾತನಾಡ ತೊಡಗಿದರು. ಶಿವರಾಜ ನುಡಿದ :

"ನಾನು ಬಹಳ ಪ್ರಾಮಾಣಿಕ ವೈದ್ಯ. ನನ್ನ ಕರ್ತವ್ಯದಲ್ಲಿ ಲೋಪಗಳನ್ನು ಮಾಡುವುದೇ ಇಲ್ಲ. ಕೇವಲ ಒಂದೇ ಒಂದು ಬಾರಿ ಮಾತ್ರ ತಪ್ಪು ಮಾಡಿದೆ."

"ಏನದು ?" ಉಳಿದವರಿಬ್ಬರೂ ಕುತೂಹಲದಿಂದ ಕೇಳಿದರು.

"ಒಂದು ಬಾರಿ ಪಕ್ಕದ ಹಳ್ಳಿಯ ಭಾರೀ ಶ್ರೀಮಂತರು ಊಟಕ್ಕೆ ಆಹ್ವಾನಿಸಿದರು. ನಾನು ಸಿದ್ಧನಾಗಿ ಹೊರಟೆ. ಅದು ಹೊಸ ಆಮಂತ್ರಣ. ಮುಂದೆ ಅವರ ಗೃಹವೈದ್ಯನಾಗಿ ಚೆನ್ನಾಗಿ ಗಳಿಸಬಹುದೆಂಬ ಅಪೇಕ್ಷೆ ಇತ್ತು. ಅಷ್ಟರಲ್ಲಿ ಓರ್ವ ಬಡವಿ ಬಂದು ಕಾಲಿಗೆರಗಿ ದುಃಖಿಸುತ್ತ ತನ್ನ ಗಂಡ ಸಾವಿನ ಶಯ್ಯೆಯಲ್ಲಿರುವುದಾಗಿ ಬಂದು ಉಳಿಸಲು ಕೋರಿದಳು.

ಆ ಶ್ರೀಮಂತರ ಪರಿಚಯ ಸಮಾರಂಭ, ಸ್ನೇಹ ಬಿಡಲಿಚ್ಛೆ ಇಲ್ಲದೆ ಆ ನಿರ್ಗತಿಕಳ ಮಾತನ್ನು ಲೆಕ್ಕಿಸದೆ ಊಟಕ್ಕೆ ಸಾಗಿದೆ. ಆದರೆ ಅಲ್ಲಿಗೆ ಹೋಗುವಷ್ಟರಲ್ಲಿ ಆಮಂತ್ರಿಸಿದವರಿಗೆ ಮೈಲಿಗೆ ಒದಗಿ ಊಟ ಇಲ್ಲವಾಗಿತ್ತು. ಕಾರಣವೆಂದರೆ ಅವರ ಬಂಧುಗಳಲ್ಲೊಬ್ಬ ಸತ್ತುಹೋಗಿದ್ದ. ಆ ಸತ್ತ ಬಂಧು ಮತ್ತಾರೂ ಆಗಿರದೆ ಬಂದು ಬೇಡಿಕೊಂಡ ಬಡವಿಯ ಪತಿಯೇ ಆಗಿದ್ದ. ನನ್ನ ಉದಾಸೀನದಿಂದ ಆ ಮನುಷ್ಯನ ಪ್ರಾಣಹೋಯಿತು. ಆದರೆ ಅವನ ಪ್ರಾರಬ್ಧ ಎಂದುಕೊಂಡು ಸುಮ್ಮನಾದೆ. ಇದೊಂದೇ

ನಾನು ಮಾಡಿದ ಕರ್ತವ್ಯಲೋಪ. ಮತ್ತ್ಯಾವಾಗಲೂ ತಪ್ಪಿಲ್ಲ. ಅದೇನು ಮಹಾ. ತಪ್ಪಲ್ಲ......"

ಇಲ್ಲಿಯವರೆಗೆ ಮೌನದಿಂದ ಆಲಿಸುತ್ತಿದ್ದ ಶಿಕ್ಷಕ ಹೇಳಿದ :

"ನನ್ನ ತರಗತಿಯಲ್ಲಿ ಇಬ್ಬರು ವಿದ್ಯಾರ್ಥಿಗಳಿದ್ದರು. ಒಬ್ಬ ಧನವಂತರಾದ ಊರಮುಖಂಡರ ಮಗ. ಇನ್ನೊಬ್ಬ ವ್ಯವಸಾಯಗಾರನ ಮಗ. ಧನವಂತರ ಮಗನಿಗೆ ಎಲ್ಲಾ ಸೌಕರ್ಯಗಳಿದ್ದರೂ ಸರಿಯಾಗಿ ಓದುತ್ತಿರಲಿಲ್ಲ. ಒಕ್ಕಲಿಗರ ಮಗನಿಗೆ ಬಡತನವಿದ್ದರೂ ಚೆನ್ನಾಗಿ ಓದುತ್ತಿದ್ದ. ಒಮ್ಮೆ ಉಭಯತರಿಗೂ ಜಗಳವಾಗಿ, ಧನವಂತರ ಮಗ ತನ್ನ ತಂದೆಯ ಬಳಿ ದೂರಿದ. ಅವನು ಬಂದು ಆ ಒಕ್ಕಲಿಗನ ಮಗನನ್ನು ತೇರ್ಗಡೆಮಾಡಬಾರದೆಂದು ಅಪ್ಪಣೆ ನೀಡಿದ. ನನಗೆ ಸಂದಿಗ್ಧ ಉಂಟಾಯಿತು. ಒಕ್ಕಲಿಗರ ಮಗನಿಗೆ ವಂಚನೆ ಮಾಡಲು ಇಷ್ಟವಾಗಲಿಲ್ಲ. ಆದರೆ ಧನವಂತ ಮುಖಂಡ ನನಗೆ ತೊಂದರೆ ಕೊಡಬಹುದೆಂಬ ಭಯವಾಯಿತು. ಹೀಗಾಗಿ ರೈತನ ಮಗನನ್ನು ತೇರ್ಗಡೆ ಮಾಡಲಿಲ್ಲ. ಆದರೆ ಅವರ ತಂದೆ ಮಗನ ಸೋಲನ್ನು ನೋಡಿ ಶಾಲೆ ಬಿಡಿಸಿ ಜೀತ ಮಾಡಲು ಹಚ್ಚಿದ. ಇದೊಂದೇ ನಾನು ಮಾಡಿದ ತಪ್ಪು ಅಂಥ ದೊಡ್ಡದೇನಲ್ಲವಪ್ಪ?"

ಈಗ ನ್ಯಾಯಧೀಶ ಮಿತ್ರ ಆರಂಭಿಸಿದ :

ಒಮ್ಮೆ ಓರ್ವ ಗುಡಿಸಲಿನವ ದೂರು ತಂದ. ಅವನ ಪಕ್ಕದಲ್ಲಿ ಓರ್ವ ಲಕ್ಷಾಧೀಶ ಸುಂದರ ಭವನ ಕಟ್ಟಿಸಿದ. ಮಗ್ಗುಲಲ್ಲಿ ಗುಡಿಸಿಲಿರುವುದು ಸರಿ ಬರದೆ ಜಾಗವನ್ನು ಮಾರಲು ಕೇಳಿದ. ಹಿರಿಯರ ಆಸ್ತಿಯಾದ ಕಾರಣ ಆ ಬಡವನು ಮಾರಲು ನಿರಾಕರಿಸಿದ. ಆಗ ಶ್ರೀಮಂತ ದೌರ್ಜನ್ಯದಿಂದ ಗುಡಿಸಲು ಕೀಳತೊಡಗಿದ್ದ.

ಬಡವನದು ನ್ಯಾಯವೆಂದು ಗೊತ್ತಿತ್ತು ನನಗೆ. ಆದರೆ ಶ್ರೀಮಂತ ಬಹಳ ಪ್ರಭಾವಿ ಇದ್ದ ಮಾತ್ರವಲ್ಲ ನನ್ನ ಮಗಳನ್ನು ಅವನ ತಂಗಿಯ ಮಗನಿಗೆ ಕೊಡಲು ಮಾತಾಗಿತ್ತು. ಈ ಸಂದರ್ಭದಲ್ಲಿ ಬಡವನ ಮುಖ ನೋಡಿದರೆ ನನ್ನ ಮಗಳ ಲಗ್ನ ಸಂಬಂಧವೇ ತಪ್ಪಿ ಹೋಗಬಹುದೆನಿಸಿ, ನಾನು ನನ್ನ ಅಂತಃಸಾಕ್ಷಿಗೆ ವಿರುದ್ಧವಾಗಿ ತೀರ್ಪು ನೀಡಿದೆ. ತಪ್ಪು ತಪ್ಪಾಗಿ ಅಳತೆ ಮಾಡಿಸಿ ಗುಡಿಸಿಲಿದ್ದ ಭೂಮಿಯನ್ನು ಶ್ರೀಮಂತನಿಗೆ ಕೊಡಿಸಿದೆ. ಆಗ ಅವನು, ಅವನ ಹೆಂಡತಿ, ಮಕ್ಕಳು ಇರಲು ನೆಲೆ ಇಲ್ಲದೆ ಬೀದಿಗಿಳಿದರು. ಇದೊಂದೇ ನಾನು ಮಾಡಿದ ತಪ್ಪು. ಭಾರಿ ಘನವಾದುದೇನಲ್ಲ: ಒಬ್ಬರಿಗೊಬ್ಬರು ಸಮಾಧಾನ ಹೇಳಿಕೊಂಡು ಊಟಕ್ಕೆ ಮೇಲೆದ್ದರು.

ಆಗ ವೈದ್ಯ ಹೆಂಡತಿಯನ್ನು ಕೂಗಿ, "ಲೇ!, ಶಾಂತಾ ಅಡಿಗೆ ಆಯಿತ ? ಅತಿಥಿಗಳನ್ನು ಕರೆತರಲೇ ಎಂದ. ಅವಳು ಮ್ಲಾನವದನಳಾಗಿ ಮಲಗುವ ಕೋಣೆಯಿಂದ ಬಂದು, "ಕ್ಷಮಿಸಿರಿ, ನಾನು ಎಂದೂ ತಪ್ಪು ಮಾಡಿದವಳಲ್ಲ. ಇಂದು ತುಂಬಾ ಬಳಲಿಕೆಯಾಯ್ತು. ಏನೂ ಅಡಿಗೆ ಮಾಡಿಲ್ಲ......."

ವೈದ್ಯ ಕನಲಿ ಕೆಂಡವಾದ. "ಅವಿವೇಕಿ ಮೊದಲೇ ಹೇಳಬಾರದೆ? ಸಂಜೆಗಾದರೂ ಹೇಳಿದ್ದರೆ ಎಲ್ಲಿಂದಾದರೂ ಊಟದ ಗೃಹಗಳಿಂದ ತರಿಸಬಹುದಿತ್ತು. ಈಗ ಸರಿರಾತ್ರಿ ಏನು ಮಾಡಲು ಸಾಧ್ಯ ?" "ಏನು ಮಹಾಬಿಡಿರಿ. ಒಂದು ರಾತ್ರಿ ಊಟವಿಲ್ಲದಿದ್ದರೆ ಏನಾಗುತ್ತೆ...." ಶಾಂತಳಾಗಿ ನುಡಿದಳು. "ಲೇ ಮೂರ್ಖಳೇ, ಬಂದ ಅತಿಥಿಗಳನ್ನು ಬರೀ ಹೊಟ್ಟೆಯಲ್ಲಿ ಮಲಗಿಸಿದರೆ ಪಾಪ ಬರುತ್ತೆ. ನನ್ನ ಕರ್ತವ್ಯಕ್ಕೆ ಭಂಗ ಬರುತ್ತೆ. ಗೃಹಿಣಿಯಾದ ನಿನ್ನ ಕರ್ತವ್ಯಕ್ಕೆ ಕಳಂಕ ಬರುತ್ತೆ...." ಬುಸುಗುಟ್ಟಿದ. "ನಿಜ, ನನ್ನ ಕರ್ತವ್ಯಕ್ಕೆ ಭಂಗ ಬಂದಾಗ ನಿಮಗೆ ಕೇವಲ ಒಂದು ಹೊತ್ತಿನ ಊಟಕ್ಕೆ ಕೊರತೆ, ನಿಮ್ಮ ಕರ್ತವ್ಯ ತಪ್ಪಿದಾಗ ಒಂದು ಜೀವ ಹಾನಿ ; ಈ ಶಿಕ್ಷಕರ ಕರ್ತವ್ಯದಲ್ಲಿ ಚ್ಯುತಿ ಬಂದಾಗ ಓರ್ವ ಪ್ರತಿಭಾವಂತ ವಿದ್ಯಾರ್ಥಿಯ ಬಾಳಿಗೆ ಹಾನಿ; ಈ ನ್ಯಾಯಧೀಶರ ಕರ್ತವ್ಯ ದಾರಿ ಬಿಟ್ಟಾಗ ಇಡೀ ಸಂಸಾರ ಬೀದಿಗಿಳಿಯಿತು. ಅಂಥ ದೊಡ್ಡ ಅಪರಾಧ ನನ್ನದಲ್ಲವಷ್ಟೇ...."

ಮೂವರು ಮಿತ್ರರೂ ಬೆರಗಾಗಿ, ಸ್ತಂಭೀಭೂತರಾಗಿ ನಿಂತರು ಆಗ ಆ ಶಾಂತಮ್ಮ ಹೇಳಿದಳು :

"ನೀವುಗಳು ಮಾಡಿದ ತಪ್ಪನ್ನು ಏನೂ ಮಹಾ ಅಲ್ಲ ಎಂದು ಸಮರ್ಥಿಸಿಕೊಳ್ಳುತ್ತಿದ್ದೀರಲ್ಲಾ, ಇದು ಸರಿಯೆ? ದೊಡ್ಡ ಸ್ಥಾನದಲ್ಲಿದ್ದವರು ಎಚ್ಚರದಿಂದ ವರ್ತಿಸಬೇಕು. ಇನ್ನೊಬ್ಬರ ಮೇಲಾಗುವ ಅನ್ಯಾಯ, ಪರಿಣಾಮಗಳನ್ನು ಹೊಣೆಯರಿತು ಚಿಂತಿಸಬೇಕು...."

ಮೂವರ ಕಣ್ಣುಗಳಲ್ಲಿ ಪಶ್ಚಾತ್ತಾಪ ಮಿನುಗುತ್ತಿತ್ತು. ಆಗ ಶಾಂತಮ್ಮ ನುಡಿದಳು :

"ಏಳಿ, ಊಟ ಸಿದ್ಧವಾಗಿದೆ. ಇನ್ನು ಮುಂದಾದರೂ ಕರ್ತವ್ಯದಲ್ಲಿ ಲೋಪ ಬರಬಾರದೆಂದು ಹೀಗೆ ಹೇಳಿದೆ. ನನ್ನ ಉದ್ಧಟತನಕ್ಕೆ ಕ್ಷಮಿಸಿ...."

"ಇಲ್ಲ ತಾಯಿ ತಾವು ಗುರುವಾಗಿ ಮಾರ್ಗತೋರಿದಿರಿ...." ಅತಿಥಿದ್ವಯರು ನುಡಿದು ಊಟಕ್ಕೆ ಎದ್ದರು. ★

(೧೬ನೇ ಪುಟದಿಂದ ಬಂದುದು)

ಯೊಂದು ವಸ್ತ್ರವನ್ನೂ (ಸೌದೆಯನ್ನ ಸಹ) ತೊಳೆಯುವುದು, ಪ್ರಾಣ ಹೋಗುವ ದಾಹವಾಗಿದ್ದರೂ ಎರಡು ಊಟಗಳ ಮಧ್ಯೆ ನೀರನ್ನು ಕುಡಿಯದಿರುವುದು, ಎಷ್ಟೇ ಸುಸ್ತಾದರೂ ಮಡಿ ಕೆಟ್ಟೀತೆಂದು ಔಷಧಿ ಸ್ವೀಕರಿಸದಿರುವುದು ಶುಷ್ಕಾಚಾರ. ಸ್ನಾನ ಮಾಡುವುದು ಆರೋಗ್ಯಕಾರಕ. ಆದರೆ ಅದೇ ಅತಿಯಾದರೆ ಇನ್ನೊಬ್ಬರಿಗೆ ಆತಂಕ. ವಸ್ತ್ರಗಳನ್ನು ತೊಳೆದು ಉಪಯೋಗಿಸುವುದು ಆರೋಗ್ಯದ ಸೂತ್ರ. ಸೌದೆಯನ್ನು ತೊಳೆದರೆ ಅಡಿಗೆ ಮಾಡುವವನ ಗತಿ ; ನಾಲಿಗೆ ಸಂಯಮಕ್ಕಾಗಿ ಮಧ್ಯೆ ಮಧ್ಯೆ ತಿನ್ನದಿರುವುದು ಉತ್ತಮ. ಪ್ರಾಣಹೋಗುವ ದಾಹವಾದರೂ ನೀರು ಕುಡಿಯದಿದ್ದರೆ ಜಠರಕ್ಕೆ, ಮೂತ್ರ ಪಿಂಡಕ್ಕೆ ಎಷ್ಟು ತೊಂದರೆ ? ಔಷಧಿ ತಿಂದರೆ ಮಡಿ ಕೆಡುವುದೆಂದು ಆರೋಗ್ಯ ಕೆಡಿಸಿಕೊಂಡು ಇನ್ನೊಬ್ಬರಿಗೆ ಭಾರವಾಗಿ ಮಲಗು ವುದಕ್ಕಿಂತ ಔಷಧಿ ತಿಂದು ಗುಣ ಮುಖವಾಗಿ ಸ್ವಾವಲಂಬಿಯಾಗುವುದು ಲೇಸಲ್ಲವೆ ? ಇಂಥ ಆಚರಣೆಗಳು ತಪ್ಪೆಂದು ಮನದಟ್ಟು ಮಾಡಿಕೊಟ್ಟರೂ ಅಯ್ಯೋ ಇಷ್ಟು ದಿನಾ ಮಾಡಿರೋವನ್ನು ಈಗ ಹೇಗೆ ಒಮ್ಮೆಗೇ ಬಿಟ್ಟುಕೊಡುವದು? ಎಂಬ ಜಿಗುಟು.

ಈ ಎಲ್ಲವರಿಂದ ಭಿನ್ನವಾದ ಮತ್ತೊಂದು ಆಚಾರ, ಡಂಭಾಚಾರ. ಆಡಂಬರ, ಡಾಂಭಿಕತನ, ವೈಭವ ಮುಂತಾದವುಗಳಿಂದ ವಿಜೃಂಭಿಸುವುದು ಡಂಭಾಚಾರ. ಸರಳವಾಗಿ ಜನಸಾಮಾನ್ಯರೊಡನೆ ಬೆರೆತು ಸಮಾಜ ಸೇವೆ ಗೈದರೆ ತನ್ನ ಗೌರವಕ್ಕೆ ಧಕ್ಕೆ ಎಂದು ಶ್ರೀಸಾಮಾನ್ಯರಿಂದ ತೀರಾ ದೂರದಲ್ಲಿ ನಿಲ್ಲುವುದು, ಇನ್ನೊಬ್ಬರು ಕಾಣುವಂತೆ-ಕೀರ್ತಿವಾರ್ತೆಗಾಗಿ ಭಕ್ತಿ ಮಾಡುವುದು; ದೇವನನ್ನೊಲಿಸಲು ಸರಳವಾದ ಸಲಕರಣೆ, ನಿಷ್ಕಲ್ಮಶ ಭಕ್ತಿ – ಇವೇ ಸಾಕಿದ್ದರೂ ಜನರ ಕಣ್ಣು ಕುಕ್ಕಿಸುವ ಪ್ರದರ್ಶನ ವೈಭವ ಮುಂತಾದವು ಡಂಭಾಚಾರದ ಉದಾಹರಣೆಗಳು.

ಈ ಎಲ್ಲದರಿಂದ ಹೊರತಾದ ಸದ್ಗುಣಗಳ ಸೌರಭದಿಂದ ಬಿರಿಯುವ ಸರಳ ಕುಸುಮ ಸದಾಚಾರ. ಇದು ಮೂಢಾಚಾರಕ್ಕೆ ಅವಕಾಶವೀಯದ ತಾತ್ವಿಕ ದೃಷ್ಟಿ ಕೋನ ನೀಡುತ್ತದೆ. ಅರ್ಥರಹಿತ ಶುಷ್ಕಾಚಾರಕ್ಕೆ ಆಸ್ಪದವೀಯದ ವೈಚಾರಿಕ ನಡೆ-ನುಡಿ ಕಲಿಸುತ್ತದೆ. ಅಂತರಂಗ ಶುದ್ಧಿ, ಅಂತರಾವಲೋಕನಗಳ ಕಡೆಗೆ ಗಮನ ನೀಡುತ್ತದೆ. ಅಧ್ಯಾತ್ಮ ಜೀವಿಗಳ ಹೃದಯಕ್ಕೆ ತಂಪೆರೆಯಬಲ್ಲುದು ಇದೇ ವಿನಾ ಉಳಿದಾವು ಅಲ್ಲ. ನಿಜವಾದ ಸಾತ್ವಿಕಾಚರಣೆಯು ಅನುಭಾವಿಗಳಿಂದಲೇ ಅಷ್ಟಿಷ್ಟು ದಾರ್ಮಿಕ ಪ್ರಜ್ಞೆ ಸಮಾಜದಲ್ಲಿ ಉಳಿದಿದೆ ಮತ್ತು ಜಾಗೃತವಾಗುತ್ತದೆ ಎಂದರೆ ತಪ್ಪಾಗದು.

ಆದ್ದರಿಂದಲೇ ಅನುಭಾವಿಗಳು (ಪಂಡಿತರಲ್ಲ, ಡಾಂಭಿಕರಲ್ಲ) ಬದುಕಿನ ಬಗೆ ಯನ್ನು ನಂಬಿದ ನಂಬುಗೆಗಳನ್ನು, ಸಾಧಿಸಿದ ಸಿದ್ಧಿಗಳನ್ನು ಮಾರ್ಗದರ್ಶಕ ಕೈಪಿಡಿ ಯನ್ನಾಗಿ ಇರಿಸಿಕೊಳ್ಳಬೇಕೇ ಹೊರೆತು ತಪ್ಪುತಪ್ಪಾಗಿ ಆಚರಿಸುವವರ ನಡೆ ಕಂಡು ಧರ್ಮ-ದೇವರ ಬಗ್ಗೆಯೇ ಜಿಗುಪ್ಸೆ ತಾಳಬಾರದು.

★

ಮಾತು ಜ್ಯೋತಿರ್ಲಿಂಗ

ಸಂಗ್ರಹಕಾರ : ಭೇ. ಪ. ಹರೀಶ (ಜ್ಯೋತಿ), ಸಂಜನಗೂಡು.

೧. ಜ್ಞಾನಿಗೆ ಬಂದ ದಾರಿದ್ರ್ಯಕ್ಕಿಂತ ಅಜ್ಞಾನಿಗೆ ಬಂದ ಐಶ್ವರ್ಯದಿಂದ ಸಮಾಜಕ್ಕೆ ಹೆಚ್ಚಿನ ಹಾನಿ. —ತಿರುಕ್ಕುರಳ್

೨. ನೀನು ಹುಚ್ಚನಾಗ ಬೇಕಾದರೆ ವಿಷಯ ವಸ್ತುಗಳಿಗಾಗಿ ಹುಚ್ಚನಾಗಬೇಡ ; ಭಗವಂತನ ಪ್ರೇಮಕ್ಕಾಗಿ ಹುಚ್ಚನಾಗು. —ರಾಮಕೃಷ್ಣ ಪರಮಹಂಸ

೩. ನೀನು ಮಾಡಿದ ಸಹಾಯವನ್ನು ಕುರಿತು ಅದನ್ನು ಪಡೆದವರಿಗೆ ನೆನಪು ಮಾಡುವುದು, ಅವನನ್ನು ಬೈದಂತೆಯೇ. —ಡೆಮೊಸ್ತನೀಸ್

೪. ಪುಣ್ಯಕಾರ್ಯ ಮಾಡಲು ನಿಧಾನ ಮಾಡಿದ ಮನಸ್ಸು ಪಾಪದ ಕಡೆ ತ್ವರಿತ ವಾಗಿ ಓಡುತ್ತದೆ. —ಅನುಭವವಾಣಿ

೫. ಹುಡುಗಿ ಎಷ್ಟೇ ಚೆಲುವೆಯಾಗಿದ್ದರೂ ಯುವಕರ ಮನಸ್ಸನ್ನು ಸೆಳೆದಾಳೇ ಹೊರತು ಹರೆಯಕ್ಕೆ ಬಾರದ ಹುಡುಗರ ಹೃದಯವನ್ನು ಗೆದೆಯಲಾರಳು. ಹಾಗೆಯೆ ವಿದ್ವಾಂಸರ ವಿದ್ವತ್ತು ಸಾಹಿತ್ಯ ಪ್ರಜ್ಞೆ ಇರುವವರಲ್ಲಿ ಅಮೃತದಂತಹ ಆಹ್ಲಾದವನ್ನು ಮೂಡಿಸುತ್ತದೆ. ಅರಸಿಕ ಇದನ್ನು ಮೆಚ್ಚಿಕೊಳ್ಳದ ಇದ್ದರೆ ಯಾವ ನಷ್ಟವೂ ಇಲ್ಲ.

೬. ಪರಿಶುದ್ಧವಾಗಿರುವ ಸಮುದ್ರದಲ್ಲಿ ಒಂದು ಕಪ್ಪೆ ಸತ್ತ ಮಾತ್ರಕ್ಕೆ ಸಮುದ್ರದ ನೀರು ಕೆಡುವುದಿಲ್ಲ. ದುರ್ವಾಸನೆಯೂ ಬರುವುದಿಲ್ಲ. ಹಾಗೆಯೇ ಧರ್ಮವು ಪವಿತ್ರವಾದುದು. ಒಬ್ಬಾತ ಕೆಟ್ಟುಹೋದ ಮಾತ್ರಕ್ಕೆ ಧರ್ಮ ಎಂದಿಗೂ ಕೆಡುವುದಿಲ್ಲ.

೭. ಒಳ್ಳೆಯ ಕಾನೂನುಗಳು ಇಲ್ಲದಿದ್ದರೂ ಅಡ್ಡಿಯಿಲ್ಲ ಒಳ್ಳೆಯ ಜನರಿರಬೇಕು. —ಅರಿಸ್ಟಾಟಲ್

೮. ದುಷ್ಟನಿಗೆ ನಮಸ್ಕಾರ ಮಾಡಿದರೆ ಒದೆಯುತ್ತಾನೆ, ಒದ್ದರೆ ನಮಸ್ಕರಿಸುತ್ತಾನೆ

೯. ಮದುವೆ ಸಮಾರಂಭಕ್ಕೆ ಕರೆದರೆ ಮಾತ್ರ ಹೋಗಬೇಕು, ಸ್ಮಶಾನ ಯಾತ್ರೆಗೆ ಕರೆಯದಿದ್ದರೂ ಹೋಗಬೇಕು.

೧೦. ಗಂಡಸು ಜೀವನದಲ್ಲಿ ಮೂರು ವಸ್ತುಗಳನ್ನು ಅಪೇಕ್ಷಿಸುತ್ತಾನೆ–ಒಳ್ಳೆಯ ಕೆಲಸ, ಒಳ್ಳೆಯ ಊಟ, ಒಳ್ಳೆಯ ಹೆಂಡತಿ.

ಬೋಳುಬಸವನ ಬೊಂತೆ-೬

ಜೀವನ ಧರ್ಮ

—ಪಿ. ಬಸವಣ್ಣ

ಅರಿಗಳಾರನು ಜಯಿಸಿ ಸಿರಿಬರಲು ಗರ್ವಿಸದೆ
ಗುರುತರದ ಕಷ್ಟದೊಳು ಧೈರ್ಯಗೆಡದೆ
ಹರಯದೊಳು ಶಮೆದಾಳಿ ಶರಣು ಹೊಗುವರ ಪೊರೆದು
ಕರುಣೆದೋರೆಲ್ಲರೊಳು —ಬೋಳುಬಸವ ॥ ೧ ॥

ಮಧುಮಾಸ ಕೋಕಿಲ ಧ್ವನಿ ಸುಧೆಯು ರಸಿಕರ್ಗೆ
ಸುದತಿಯಧರವು ಸುಧೆಯು ಸತಿಮೋಹಿಗೆ
ಸದುಹೃದಯನಿಗೆ ಕಾವ್ಯದಿನಿರಸವು ವರಸುಧೆಯು
ತೊದಲು ತಾಯಿಗೆ ಸುಧೆಯು —ಬೋಳುಬಸವ ॥ ೨ ॥

ಸತ್ಯವಾಡುವ ಜೀವ ಸತ್ತುಹೋಗದು ಜಗದಿ
ಸತ್ಯ ಕಾಯ್ವುದು ತನ್ನ ಬಿಡದವರನು
ಸತ್ಯ ಬಿಡದಿರಲಿಂದು ನಿತ್ಯನು ಹರಿಶ್ಚಂದ್ರ
ಸತ್ಯಕಿಂ ತಪಮುಂಟೆ —ಬೋಳುಬಸವ ॥ ೩ ॥

ದಯೆಯಿಲ್ಲದಿಹ ಮನುಜ ಧರ್ಮಬೋಧಿಸಬಹುದೆ
ದಯೆಗಿಂತ ಮಿಗಿಲಾದ ಧರ್ಮಮುಂಟೆ
ನಯವಿನಯದಿಂ ಸಕಲ ಪಶು ಪಕ್ಷಿಗಳ ಮೇಲೆ
ದಯೆದೋರ್ಪವನೆ ದೇವ —ಬೋಳುಬಸವ ॥ ೪ ॥

ಅಬಲನಾದರು ನೀನು ಆತ್ಮ ಗೌರವ ಬಿಡದೆ
ವಿಬುಧಮಾನ್ಯರು ನಡೆದ ಹಾದಿಯಲ್ಲಿ
ಅಭಿಮಾನಕಲ್ಪವೂ ಚ್ಯುತಿಬಾರದೊಲು ನಡೆದು
ಅಭಿಮಾನಧನನಾಗು —ಬೋಳುಬಸವ ॥ ೫ ॥

ಆದಿದೈವವು ಮಾತೆ ಪಿತನೆರಡನೆಯ ದೈವ
ಬೋಧಿಸುವ ಗುರುತಾನೆ ಅಧಿದೈವವು
ಮೋದದಿಂದೈತಂದ ಅತಿಥಿಯೇ ಪರದೈವ
ವೇದಸಾರುವುದಿಂತು—ಬೋಳುಬಸವ ॥ ೬ ॥

ಕಾಸು ಬರೆ ಕೋಶವನು ಕೋಶ ಬರೆ ದೇಶವನ್ನು
ದೇಶ ಬರೆ ಬ್ರಹ್ಮಾಂಡದೀಶತ್ವವ
ಆಶಿಸುತೆ ಮುಂದಣದ ಬಯಸುವುದು ಮನಮನಲು
ಆಶೆಗೆಲ್ಲಿಯ ಕೊನೆಯು —ಬೋಳುಬಸವ ॥ ೭ ॥

ಕಪಟವಂಚನೆ ಮೋಸವಪಕಾರ ಮುಂತಾದ
ವಿಪರೀತ ದುಷ್ಕಾರ್ಯ ಗೈದಿದ್ದರು
ಸಫಲವಾಗಲು ಜನ್ಮ ಮುಂದಾದರುಂ ಬಿಡದೆ
ಜಪಿಸು ಪಂಚಾಕ್ಷರಿಯ —ಬೋಳುಬಸವ ॥ ೮ ॥

ಮುಡಿಗೆ ಮಲ್ಲಿಗೆ ಚೆಂದ ಗುಡಿಗೆ ಗೋಪುರ ಚೆಂದ
ಗಿಡಮರಕೆ ಹೂ ಹಣ್ಣು ಚಿಗುರು ಚೆಂದ
ಉಡುಪ ಗಗನಕೆ ಚೆಂದ ಜಡಜ ಸರಸಿಗೆ ಚೆಂದ
ನಡತೆ ನಾರಿಗೆ ಚೆಂದ —ಬೋಳುಬಸವ ॥ ೯ ॥

ಭರದಿಂದ ಕೊನೆಗೊಳಿಸು ಕೈಕೊಂಡ ಕೆಲಸವನು
ಜರೆಯುಡರಿ ಜೀವ ಹೋಗಲಿಕೆ ಮುನ್ನ
ಬರಿದೆ ಮುಂದೂಡದಿರು ನಾಳೆ ಗೈಯುವೆನೆಂದು
ಸ್ಥಿರವಲ್ಲವೀ ದೇಹ—ಬೋಳುಬಸವ ॥ ೧೦ ॥

ಹಿತವಾಗಿ ನಡೆಯುತ್ತ ಮಿತವಾಗಿ ನುಡಿಯುತ್ತ
ಅತಿಯನೆಲ್ಲದರಲ್ಲಿ ಬಿಡುತ ಜಗದಿ
ಗತಿಹೀನರನು ಕಂಡು ಪತಿಕರಿಸಿ ನೀಡಿದರೆ
ಗತಿಯಿದುವೆ ಇಹಪರಕೆ —ಬೋಳುಬಸವ ॥ ೧೧ ॥

ನಿಟ್ಟುಸಿರ ಬಿಡಬೇಡ ಕೆಟ್ಟ ಜನರಿಹರೆಂದು
ಮೊಟ್ಟಮೊದಲಾಗು ನೀನೊಳ್ಳೆಯವನು
ಕೆಟ್ಟ ಜನರಲ್ಲೊಬ್ಬ ಕಡಿಮೆಯಾದರೆ ಜಗಕೆ
ಎಷ್ಟೊಂದು ಒಳ್ಳೆಯದು —ಬೋಳುಬಸವ ॥ ೧೨ ॥

ಸ್ಫುರಣ - ಕಿರಣ

—ಮಾತಾಜಿ

ಒಂದು ದಿನ ಶಿಷ್ಯನೊಬ್ಬ ವಿದ್ಯುತ್ ಒಲೆಯ ಮೇಲೆ ಕಾಯಲು ಹಾಲನ್ನಿಟ್ಟಿದ್ದ. ಬಿಸಿ ಹಾಲನ್ನು ಬಂದ ಭಕ್ತರಿಗೆ ತಂದುಕೊಡು ಎಂದಾಗ, ಹಾಲು ಕಾಯ್ದಿದೆಯೋ ಇಲ್ಲವೋ ನೋಡಲು ಹೋಗಿ ಪೆಚ್ಚಾಗಿ ಬಂದು ಐದು ನಿಮಿಷದಲ್ಲಿ ತಂದುಕೊಡುವೆ ಎಂದ. ಏಕೆ ? ಎಂದರೆ, "ನಾನು ಗೋಡೆ ಮೇಲಿನ ಸ್ವಿಚ್ ಹಾಕಿದ್ದೆ. ನಿಜ, ಆದರೆ ಸ್ಟೋವಿನ ಸ್ವಿಚ್ ಹಾಕಿರಲಿಲ್ಲ. ಆದ್ದರಿಂದ ಹಾಲು ಕಾಯ್ದಿಲ್ಲ" ಎಂದ. ಆಗ ತಟ್ಟನೆ ನನಗೆ ಒಂದು ವಿಚಾರ ಸ್ಫುರಿಸಿತು. ೧) ಗೋಡೆ ಮೇಲಿನ ಸ್ವಿಚ್ ೨) ಸ್ಟೋವಿನ ಸ್ವಿಚ್ ಇವೆಯಷ್ಟೆ. ವಿದ್ಯುತ್ ಈ ಎರಡೂ ವಸ್ತುಗಳಲ್ಲೂ ಹರಿಯ ಬೇಕಾದರೆ ಗೋಡೆ ಮೇಲಿನ ಸ್ವಿಚ್ ಮತ್ತು ಸ್ಟೋವಿನ ಸ್ವಿಚ್ ಎರಡೂ ಹಾಕಬೇಕು. ಒಂದು ವೇಳೆ ಎರಡರಲ್ಲಿ ಒಂದನ್ನು ಬಿಟ್ಟರೂ ವಿದ್ಯುತ್ ಸ್ಟೋವಿನಲ್ಲಿ ಪ್ರವಹಿಸದು. ಹಾಗೆ ಸ್ಟೋವೆಂದರೆ ಜೀವ ಅಥವಾ ಭಕ್ತ. ಸ್ಟೋವಿನ ಸ್ವಿಚ್ ಎಂದರೆ ಗುರು. ಅದನ್ನು ಹಾಕುವುದೆಂದರೆ ಗುರುಕರುಣೆ, ದೀಕ್ಷಾ ಸಂಸ್ಕಾರ ಪಡೆಯುವುದು. ಗೋಡೆ ಮೇಲಿನ ಸ್ವಿಚ್ ಎಂದರೆ ಧರ್ಮಗುರು. ಅದನ್ನು ಹಾಕುವುದೆಂದರೆ ಧ್ಯಾನ-ಜಪ-ಪ್ರಾರ್ಥನೆಗಳಿಂದ ಧರ್ಮಗುರುವಿನ ಕಾರುಣ್ಯ ಪಡೆಯುವುದು. ತಂತಿಯಲ್ಲಿರುವ ವಿದ್ಯುತ್ ಎಂದರೆ Grace ಅಥವಾ ದೈವೀಕರುಣೆ. ದೇವನೆಂದರೆ ಮೆಯಿನ್ ಸ್ವಿಚ್. ಅದನ್ನು ಹಾಕುವುದೆಂದರೆ ಸಾಧನೆಯಲ್ಲಿ ತೊಡಗುವುದು. ದೇವರ ಕರುಣೆಯ ವಿದ್ಯುತ್ ಎಲ್ಲೆಡೆಯಲ್ಲಿ ಪ್ರವಹಿಸುತ್ತಿದ್ದರೂ ಧರ್ಮಗುರು ಕರುಣೆಯೆಂಬ ಗೋಡೆಯ ಸ್ವಿಚ್‌ನ್ನು ಒತ್ತಿಕೊಳ್ಳದಿದ್ದರೂ ಜೀವಿಯಲ್ಲಿ ಆತ್ಮಶಕ್ತಿಯ ವಿದ್ಯುತ್ ಪ್ರವಹಿಸದು ಅಥವಾ ದೀಕ್ಷಾ ಎಂಬ ಸ್ವಿಚ್‌ನ್ನು ಒತ್ತದಿದ್ದರೂ ದೈವೀಶಕ್ತಿಯ ವಿದ್ಯುತ್ ಪ್ರವಹಿಸದು. ಆದ್ದರಿಂದ ಮುಕ್ತಿ ಸಾಮ್ರಾಜ್ಯದಲ್ಲಿ ನಾಲ್ಕು ತತ್ವಗಳು ಬರುತ್ತವೆ. ೧. ಮುಕ್ತಿದಾತ ೨. ಮುಕ್ತಿದಾಯಕ ೩. ಮುಕ್ತಿಮಾರ್ಗದರ್ಶಕ ೪. ಮುಕ್ತಾತ್ಮ. ಮೆಯಿನ್ ಸ್ವಿಚ್ ಮುಕ್ತಿದಾತ ದೇವರು ; ಮುಕ್ತಿದಾಯಕ ಧರ್ಮಪಿತ್ರ ಧರ್ಮ ಗುರು; ಮುಕ್ತಿ ಮಾರ್ಗದರ್ಶಕ ದೀಕ್ಷೆ ನೀಡುವ ದೀಕ್ಷಾಗುರು.

ಕೇವಲ ಕೆಲವು ಸ್ಟೋವ್‌ಗಳು ಮಾತ್ರ ಸ್ವತಂತ್ರ ಸ್ವಿಚ್ ಇಲ್ಲದೆ ಗೋಡೆ ಮೇಲಿನ ಸ್ವಿಚ್‌ನಿಂದಲೇ ಕೆಲಸ ಮಾಡುತ್ತವೆ. ಹಾಗೆಯೇ ಕೇವಲ ಕೆಲವು ಪ್ರವಾದಿಗಳು ಅಂದರೆ ಜೀಸಸ್, ಬುದ್ಧ, ಬಸವಣ್ಣ, ಮುಂತಾದವರ ಬದುಕಿನಲ್ಲಿ ಮಾತ್ರವೇ ದೈವೀಕರುಣೆ ಯಾವ ದೀಕ್ಷಾಗುರುವಿಲ್ಲದೆಯೇ ಪ್ರವಹಿಸಬಹುದು.

* *

ಒಂದು ಹೊಲವು ಕೆರೆಯಬದಿಯಲ್ಲಿತ್ತು. ಆದರೆ ಅದು ದಿಬ್ಬದ ಮೇಲಿತ್ತು ಹೀಗಾಗಿ ಕೆರೆಯ ಮಗ್ಗುಲಲ್ಲೇ ಇದ್ದರೂ ಒಣಭೂಮಿ (Dry Land) ಎನಿಸಿಕೊಂಡಿತ್ತು. ಖುಷ್ಕಿ ಭೂಮಿಯ ಬೆಳೆಯನ್ನೇ ಬೆಳೆಯುತ್ತಿತ್ತು. ಅದನ್ನು ನೋಡಿ ಒಂದು ವಿಚಾರ ಸ್ಫುರಿಸಿತು. 'ಕೆರೆಯ ಬದಿಯಲ್ಲೇ ಇದ್ದರೂ, ಅದರ ನೀರನ್ನು ಉಪಯೋಗಿಸಿಕೊಳ್ಳದ ಭೂಮಿ ಖುಷ್ಕಿ ಭೂಮಿ ಹೇಗೆ ಅನ್ನಿಸಿಕೊಳ್ಳುವದೋ ಹಾಗೆಯೇ ವಚನ ಸಾಹಿತ್ಯ ಸಂಶೋಧನಾಗಾರದಲ್ಲೇ ಕೆಲಸ ಮಾಡುತ್ತಿರಲಿ, ಪ್ರವಚನ ಮಂದಿರಗಳ ಬದಿಯಲ್ಲೇ ಮನೆಕಟ್ಟಿಕೊಂಡಿರಲಿ, ದೇವಾಲಯಗಳ ಸನಿಹದಲ್ಲೇ ಇರಲಿ ಅವು ಲೌಕಿಕ ಭೂಮಿ ಎನಿಸಿಕೊಂಡಾವೇ ವಿನಾ ಅಧ್ಯಾತ್ಮಿಕ ಜೀವಿಗಳೆನಿಸಿಕೊಳ್ಳವು. ಅವುಗಳಲ್ಲಿ ಖುಷ್ಕಿ ಬೆಳೆ ಅಂದರೆ ಲೌಕಿಕ ಬಯಕೆಗಳ ಬೆಳೆ ಬಂದೀತೇ ವಿನಾ ನೀರಾವರಿ ಬೆಳೆ ಅಂದರೆ ಪಾರಮಾರ್ಥಿಕ ಆದರ್ಶಗಳ ಬೆಳೆಯಲ್ಲ.

* * *

ಒಮ್ಮೆ ಸಿದ್ಧರಾಮೇಶ್ವರ ಪ್ರವಚನ ನಡೆಯಿಸಿದ್ದೆ. ಅಲ್ಲಿ ಒಂದು ವಾಕ್ಯ ಬಂದಿತು "ವಚಿಸಿ ಅನುಭವಿಯಾಗದವ ಪಿಶಾಚಿಯಯ್ಯಾ;" "ಹಾಡಿದೊಡೇನು ಆಡಿದೊಡೇನು ತ್ರಿವಿಧ ದಾಸೋಹವಿಲ್ಲದನ್ನಕ್ಕ". ಆಗ ಉದಾಹರಣೆಯೊಂದು ಸ್ಫುರಿಸಿತು. ಹುಲ್ಲುಕತ್ತರಿಸುವ ಒಂದು ಯಂತ್ರವಿದೆ. ಅದಕ್ಕೆ ಹುಲ್ಲು ಕೊಡುತ್ತೇವೆ. ಆಗ ಅದು ಚೂರು ಚೂರು ಮಾಡಿ ಉದುರಿಸುತ್ತದೆ. ಅದೇ ಹಸುವಿನ ಬಾಯಿಗೆ ಕೊಟ್ಟಾಗ ಅದು ಹುಲ್ಲನ್ನು ತಿಂದು, ರಕ್ತಗತ ಮಾಡಿಕೊಂಡು ಮರಳಿ ಹಾಲನ್ನು ಕೊಡುವುದಲ್ಲದೆ, ತನಗೆ ನಿಷ್ಪ್ರಯೋಜಕವಾದ ಸಗಣಿಯನ್ನು ಹೊರಚೆಲ್ಲುವುದು. ಇದೇ ರೀತಿ ಪಂಡಿತ ಅಥವಾ ಶಾಸ್ತ್ರಜ್ಞಾನಿ ಮತ್ತು ಅನುಭಾವಿಗೆ ಇರುವ ವ್ಯತ್ಯಾಸವಿದೆ. ಶಾಸ್ತ್ರಗಳನ್ನು ವಿಧವಿಧವಾಗಿ, ಶಾಬ್ದಿಕವಾಗಿ ವಿಶ್ಲೇಷಿಸಿ ಅರ್ಥ ಮಾಡುವವನು ಹುಲ್ಲು ಕತ್ತರಿಸುವ ಯಂತ್ರದಂತೆ. ಆದರೆ ಅನುಭಾವಿಯೆಂದರೆ ಹಸುವಿನಂತೆ. ಶಾಸ್ತ್ರಜ್ಞಾನದ ಹುಲ್ಲನ್ನು ಸ್ವೀಕರಿಸಿ, ತನ್ನ ಅನುಭಾವದಲ್ಲಿ ಪಚನಿಸಿಕೊಂಡು ವಾಙ್ಮಯವೆಂಬ ಹಾಲನ್ನಿತ್ತು, ಧರ್ಮಕ್ಕೆ ಅನವಶ್ಯವಾದ ಮೂಢನಂಬಿಕೆ, ಕಂದಾಚಾರಗಳ ಸಗಣಿಯನ್ನು ಹೊರಹಾಕುವನು.

ಗೃಹಪ್ರವೇಶ ವಿಧಾನ

ಪೂಜ್ಯರ ಪಾದಗಳಲ್ಲಿ

ಶಿರಸಾಷ್ಟಾಂಗ ನಮಸ್ಕಾರಗಳು.

ಮಹತ್ವಪೂರ್ಣ ಮಾರ್ಗದರ್ಶನಕ್ಕಾಗಿ ನಾನಿಂದು ಪತ್ರವನ್ನು ಬರೆಯುತ್ತಿದ್ದೇನೆ. ಒಂದು ಹೊಸಮನೆಯನ್ನು ಕಟ್ಟಿಸಿದ್ದೇನೆ. ಆ ಮನೆಯ ಶಾಂತಿ ಮಾಡಬೇಕಾಗಿದೆ. ಆದರೆ ನನಗೆ ಎಲ್ಲ ಜನರೂ ಮಾಡುವಂಥ ಹಳೆಯ ಪದ್ಧತಿ ಇಷ್ಟವಿಲ್ಲ. ಯಾವ ರೀತಿ ಆಚರಿಸಲಿ ಎಂಬ ಬಗ್ಗೆ ಸರಿಯಾಗಿ ಮಾರ್ಗದರ್ಶನ ಮಾಡಿರಿ.

ಬಿ. ಶಾಂತಪ್ಪ,

ಸ್ಟೇಟ್ ಬ್ಯಾಂಕ್ ಆಫ್ ಹೈದರಾಬಾದ್, ಬೀದರ್-585401

ಶರಣರೇ,

ತತ್ತ್ವದ ದೃಷ್ಟಿಯಿಂದ ಮತ್ತು ವೆಚ್ಚದ ದೃಷ್ಟಿಯಿಂದ ಸರಳವಾಗಿ ಮಾಡಲು ಬಸವಣ್ಣನವರ ತತ್ತ್ವದ ಪ್ರಕಾರ ಹೋಮ ಮಾಡಿಯಾಗಲೀ, ಅಥವಾ ಹಸು ಪ್ರವೇಶ ಮಾಡಿಸಿಯಾಗಲೀ, ಬಾಗಿಲಲ್ಲಿ ಕೆಂಪು ನೀರು ತುಂಬಿಸಿದ ಕುಂಬಳಕಾಯಿ ಒಡೆದಾಗಲೀ, ಮನೆಯಲ್ಲಿ ಯಾವಾವೋ ದೇವರುಗಳನ್ನು ಇರಿಸಿಯಾಗಲೀ ಮಾಡಬಾರದು.

ಜ್ಞಾನಿಗಳೋ, ತಪಸ್ವಿಗಳೋ, ಸಹೃದಯರೋ ಆದ ಸ್ವಾಮಿಗಳು ಸಿಗುತ್ತಿದ್ದರೆ ಆಹ್ವಾನಿಸಿ. (ಜಾತಿಯ ಆಧಾರದ ಮೇಲಲ್ಲ, ಅರ್ಹತೆಯ ಆಧಾರದ ಮೇಲೆ. ಅವರು ಬಸವ ತತ್ತ್ವದ ಪ್ರಕಾರವೇ ಕೆಲಸ ಮಾಡಬೇಕೆಂದು ಕರಾರು ಮಾಡಿರಿ) ಅಂಥವರು ಸಿಗದಿದ್ದರೆ ಅಥವಾ ಕರೆಸಲು ನಿಮಗೆ ಮನಸ್ಸಿಲ್ಲದಿದ್ದರೆ ಬಿಟ್ಟು ಬಿಡಿ.

ಮನೆಯ ಮುಂದೆ ಸಣ್ಣದಾದ ಹಸಿರು ಹಂದರ ಕಟ್ಟಿರಿ, ಮುಂಬಾಗಿಲಲ್ಲಿ ರಂಗವಲ್ಲಿ ಹಾಕಿರಿ. ತಲೆಬಾಗಿಲನ್ನು ದಾಟುತಿದ್ದಂತೆಯೇ ವಿಶ್ವಗುರು ಬಸವಣ್ಣನವರ ಭಾವಚಿತ್ರ ಪ್ರತಿಷ್ಠಾಪಿಸಿರಿ. ಅಂದು ನೆಲವನ್ನು ಶುದ್ಧೋದಕದಿಂದ ತೊಳೆಯಿರಿ. ನಡುಮನೆಯಲ್ಲಿ ಮೇಜನ್ನಿರಿಸಿ ಅದರ ಮೆಲೆ ಬಸವಣ್ಣನವರ ಭಾವಚಿತ್ರವನ್ನಿರಿಸಿ ಅಲಂಕಾರ ಮಾಡಿರಿ.

ಮನೆಯವರೆಲ್ಲ ಒಂದೆಡೆ ಬಸವಣ್ಣನವರ ಭಾವಚಿತ್ರದ ಸನ್ನಿಧಿಯಲ್ಲಿ ಕುಳಿತು ಸಾಮೂಹಿಕ ಬಸವ ಭಾವ ಚಿತ್ರ ಪೂಜೆ ಮತ್ತು ಪ್ರಾರ್ಥನೆ ಮಾಡಿರಿ. ಪುಷ್ಪಗಳನ್ನು ಏರಿಸಿರಿ.

ಪೂಜಾನಂತರ ಒಮ್ಮೆ ಒಂದು ಬಟ್ಟಲಲ್ಲಿ ನೀರನ್ನು ತೆಗೆದುಕೊಂಡು ಕೈ ಬೆರಳುಗಳಿಗೆ ವಿಭೂತಿ ಸವರಿ, ೧೨ ಬಾರಿ 'ಓಂ ನಮಃ ಶಿವಾಯ' ಜಪಿಸಿ ಬೆರಳುಗಳನ್ನು 'ಶ್ರೀಗುರುಬಸವಲಿಂಗಾಯ ನಮಃ' ಎನ್ನುತ್ತ ನೀರಲ್ಲಿ ಎದ್ದಿರಿ. ಇಚ್ಛೆಯುಳ್ಳ ಲಿಂಗವಂತರು ಇಷ್ಟಲಿಂಗ ಪೂಜೆ ಮಾಡಿ ತೀರ್ಥವನ್ನು ಸಂಗ್ರಹಿಸಬಹುದು ಮತ್ತು ಎಲ್ಲರಿಗೂ ತೀರ್ಥ-ಪ್ರಸಾದ ನೀಡಬಹುದು. ತೀರ್ಥ ಪಡೆಯುವಾಗ ಗುರುಪಾದೋದಕ (ವಿಶ್ವಗುರು ಬಸವಣ್ಣನವರ ಕರುಣೆ), ಲಿಂಗಪಾದೋದಕ (ಕರ್ತನಾದ ಪರಮಾತ್ಮನ ಕರುಣೆ), ಜಂಗಮ ಪಾದೋದಕ (ಸರ್ವ ಶರಣರ ಕರುಣೆ) ಎಂಬ ಅರ್ಥದಲ್ಲಿ ಮೂರು ಬಾರಿ ಲಿಂಗದ ನೆತ್ತಿಯ ಮೇಲೆರದು, ಗುರುಕೊಟ್ಟ ಇಷ್ಟಲಿಂಗದಲ್ಲಿಯೇ ಗುರುಲಿಂಗ-ಜಂಗಮರಿರುವರೆಂದು ಭಾವಿಸಿ ತೀರ್ಥವನ್ನು ಸ್ವೀಕರಿಸಬೇಕು. ತೀರ್ಥ ಸಂಗ್ರಹಿಸುವ ಬಟ್ಟಲಲ್ಲಿ ವಿಭೂತಿಯಿಂದ ಪಂಚಕೋನ ಮತ್ತು ಪ್ರಣವಗಳನ್ನು ಬರೆದಿರಿ. ಹೀಗೆ ಸಂಗ್ರಹಿಸಿದ ತೀರ್ಥಕ್ಕೆ ಶುದ್ಧೋದಕ ಬೆರೆಸಿ ಬಟ್ಟಲ ಮೇಲೆ ಮಡಿ ಬಟ್ಟೆಯನ್ನು ಮುಚ್ಚಿರಿ.

ಈಗ ಮನೆಯವರೆಲ್ಲ (ಆಹ್ವಾನಿತರೂ ಸಹ ಭಾಗವಹಿಸಬಹುದು) ೧೦ಲ ಬಸವ ಗುರು ಸ್ತುತಿ, ಬಸವ ಮಂಗಲ ಹಾಡಿರಿ. ಮನೆಯ ಹಿರಿಯರು ನಂತರ ಒಂದು ಸಣ್ಣ ಬಟ್ಟಲಲ್ಲಿ ವಿಭೂತಿ ಪುಡಿಯನ್ನು ತೆಗೆದುಕೊಂಡು, ತೀರ್ಥ ಸ್ವಲ್ಪ ಹಾಕಿ ವಿಭೂತಿ ಲೇಪನ ತಯಾರಿಸಲಿ. ಈಗ ಮನೆಯ ಪ್ರತಿಯೊಂದು ಕೋಣೆಯಲ್ಲಿ ಹೊಕ್ಕು ಗೋಡೆಯ ಮೇಲೆ ಪಂಚಕೋನ ಪ್ರಣವವನ್ನು, (★) ಮೂರು ಅಂಗುಲಿಗಳಿಂದ ಅಂದರೆ ಬೆರಳಗಳನ್ನು ವಿಭೂತಿ ಲೇಪನದಲ್ಲಿ ಎದ್ದಿ ಬರೆದು, ಅದೇ ವಿಭೂತಿಯಿಂದಲೇ "ಶ್ರೀಗುರುಬಸವಲಿಂಗಾಯ ನಮಃ" ಎಂದು ಬರೆಯಿರಿ. ಹೀಗಿ ಎಲ್ಲಾ ಕೋಣೆಗಳನ್ನು ಸಂಸ್ಕರಿಸಿ ಅಡಿಗೆಯ ಮನೆಯಲ್ಲಿ ಒಲೆಗೆ ವಿಭೂತಿ ಧರಿಸಿ, ತೀರ್ಥ ಚಿಮುಕಿಸಿ ಸಂಸ್ಕಾರವಿತ್ತು, ಒಲೆ ಹಚ್ಚಿ ಹಾಲನ್ನು ಉಕ್ಕಿಸಲಿ. ಹಾಲು ಉಕ್ಕುವಾಗ "ಜಯ ಗುರು ಬಸವೇಶ ಹರಹರ ಮಹಾದೇವ" ಎಂದು ಘೋಷಣೆ ಮಾಡಲಿ. ಉಳಿದ ತೀರ್ಥವನ್ನು ಎಲ್ಲರೂ ಸ್ವೀಕರಿಸಿ, ಖಂಡಿತ ಮಾಡಲಿ. ಇಷ್ಟಾದ ನಂತರ ನೀವು ಎಲ್ಲರಿಗೂ ಪ್ರಸಾದವನ್ನು ಎಡೆ ಮಾಡಬಹುದು. ಮತ್ತು ಅಲ್ಲಿ ವಾಸಿಸಲಾರಂಭಿಸಬಹುದು. ಇದು ತತ್ತ್ವ ಪ್ರಧಾನ ವಿಧಾನವಾಗುವುದು. ಅದರಂತೆ ಆಚರಿಸುವಿರಾಗಿ

ನಂಬುತ್ತೇವೆ.

ಶುಭಾಶೀರ್ವಾದಗಳೊಡನೆ

ಮಾತೆ ಮಹಾದೇವಿ

ವಿಶೇಷ ಸೂಚನೆ :

ಈ ಸರಳ ವಿಧಾನ ಹಿಡಿಸುವ ಎಲ್ಲರೂ ಆಚರಿಸಬಹುದು. ಇಷ್ಟಲಿಂಗ ಧಾರಿಗಳಲ್ಲದ ಜನಾಂಗದವರು ಸಾಮೂಹಿಕ ಭಜನೆ, ಧ್ಯಾನ, ಆರತಿಯನ್ನು ಮಾಡಿ ಒಂದು ಬಟ್ಟಲಲ್ಲಿ ನೀರು ತೆಗೆದುಕೊಂಡು

ಗುರು ಬಸವಣ್ಣನ ಕರುಣೆ
ಕರ್ತ ಪರಮಾತ್ಮನ ಕರುಣೆ
ಸರ್ವ ಶರಣರ ಕರುಣೆ

ಎಂದು ವಿಭೂತಿಯ ಬೆರಳುಗಳನ್ನು ಎದ್ದಿ ತೀರ್ಥಮಾಡಿ ಮುಂದಿನ ಕ್ರಮಗಳನ್ನು ಹಿಂದೆ ತಿಳಿಸಿದಂತೆ ನಡೆಸಬಹುದು.

ಓಂ ನಮಃ ಶಿವಾಯ, ಶ್ರೀಗುರುಬಸವಲಿಂಗಾಯನಮಃ
ಎಂಬ ಮಂತ್ರಗಳನ್ನು ಸಾಮೂಹಿಕವಾಗಿ ಪಠಿಸಬಹುದು.

*

ಘನಲಿಂಗದ ವಿಶ್ವರೂಪ

—ಶ್ರೀ ಬಸವಲಿಂಗಸ್ವಾಮಿಗಳು
ವಿರಕ್ತ ಮಠ, ನಿಡಪನಕಲ್ಲ.

ಗಗನವೆ ಘನಲಿಂಗ । ಜಗವದರ ಅಂಗ
ರವಿಶಶಿಗಳೇನೇತ್ರ । ಸುಳಿವ ಗಾಳಿಯೆ ಸೂತ್ರ ।
ಸುಡುವಗ್ನಿಯದು । ಮೃಡನ ಮುಖವಾಗಿರೆ, ॥ ೧ ॥

ತರುಮರಾದಿಗಳೆಲ್ಲ । ರೋಮರಾಶಿಗಳಾಗಿ ।
ಹರಿವ ನದಿಗಳು ಹರನ । ಮೈಯ್ಯಬೆವರು ॥ ೨ ॥

ಮೇಘರಾಜನು ನಿನಗೆ । ಅಭಿಷೇಕಗೈಯುವನು ।
ಮಘಮಘಿಪ ಹೂ ಹುಡಿಯೆ । ಶ್ರೀ ಗಂಧವೋ ॥ ೩ ॥

ಮೇರೆಮೀರಿದ ಸಿರಿಗೆ । ನೀನೆ ದೊರೆಯಾಗಿರಲು
ತಾರಾಮಂಡಲವೆಲ್ಲ । ಮಲ್ಲಿಗೆಯ ಮಾಲೆ ॥ ೪ ॥

ಸಿಡಿಲು ಧೂಪದ ಕೆಂಡ । ಮಿಂಚು ಮಂಗಳಾರುತಿಯು ।
ಗುಡುಗು ಭೇರಿಯನಾದ । ನೋಡಲಾಗಿ ॥ ೫ ॥

ಧರೆಯ ಜೀವಿಗಳೆಲ್ಲ । ಹರನಿನ್ನ ಅರ್ಚಕರು ।
ಆನಂದರೂಪ । ನಿನ್ನಾನಂದಕಾಗಿ ॥ ೬ ॥

ಹಂಗ ಭೃಂಗದ ಬಳಗ । ಸಂಗೀತ-ಹಾಡುವವು ।
ನವಿಲುತಾನರ್ತಿಸುತ । ಸೇವೆ ಸಲ್ಲಿಸುದು ॥ ೭ ॥

ಮಳೆಯೇ ಪಾದೋದಕವು । ಇಳೆಯು ಬೆಳೆ ಪರಸಾದ ॥
ತಿಳಿಯಲದು ಗುರು ಬಸವ । ಲಿಂಗಕ್ಕೆ ವೇದ್ಯ ॥ ೮ ॥

ಪಾತಾಳ ಶ್ರೀಪಾದ । ಬ್ರಹ್ಮರಂಧ್ರವೆ ಸ್ವರ್ಗ ।
ಸಪ್ತಾಂಗ ಮುಖ ನಿನ್ನ । ಈ ವಿಶ್ವರೂಪ ॥ ೯ ॥

ಪಂಚ ಪದದ ಗೊಂಚಲು

ಸಂಗ್ರಹ : ಎಸ್. ಬಿ. ಚಂದ್ರಕಾಂತ, ಮೈಸೂರು.

೧. **ಪಂಚ ಆಚಾರಗಳು :** ಲಿಂಗಾಚಾರ, ಸದಾಚಾರ, ಶಿವಾಚಾರ, ಗಣಾಚಾರ, ಭೃತ್ಯಾಚಾರ.
೨. **ಪಂಚ ಆಯತಗಳು :** ಅನ್ನ, ಅರಿವೆ, ಆಶ್ರಯ, ಅವುಷಧ, ಅರಿವು.
೩. **ಪಂಚ ತನ್ಮಾತ್ರೆಗಳು :** ಶಬ್ದ, ಸ್ಪರ್ಶ, ರೂಪ, ರಸ, ಗಂಧ.
೪. **ಪಂಚ ಪಾಂಡವರು :** ಧರ್ಮರಾಯ, ಭೀಮ, ಅರ್ಜುನ, ನಕುಲ, ಸಹದೇವ.
೫. **ಪಂಚ ರುಚಿಗಳು :** ಸಿಹಿ, ಕಹಿ, ಉಪ್ಪು, ಹುಳಿ, ಕಾರ.
೬. **ಪಂಚ ಲೋಹಗಳು :** ತವರ, ಸೀಸ, ತಾಮ್ರ ಹಿತ್ತಾಳೆ, ಕಬ್ಬಿಣ.
೭. **ಪಂಚ ರತ್ನಗಳು :** ಚಿನ್ನ, ಬೆಳ್ಳಿ, ಮುತ್ತು, ವಜ್ರ, ಹವಳ.
೮. **ಪಂಚ ಭೂತಗಳು :** ಆಕಾಶ, ಭೂಮಿ, ನೀರು, ಬೆಂಕಿ, ಗಾಳಿ.
೯. **ಪಂಚ ಜ್ಞಾನೇಂದ್ರಿಯಗಳು :** ಕಿವಿ, ಮೂಗು, ನಾಲಿಗೆ, ಚರ್ಮ, ಕಣ್ಣು.
೧೦. **ಪಂಚ ಕರ್ಮೇಂದ್ರಿಯಗಳು :** ಕಿವಿ–ಕೇಳುವದು, ಮೂಗು–ವಾಸನೆ, ನಾಲಿಗೆ–ರುಚಿ, ಚರ್ಮ–ಸ್ಪರ್ಶ, ಜನನಾಂಗ–ಜನ್ಮ.
೧೧. **ಪಂಚ ಕಲಿಯುಗದ ಪಾನೀಯಗಳು :** ಸೇಂದಿ, ಬ್ರಾಂದಿ, ರಮ್, ಜಿನ್, ಐಪಾಟ್ಸ.
೧೨. **ಪಂಚ ಸಾಮಾಜಿಕ ಸಮಸ್ಯೆಗಳು :** ಜಾತಿಪದ್ಧತಿ, ವರದಕ್ಷಿಣೆ ಬಡತನ, ನಿರುದ್ಯೋಗ, ಅನಕ್ಷರತೆ
೧೩. **ಪಂಚ ಪವಿತ್ರದಾನಗಳು :** ಅನ್ನದಾನ, ವಿದ್ಯಾದಾನ, ಜೀವದಾನ, ಕನ್ಯಾದಾನ, ತ್ಯಾಗದಾನ (ಇನ್ನೊಬರ ಸುಖಕ್ಕೆ).
೧೪. **ಪಂಚ ಮನುಷ್ಯನ ಉತ್ತಮಗುಣಗಳು :** ವಾತ್ಸಲ್ಯ, ಮಮತೆ, ಬಾಂಧವ್ಯ, ಪ್ರೀತಿ, ತ್ಯಾಗ.
೧೫. **ಪಂಚಾಮೃತ :** ಹಾಲು, ಮೊಸರು, ಜೇನು, ತುಪ್ಪ, ಸಕ್ಕರೆ.
೧೬. **ಪಂಚ ಕೋಶಗಳು :** ಅನ್ನಮಯ, ಪ್ರಾಣಮಯ, ಮನೋಮಯ, ವಿಜ್ಞಾನಮಯ, ಆನಂದಮಯ.
೧೭. **ಪಂಚಾಣುವ್ರತಸಾರ :** ಗುರುಗಳಿಗೆ, ಅರಹಂತರಿಗೆ, ಸಿದ್ಧರಿಗೆ, ಉಪಾಧ್ಯಾಯರಿಗೆ, ಸರ್ವಸಾಧುಗಳಿಗೆ.

ಬಸವ ಗಂಗೋತ್ರಿಗೆ ಆರ್ಥಿಕ ನೆರವು

೧.	ಶರಣ. ಎ. ಎಂ. ಬಸವೇಗೌಡರು, ತಿಪ್ಪನಹಳ್ಳಿ ಎಸ್ಟೇಟ್.	5001-00
೨.	ಭಾರತ್ ಎಲೆಕ್ಟ್ರಾನಿಕ್ಸ್ ಲಿಮಿಟೆಡ್ (B.E,L) ಬೆಂಗಳೂರು. ಪ್ರವಚನ ಸಮಿತಿಯಿಂದ	1505-00
೩.	ಗ್ರಂಥ ಪ್ರಕಟಣೆಗೆ : ಶರಣ. ಎನ್. ಎಸ್. ಚನ್ನಪ್ಪ, ವಿಜಯಪುರ.	1001-00

ಕಲ್ಯಾಣ ಕಿರಣದ ಆಜೀವ ಸದಸ್ಯರು

೧.	ಶರಣ. ಆರ್. ಬಸವರಾಜಪ್ಪ, ಹೆಚ್.ಎಂ.ಟಿ, ಬೆಂಗಳೂರು.	151–00
೨.	ಶರಣೆ. ಗಿರಿಜಮ್ಮ ಡಿ. ವಿ. ಲಿಂಗಪ್ಪ, ಜಯನಗರ, ಬೆಂಗಳೂರು.	151–00
೩.	ಶರಣೆ. ಎಸ್. ಸಿ. ಪುಟ್ಟತಾಯಮ್ಮ, ಬೆಂಗಳೂರು.	151–00
೪.	ಶರಣೆ. ಮರಿಯಮ್ಮ, ಊರುಕೆರೆ.	151–00
೫.	ಶರಣ. ಬಿ. ಸಿದ್ಧರಾಮಣ್ಣ, ಚನ್ನಬಸವೇಶ್ವರ ಸಾಮಿಲ್ ಗುಬ್ಬಿ	151–00

ಹರಕೆ ಪೂರೈಕೆ :

ನೀನೊಲಿದರೆ ಕೊರಡು ಕೊನರುವುದಯ್ಯ
ನೀನೊಲಿದರೆ ಬರಡು ಹಯನಹುದಯ್ಯ
ನೀನೊಲಿದರೆ ವಿಷವು ಅಮೃತವಹುದಯ್ಯ
ನೀನೊಲಿದರೆ ಸಕಲ ಪಡಿಪಾರ್ಥಗಳು
ಇದಿರಲ್ಲಿಪ್ಪವು ಕೂಡಲ ಸಂಗಮದೇವಾ ॥

ಶ್ರೀಮತಿ ನಾಗರತ್ನಮ್ಮ ರೇವಣ್ಣನವರು ಬಸವ ಮಂಟಪದ ಸದ್ಭಕ್ತರು. ಹೇಳಿಕೊಳ್ಳುವ ಸಂಪತ್ತುಳ್ಳವರಲ್ಲ; ನಿಜವಾಗಿ ಹೇಳುವುದಾದರೆ ಆರ್ಥಿಕ ಸಂಕಷ್ಟದಲ್ಲೇ ಸಿಕ್ಕವರು, ಹೀಗಾಗಿ ನಿವೃತ್ತರಾದ ತಂದೆ ತಮ್ಮ ಹಿರಿದಾದ ಕುಟುಂಬ ಪೋಷಿಸಲು ತಾಪತ್ರಯ ಪಡುತ್ತ ಹಿರಿ ಮಗನ ವಿದ್ಯಾಭ್ಯಾಸ ಪೂರೈಕೆ, ಅವನಿಗೆ ನೌಕರಿ ಸಿಗುವುದನ್ನು ಕಾಯಲೇ ಬೇಕಷ್ಟೆ. ಆಗ ಶ್ರೀಗುರುಬಸವ ಪಾದದಲ್ಲಿ ಹರಕೆ ಮಾಡಿಕೊಂಡರು. ಮಗ ಶಿವಾನಂದ ಇನ್ನೂ ರಿಸಲ್ಟ್ ಆಗುವ ಮೊದಲೇ ನೌಕರಿ ಪಡೆದುಕೊಂಡ. ಶೇರ್ಗಡೆಯಾದಾಗ ನೋಡಿದರೆ ಪ್ರಥಮ ದರ್ಜೆಯ ಫಲಿತಾಂಶವಷ್ಟೇ ಅಲ್ಲ, ಎರಡು ವಿಷಯಗಳಲ್ಲಿ ಕರ್ನಾಟಕಕ್ಕೆ ಮೊದಲನೆಯವನಾಗಿ ಉತ್ತೀರ್ಣನಾದ.

ಈ ಆನಂದವನ್ನು ಎಲ್ಲರೊಡನೆ ಹಂಚಿಕೊಳ್ಳಲು ಮತ್ತು ತಾವು ಮಾಡಿಕೊಂಡ ಹರಕೆ ಪೂರೈಸಲು 13-8-1978 ರಂದು ಬಸವೇಶ್ವರ ವಿಶೇಷ ಪೂಜೆಯನ್ನು ಸದ್ಭಕ್ತ ದಂಪತಿಗಳು ನೆರವೇರಿಸಿದರು. ಆಶ್ರಮದ ನೂರಾರು ಸದ್ಭಕ್ತರಿಗೆ ಸಿಹಿ ಹಂಚಿದರು. ಶರಣ ಶಿವಾನಂದನು ತನ್ನ ಮೊದಲ ಸಂಬಳದ ಮೂರನೇ ಒಂದಂಶ ಕೊಡುವುದಾಗಿ "ಬಸವ ಪಾದ" ದಲ್ಲಿ ಹರಕೆ ಮಾಡಿಕೊಂಡಿದ್ದ ಪ್ರಕಾರ ೧೫೫ ರೂ. ಗಳನ್ನು ಹರಕೆ ಕಾಣಿಕೆಯಾಗಿ ಸಲ್ಲಿಸಿದ. ಅವರ ಈ ಶ್ರದ್ಧಾಪೂರ್ಣ ಭಕ್ತಿಗೆ ವಿಶ್ವಗುರು ಬಸವೇಶ್ವರರು ಹೆಚ್ಚಿನ ಆಯುರಾರೋಗ್ಯ-ಭಾಗ್ಯ ದಯಪಾಲಿಸಲೆಂದು ಹಾರೈಸುವೆವು. ★

ನ ಗೆ ಹೊ ನ ಲು

ಯ ಶ ಸ್ವಿ ರಾ ಜ ಕಾ ರಿ ಣಿ

ಚರ್ಚಿಲ್ಲರು ಸಭೆಯೊಂದರಲ್ಲಿ ಭಾಗವಹಿಸಿದಾಗ ಶ್ರೋತೃವೊಬ್ಬ ಯಶಸ್ವಿ ರಾಜಕಾರಿಣಿಯ ಲಕ್ಷಣ ಕೇಳಿದ. ಆಗ ಅವರು ನುಡಿದರು : "ಮರುದಿನ, ಮುಂದಿನ ತಿಂಗಳು, ಮರುವರ್ಷ ಏನಾಗುವುದೆಂಬ ನಿರ್ದಿಷ್ಟ ಭವಿಷ್ಯ ಹೇಳುವ ಸಾಮರ್ಥ್ಯ ಇರಬೇಕು. ಆನಂತರ ಅದೆಲ್ಲವೂ ಏಕೆ ಸಾಧ್ಯವಾಗಲಿಲ್ಲವೆಂಬುದನ್ನು ವಿವರಿಸುವ ತಾಕತ್ತು ಇರಬೇಕು."

* * *

ಸದ್ಯಕ್ಕೇನು ಬೇಕು

ಚುನಾವಣೆ ಸಮೀಪಿಸಿತ್ತು. ಓರ್ವರಾಜಕಾರಿಣಿ ಅತ್ಯುತ್ಸಾಹ ಭರಿತನಾಗಿ, ಆಗಾಗ ನೀರು ಕುಡಿದು ಸುಧಾರಿಸಿಗೊಳ್ಳುತ್ತಾ ಹೇಳುತ್ತಿದ್ದ, "ನನಗೆ ಸಮಾಜ ಸುಧಾರಣೆ ಬೇಕು, ಅದು ಬೇಕು....ಬೇಕು." ಮೇಜನ್ನು ಕುಟ್ಟಿ ಮಾತನಾಡುತ್ತಿದ್ದ. "ಸದ್ಯಕ್ಕಂತೂ ಕ್ಲೋರೋಫಾರಮ್ ಬೇಕು." ಹಿಂದಿನಿಂದ ಬಂದಿತೊಂದು ಧ್ವನಿ.

ಕಾರ್ಯಕ್ರಮಗಳ ವಿವರ

೧. ಬಿ.ಇ.ಎಲ್. ನಲ್ಲಿ ಪ್ರವಚನ ಮುಕ್ತಾಯ ಸಮಾರಂಭ

ಭಾರತ ಇಲೆಕ್ಟ್ರಾನಿಕ್ಸ್ ಲಿಮಿಟೆಡ್ ಕಾರ್ಖಾನೆಯಲ್ಲಿ ದಿ. ೧೦-೭-೧೯೭೮ ರಿಂದ ಪರಮ ಪೂಜ್ಯ ಶ್ರೀ ಸದ್ಗುರು ಲಿಂಗಾನಂದ ಸ್ವಾಮಿಗಳವರಿಂದ ಪ್ರಾರಂಭವಾದ ಪ್ರವಚನವು ದಿನದಿನಕ್ಕೂ ಅಧಿಕ ಸಂಖ್ಯೆಯಲ್ಲಿ ಶ್ರೋತೃಗಳನ್ನು ಆಕರ್ಷಿಸಿ ದಿ. ೧೨-೮-೧೯೭೮ ರಂದು ಮುಕ್ತಾಯಗೊಂಡಿತು.

ವಿದ್ಯಾವಂತರು, ಬುದ್ಧಿ ಜೀವಿಗಳೇ ಅಧಿಕ ಸಂಖ್ಯೆಯಲ್ಲಿರುವ ಕಾರ್ಖಾನೆಯ ಕೆಲಸಗಾರರು, ಪೂಜ್ಯ ಸದ್ಗುರುಗಳ ವೈಚಾರಿಕ ಮತ್ತು ಜಾತ್ಯತೀತ ದೃಷ್ಟಿಕೋನದ ಪ್ರವಚನ ಕೇಳಿ ಆನಂದ ಭರಿತರಾದರು. ಶ್ರೀ ಗಣಪತಿ ದೇವಾಲಯದ ಪ್ರವಚನ ಮಂದಿರವೆಲ್ಲ ಜನರಿಂದ ಕಿಕ್ಕಿರಿದು ತುಂಬಿ ಜನರು ಮಳೆಯ ತುಂತುರಿನಲ್ಲೇ ಹೊರಗೆ ನಿಂತು ಆಲಿಸುತ್ತಿದ್ದರು.

ಪೂಜ್ಯ ಶ್ರೀ ಜಗದ್ಗುರು ಮಾತೆ ಮಹಾದೇವಿಯವರು ೭-೮-೧೯೭೮ ರಿಂದ ಪ್ರವಚನವನ್ನು ಆರಂಭಿಸಿ, ೧೨-೮-೧೯೭೮ ರಂದು ಮುಕ್ತಾಯಗೊಳಿಸಿದರು. ಮಂಗಲಾಚರಣೆಯ ದಿನದಿಂದ ಸಮಿತಿಯ ಅಧ್ಯಕ್ಷ **ಕೆ. ಎಸ್. ಮಲ್ಲಪ್ಪನವರು** ವಂದನಾರ್ಪಣೆ ಮಾಡಿದರು.

೨. ಬಸವ ಮಂಟಪದಲ್ಲಿ ಪ್ರಾರ್ಥನಾಕೂಟ

ರಾಜಾಜಿನಗರದ ಕಾರ್ಡ್ ರಸ್ತೆಯಲ್ಲಿರುವ ಬಸವ ಮಂಟಪದಲ್ಲಿ ದಿ. ೧೩-೮-೭೮ ರಂದು ವಿಶೇಷ ಪ್ರಾರ್ಥನೆ ಮತ್ತು ಪ್ರವಚನಗಳು **ಪೂಜ್ಯ ಮಾತಾಜಿಯವರಿಂದ** ನಡೆದವು. **ಪೂಜ್ಯ ಶ್ರೀ ಸದ್ಗುರು ಲಿಂಗಾನಂದ** ಸ್ವಾಮಿಗಳವರ ಘನ ಅಧ್ಯಕ್ಷತೆಯಲ್ಲಿ **ಹುಜೂರ್ ಚನ್ನಬಸವಪ್ಪನವರಿಂದ** ವಿವಿಧ ಹಾವುಗಳ ಪ್ರದರ್ಶನ ನಡೆಯಿತು. ಹಾವಿನ ಗುಣ, ಸ್ವಭಾವಗಳನ್ನು, ಕಡಿದರೆ ಮಾಡಬೇಕಾದ ಚಿಕಿತ್ಸೆಯನ್ನು, ಔಷಧಗಳು-ಪರಿಹಾರಗಳು ಎಷ್ಟು ಸನಿಹದಲ್ಲೇ ಇರುವವೆಂಬುದನ್ನು, ಮತ್ತು ಮಾನವನು ತಿಳಿದಂತೆ ಹಾವು ಅವನ ಶತ್ರುವಲ್ಲ ಮಿತ್ರ, ಎಂಬ ಬಗ್ಗೆ ಬಹಳ ಮಾರ್ಮಿಕವಾಗಿ, ರಸವತ್ತಾಗಿ ಅವರು ಉಪನ್ಯಾಸ ಮಾಡಿದರು.

೩. ಹೆಚ್.ಎಂ.ಟಿ. ಕಾರ್ಖಾನೆಯಲ್ಲಿ ಶಿವಾಜಿ ಜಯಂತಿ

ಬಿ.ಇ.ಎಲ್ ನಲ್ಲಿ ಪ್ರವಚನವನ್ನು ಕೇಳಿ ಪ್ರಭಾವಿತರಾದ, ಮತ್ತು ಪೂಜ್ಯರ

ರಾಷ್ಟ್ರಾಭಿಮಾನವನ್ನು ಕಂಡು ಪ್ರೇರೇಪಿತರಾದ ಶ್ರೀ ಶಿವಾಜಿಯ ಭಕ್ತವೃಂದವು ದಿ. ೧೪-೮-೧೯೭೭ ರಂದು ಪೂಜ್ಯ ಸದ್ಗುರು ಲಿಂಗಾನಂದ ಸ್ವಾಮಿಗಳವರನ್ನು ಆಮಂತ್ರಿಸಿ ಅವರ ಶ್ರೀ ವಾಣಿಯ ಮೂಲಕ ಶಿವಾಜಿಯ ಸಂದೇಶವನ್ನು ಆಲಿಸಿದರು. ಮೇನೇಜಿಂಗ್ ಡೈರೆಕ್ಟರ್ ಬಸವಯ್ಯನವರು ಸಭಾಧ್ಯಕ್ಷತೆ ವಹಿಸಿದ್ದರು. ಹಿಂದೂ ಸಮಾಜ ಸಂಘಟಕನಾದ ಶಿವಾಜಿಯಲ್ಲಿ ಮೇಳೈಸಿದ್ದ ಧರ್ಮಬೀರುತ್ವ, ರಾಷ್ಟ್ರ ಪ್ರೇಮಗಳ ಬಗ್ಗೆ ರಸವತ್ತಾಗಿ ಮತ್ತು ಸ್ಫೂರ್ತಿದಾಯಕವಾಗಿ ಪೂಜ್ಯರು ಮಾತನಾಡಿದಾಗ ಅವರ ನಿರರ್ಗಳ ವಾಗ್ಝರಿಯನ್ನು ಕಂಡು, ರಾಷ್ಟ್ರೀಯ, ಸಾಮಾಜಿಕ, ಆಧ್ಯಾತ್ಮಿಕ ಯಾವುದೇ ವಿಷಯಗಳ ಬಗ್ಗೆ ಮಾತನಾಡಬಲ್ಲವರ ಪ್ರೌಢಿಮೆ ಕಂಡು ಶ್ರೋತೃಗಳು ಸಂಭ್ರಾಂತರಾದರು.

೪. ಬಸವ ಮಂಟಪದಲ್ಲಿ ಬಸವ ಧರ್ಮ ವಾರ್ಷಿಕೋತ್ಸವ ಕಾರ್ಯಕ್ರಮ

ರಾಜಾಜಿನಗರ, ಕಾರ್ಡರಸ್ತೆಯಲ್ಲಿರುವ ಬಸವ ಮಂಟಪದಲ್ಲಿ ಬಸವಧರ್ಮ ವಾರ್ಷಿಕೋತ್ಸವದ ವಿಶೇಷ ಕಾರ್ಯಕ್ರಮ ಜರುಗಿತು. ಪೂಜ್ಯರಾದ ಶ್ರೀ ಜಗದ್ಗುರು ಮಾತೆ ಮಹಾದೇವಿಯವರ ಅಧ್ಯಕ್ಷತೆಯಲ್ಲಿ, ಪೂಜ್ಯರಾದ ಸದ್ಗುರು ಶ್ರೀ ಲಿಂಗಾನಂದ ಸ್ವಾಮಿಗಳ ದಿವ್ಯಸನ್ನಿಧಿಯಲ್ಲಿ ನಡೆದ ಕಾರ್ಯಕ್ರಮದಲ್ಲಿ ಉತ್ತುಂಗ ಸಾಹಿತಿಗಳು, ಮೈಸೂರು ವಿಶ್ವವಿದ್ಯಾನಿಲಯದ ನಿವೃತ್ತ ಉಪಕುಲಪತಿಗಳು ಆದ ಶರಣ **ಡಾ|| ಡಿ. ಜವರೇಗೌಡರು** ಮುಖ್ಯ ಅತಿಥಿಗಳಾಗಿ ಆಗಮಿಸಿ "**ಕ್ರಾಂತಿ ಪುರುಷ ಬಸವಣ್ಣ**" ಎಂಬ ವಿಷಯದ ಬಗ್ಗೆ ಮಾತನಾಡಿದರು.

ಜಾನಪದ ಸಾಹಿತ್ಯ ಕಲಾರತ್ನದ್ವಯರಾದ ಶರಣ **ಕೆ. ಆರ್. ಲಿಂಗಪ್ಪನವರು** ಹಾಗೂ ಶರಣ **ಗೊ. ರು. ಚನ್ನಬಸಪ್ಪನವರು** ಆಗಮಿಸಿ ಬಸವ ಧರ್ಮದ ಬಗ್ಗೆ ಮಾತನಾಡಿದರು. ಶ್ರೀ ಬಸವೇಶ್ವರರ ಮಹಾಮಂಗಲಾರತಿಯೊಡನೆ ಕಾರ್ಯಕ್ರಮ ಪೂರ್ಣಗೊಂಡಿತು.

೫ ಬಸವ ಮಂಟಪದಲ್ಲಿ ಶ್ರಾವಣಮಾಸದ ಕಾರ್ಯಕ್ರಮ

ಕ್ರಾಂತಿಯೋಗಿಗಳೂ, ಮಾನವತಾವಾದಿಗಳೂ ಆದ ಪೂಜ್ಯ ಶ್ರೀ ಸದ್ಗುರು ಲಿಂಗಾನಂದ ಸ್ವಾಮಿಗಳವರಿಂದ ರಾಜಾಜಿನಗರದ ಬಸವ ಮಂಟಪದಲ್ಲಿ ಶ್ರಾವಣಮಾಸದ ಸಲುವಾಗಿ ವಿಶ್ವಧರ್ಮ ಪ್ರವಚನ ಕಾರ್ಯಕ್ರಮ ದಿನಾಂಕ ೧೬-೮-೧೯೭೮ ರಂದು ಪ್ರಾರಂಭವಾಗಿದೆ. ಈ ಜ್ಞಾನ ದಾಸೋಹದಲ್ಲಿ ಅಸಂಖ್ಯಾತರು ಭಾಗವಹಿಸುತ್ತಿದ್ದಾರೆ. ಇದು ದಿ. ೫-೯-೧೯೭೮ ರವರೆಗೆ ಜರುಗಲಿದೆ.

★



ಪೂಜ್ಯ ಶ್ರೀ ಸದ್ಗುರು ಲಿಂಗಾನಂದ ಸ್ವಾಮೀಜಿ

ಬಸವ ಧರ್ಮದ ವೀರಚೇತನ

—ಗೊ. ರು. ಚನ್ನಬಸಪ್ಪ

ಕೆಲವು ದಿನಗಳ ಹಿಂದೆ "Adventure in service" [ಸೇವೆಯಲ್ಲಿ ಸಾಹಸ] ಎಂಬ ರೋಟರಿ ಪುಸ್ತಕವೊಂದನ್ನು ಓದುತ್ತಿದ್ದೆ. ಅದರಲ್ಲಿ ಒಂದು ಪ್ರಸಂಗದ ಪ್ರಸ್ತಾಪವಿದೆ. ಸ್ಪೆಯಿನ್‌ನ ಒಂದು ಪರ್ವತ ಆರಾಧನ ಮಂದಿರ. ಅಲ್ಲಿನ ಅದ್ವಿತೀಯ ವರ್ಣಚಿತ್ರ ಕಲಾಕೃತಿಗಳನ್ನು ನೋಡಬೇಕೆಂಬ ಹಂಬಲದಿಂದ ಓರ್ವ ಪ್ರವಾಸಿಗ ವೈಯಕ್ತಿಕ ತೊಂದರೆಗಳನ್ನೆಲ್ಲಾ ಸಹಿಸಿಕೊಂಡು ಆ ದೂರದ ಮಂದಿರಕ್ಕೆ ಬಂದ. ಒಳಗೆ ಹೋಗಿ ಸುತ್ತಲೂ ಕಣ್ಣು ಹಾಯಿಸಿದ. ಬಹಳಷ್ಟು ನಿರೀಕ್ಷೆ ಇಟ್ಟುಕೊಂಡಿದ್ದ ಅವನಿಗೆ ತೀವ್ರ ನಿರಾಸೆಯಾಯಿತು. ಅಲ್ಲಿದ್ದ ಚಿತ್ರಗಳೆಲ್ಲ ನೀರಸವಾಗಿ, ನಿರುತ್ತೇಜಕವಾಗಿ ಕಂಡವು. 'ಅಷ್ಟು ದೂರದಿಂದ ಕಷ್ಟಪಟ್ಟು ಬಂದುದೆಲ್ಲವ್ಯರ್ಥವಾಯಿತು' ಎಂದು ಗೊಣಗಿಕೊಂಡು ಆತ ಮಂದಿರದಿಂದ ಹೊರಹೊರಡುವುದರಲ್ಲಿದ್ದ. ಅಷ್ಟರಲ್ಲಿ ಅಲ್ಲಿನ ಗೈಡ್, "ಸ್ವಾಮಿ ನಿಮಗೆ ನಿರಾಸೆಯಾದಂತೆ ಕಾಣುತ್ತದೆ" ಎಂದ. "ನಿರಾಸೆ ಅಷ್ಟೇ ಅಲ್ಲ ಇವು ನೋಡುವಂತಹ ಚಿತ್ರಗಳೇ ಅಲ್ಲ" ಎಂದ ಪ್ರವಾಸಿಗ. ಆಗ ಈ ಗೈಡ್ ಪ್ರವಾಸಿಗನನ್ನು ಭವನದ ಮಧ್ಯ ಭಾಗಕ್ಕೆ ಕರೆದೊಯ್ದು, ನಿರ್ದಿಷ್ಟ ಸ್ಥಾನದಲ್ಲಿ ನಿಲ್ಲಿಸಿ, ದೀಪ ಹಾಕಿ 'ಈಗ ನೋಡಿ' ಎಂದ. ಪ್ರವಾಸಿಗನಿಗೆ ಪರಮಾಶ್ಚರ್ಯ. ಮೊದಲು ಕೇವಲ ಬಣ್ಣದ ಚುಕ್ಕೆಗಳಂತೆ ಕಂಡ ಚಿತ್ರಗಳಲ್ಲೆಲ್ಲ ರೋಮಾಂಚಕಾರಿ ಸೌಂದರ್ಯ!

ಇದು ಹೇಗಾಯಿತು? ಗೈಡ್ ಹೇಳಿದ–"ಸ್ವಾಮಿ, ಇದು light angle (ಬೆಳಕಿನ ಸಮಕೋನ) ಮತ್ತು right angle (ಸರಿಯಾದ ಕೋನ), ಹೀಗೆ ನಿರ್ದಿಷ್ಟವಾದ ಕೋನದಲ್ಲಿ ನೋಡಿದರೆ ಮಾತ್ರ ಈ ವರ್ಣ ಚಿತ್ರಗಳ ವಿನ್ಯಾಸ, ವೈವಿಧ್ಯತೆ ಮತ್ತು ಗಹನ ವೈಭವ ಗೋಚರ. ಇಲ್ಲವಾದರೆ ಇವೆಲ್ಲ ಬಣ್ಣದ ಚುಕ್ಕೆಗಳೇ. ಆದ್ದರಿಂದ ವಾಸ್ತವ ಸೌಂದರ್ಯವನ್ನು ಕಾಣಬೇಕಾದರೆ ಯೋಗ್ಯ ಸ್ಥಾನದಲ್ಲಿ, ಯೋಗ್ಯ ಬೆಳಕಿನಲ್ಲಿ, ಯೋಗ್ಯ ದೃಷ್ಟಿಯಿಂದ ನೋಡಬೇಕು.

ಈ ಪ್ರಸಂಗ ಓದುತ್ತಿದ್ದಂತೆಯೇ ನನಗೆ ವಿಶ್ವಕಲ್ಯಾಣ ಮಿಷನ್ನಿನ ಅಧ್ಯಕ್ಷರು ಮತ್ತು ಸಂಸ್ಥಾಪಕರಾದ ಪೂಜ್ಯ ಶ್ರೀ ಲಿಂಗಾನಂದ ಸ್ವಾಮಿಗಳ ನೆನಪಾಯಿತು. ಅದು ಹೇಗೆ ಸಂಬಂಧ ಬೀಳುತ್ತದೆ?

ಸಂಬಂಧವಿದೆ. ತಪ್ಪು ದಿಕ್ಕಿನಲ್ಲಿ ನಿಂತು ಕತ್ತಲೆಯಲ್ಲಿ ಚಿತ್ರಗಳನ್ನು ಕಂಡ ಪ್ರವಾಸಿಗ ಆ ಚಿತ್ರಗಳನ್ನು ಮೊದಲು ನೀರಸ, ನಿರುತ್ತೇಜಕ ಎಂದ, ತಪ್ಪು ತೀರ್ಮಾನಕ್ಕೆ ಬಂದ. ಹಾಗೆಯೇ ಶ್ರೀ ಲಿಂಗಾನಂದ ಸ್ವಾಮಿಗಳ ನಡೆ-ನುಡಿ, ರೀತಿ-ನೀತಿ, ವಿಚಾರ-ವಿವೇಚನೆ, ಪ್ರಮಾಣ-ಪ್ರತಿಪಾದನೆಗಳನ್ನು ತಪ್ಪಾಗಿ ಭಾವಿಸಿದವರುಂಟು. ನಿಜ. ಕಣ್ಣಲ್ಲಿ ಬಣ್ಣದ ಕನ್ನಡಕವಿದ್ದರೆ ಬೇಲಿಯ ಮೇಲಣ ಬಿಳಿಯ ಹೂವೂ ಬಣ್ಣದ್ದಾಗಿ ಕಾಣುತ್ತದೆ. ಆ ಬಣ್ಣದ ಕನ್ನಡಕ ತೆಗೆದು Light angle ಮತ್ತು Right angle ನಲ್ಲಿ ನೋಡಿದಾಗಲೇ ಹೂವಿನ ಸಹಜ ಸೌಂದರ್ಯದ ದರ್ಶನವಾಗುವುದು–ದೃಶ್ಯದ ಸತ್ಯ ದರ್ಶನವಲ್ಲಿ!

ಶ್ರೀ ಲಿಂಗಾನಂದ ಸ್ವಾಮಿಗಳನ್ನು ಮೊಟ್ಟಮೊದಲಬಾರಿಗೆ ನಾನು ಕಂಡುದು 1973ರಲ್ಲಿ, ಬೆಂಗಳೂರು ನಗರದ ಚಾಮರಾಜಪೇಟೆ ಮೈದಾನದಲ್ಲಿ ಪ್ರವಚನ ಮಾಡುತ್ತಿದ್ದಾಗ. ಅಂದು ನಡೆದ ಒಂದು ಘಟನೆ ಇಂದಿಗೂ ನನ್ನ ಕಣ್ಣಿಗೆ ಕಟ್ಟಿದಂತಿದೆ:

ಅದು ಸಹಸ್ರಾರು ಶ್ರೋತೃಗಳು ತುಂಬಿ ಸೇರಿದ್ದ ಸಭೆ. ಒಂದು ಅಂಚಿನಲ್ಲಿ ಮೇಜು ಜೋಡಿಸಿ ಮಾಡಿದ ಪುಟ್ಟ ವೇದಿಕೆ. ಅದರ ಮೇಲೆ ಸ್ವಾಮೀಜಿ, ಮುಂದೆ ಧ್ವನಿ ವರ್ಧಕ. (ಅದರ ಹಂಗೇ ಇಲ್ಲವೆಂಬಂತಹ ಪಾಂಚಜನ್ಯದ ಕಂಠ).

ನನಗೆ ನೆನಪಿದ್ದಂತೆ ಅಂದಿನ ಪ್ರವಚನ ವಿಷಯ—"Equality of man-kind ಮನುಕುಲದ ಸಮಾನತೆ. ಕ್ರೀಡಾ ಪಟುವಿನ ಮೈಕಟ್ಟು. ಪರಿಶುಭ್ರ ಕಾವಿ ವಸ್ತ್ರ. ಕಂಚಿನ ಕಂಠದಿಂದ ಕನ್ನಡದ ಕಹಳೆ! ವಿಚಾರ ಜಾಗೃತಿಯ ಗುಡುಗು ಮಿಂಚು, ಅಧ್ಯಾತ್ಮ ಜ್ಞಾನದ ಪ್ರಶಾಂತ ಧಾರೆ.

"ಜಾತಿಗಳು ದೇವನಿರ್ಮಿತವಲ್ಲ, ಮಾನವ ಕಲ್ಪಿತ. ಪರಮಾತ್ಮನ ಸೃಷ್ಟಿಯಲ್ಲಿ ಸರ್ವರೂ ಸಮಾನರು. ಹುಟ್ಟಿದ ಜಾತಿ, ಪಡೆದ ಅಂತಸ್ತು, ಮಾಡುವ ಕಾಯಕಗಳ ಮೇಲೆ ಮೇಲುಕೀಳೆಂದು ಮನುಷ್ಯ ಕುಲವನ್ನು ವಿಂಗಡಿಸಬಾರದು." ಸ್ವಾಮೀಜಿಯವರ ಈ ವಿಚಾರಧಾರೆ ಜನತೆಯ ಹೃದಯಪರಿವರ್ತನೆ ಮಾಡತೊಡಗಿತ್ತು.

ಶ್ರೋತೃಗಳಿಗೆ ಅಪೂರ್ವ ಆನಂದ. ತದೇಕಚಿತ್ತ, ತಲ್ಲೀನತೆ! ಇದ್ದಕ್ಕಿದ್ದಂತೆಯೇ ಎಲ್ಲಿಂದಲೋ ತೂರಿಬಂದ ಪ್ರಶ್ನೆಯೊಂದು ಸ್ವಾಮೀಜಿಯವರ ಕಿವಿಗೆ ಬಡಿಯಿತು.

ಆಗಲೇ ಜಾತಿವಾದಿಯೊಬ್ಬನಿಂದ ಅಡ್ಡಮಾತು :

"ಸಾಧ್ಯವಿಲ್ಲ ; ಜಾತಿಗಳು ಮನುಷ್ಯ ಕುಲದ ಉದ್ಧಾರ ಮತ್ತು ಸಮಾಜ ವ್ಯವಸ್ಥೆಗೆ ಅವಶ್ಯಕ. ಭಗವಂತನು ತಾನೇ ನಿರ್ಮಾಣ ಮಾಡಿದ್ದಾಗಿ ಘೋಷಿಸಿದ್ದಾನೆ. ಕತ್ತೆ-ಕುದುರೆ, ಕೋಗಿಲೆ-ಕಾಗೆ ಒಂದೇ ಎಂಬ ಸಮಾನತೆ ಬೇಡ.

ಜಾತ್ಯತೀತ ವಾದ ಹೇಳಿದ ಬಸವಣ್ಣನಿಗೆ ಏನಾಯಿತು ? ಅದೇ ಗತಿ ನಿಮಗೂ ಆದೀತು. ಎಲ್ಲಾ ಬೆರಳುಗಳನ್ನು ಸಮಾನ ಮಾಡುವುದು ಬೇಡ..." ಉದ್ವಿಗ್ನತೆಯಿಂದ ಆ ವ್ಯಕ್ತಿ ನುಡಿದ. ಸಹಜವಾಗಿಯೇ ಸಭೆಯಲ್ಲಿ ಗೊಂದಲದ ವಾತಾವರಣ. ಅಮೃತಾನ್ನದಲ್ಲಿ ಹರಳು ಬಂದಂತೆ ರಸಭಂಗವಾದುದೊಂದಾದರೆ, ಜಾತಿವಾದವನ್ನು ಪುಷ್ಟೀಕರಿಸುವ ಅವನ ದಾರ್ಷ್ಟ್ಯದಿಂದ ವಿಶ್ವಧರ್ಮಪ್ರವಚನದ ಪ್ರಶಾಂತ ವಾತಾವರಣ ಕಲಕಿತು. ಪರಿಸರದಲ್ಲಿ ಮತೀಯ ವಿಷದ ಗಾಳಿ ಬಿಡುವ ಹುಚ್ಚುತನಕ್ಕೆ ಅವನು ಕೈಹಾಕಿದ್ದ. ಸಮೂಹ ಭಾವೋದ್ವೇಗ ಯಾವಾಗಲೂ ಅನರ್ಥಕಾರಿ. ಕೆಲವರು ಬುದ್ಧಿ ಕಲಿಸಲು ಎದ್ದು ನಿಂತರು. ಎಲ್ಲರಲ್ಲೂ ಮುಂದೇನಾಗುವುದೋ ಎಂಬ ಕಳವಳ. ಅಷ್ಟರಲ್ಲಿ ಸ್ವಾಮೀಜಿ ಜನರ ಕೈಗೆ ಅಧಿಕಾರ ಕೊಡದೆ ತಾವು ಕುಳಿತಿದ್ದ ವೇದಿಕೆಯ ಮೇಲೆ ಎದ್ದು ನಿಂತರು. ಅವರು ಅವಿಚಲಿತ ವಾಣಿಯಲ್ಲಿ—

"ಶರಣರೇ, ಇದು ವಿಶ್ವಧರ್ಮ ಪ್ರವಚನದ ಪವಿತ್ರ ಸ್ಥಾನ. ಜಾತೀಯ ಕುಸ್ತಿಯ ಕ್ರೀಡಾಂಗಣವಲ್ಲ. ನಾನು ಜಾತ್ಯತೀತ ವಿಶ್ವಧರ್ಮ ಪ್ರವಚನಕ್ಕೆ ಬಂದಿದ್ದೇನೆ. ನನಗೆ ದೈವೀ ಶಕ್ತಿಯ ಕಾರುಣ್ಯ ರಕ್ಷೆಯಿದೆ. ಧರ್ಮಪ್ರಚಾರದ ಮಣಿಹ ಹೊತ್ತು ಹೊರಟಿರುವ ನಾನು ಯಾವುದಕ್ಕೂ, ಯಾರಿಗೂ, ಎಂದೂ ಅಂಜುವುದಿಲ್ಲ. ತತ್ತ್ವಜ್ಞಾನದ ಬಗ್ಗೆ ಯಾರು ಬೇಕಾದರೂ ಧೈರ್ಯದಿಂದ ಪ್ರಶ್ನೆ ಕೇಳಬಹುದು. ಎಲ್ಲ ಪ್ರಶ್ನೆಗಳಿಗೂ ಸಮಂಜಸ ಉತ್ತರ ಕೊಡುತ್ತೇನೆ. ಆದರೆ ನೀವು ನಂಬಿದ್ದನ್ನೇ ಸತ್ಯವೆಂದು ವಾದಿಸ ಹೋಗದೆ, ಸತ್ಯವನ್ನು ನಂಬಲು ಕಲಿಯಿರಿ. ಹಿಂದೂ ಸಮಾಜ ಶಿಥಿಲಗೊಂಡಿರುವುದು ಈ ಜಾತಿವಾದದ ರೋಗದಿಂದಲೆ. ಸಮಾಜ ಸಂಘಟನೆ ನನ್ನ ಬಾಳ ಗುರಿ. ಒಂದು ವೇಳೆ ನನ್ನ ಭೌತಿಕ ದೇಹದ ಮೇಲೆ ಆಕ್ರಮಣ ನಡೆಯುವುದಾದರೆ ಅದಕ್ಕೂ ನಾನು ಸಿದ್ಧ. ನಾನು ಕೇವಲ ತತ್ವ ಜಿಜ್ಞಾಸೆಯ ಸನ್ಯಾಸಿಯೆಂದು ಭಾವಿಸಬೇಡಿ. ಕಾಯಶಕ್ತಿಗಳಿಸಿರುವ ಕುಸ್ತಿ ಪಟುವೂ ಹೌದು. ಎದುರಾಳಿಗಳನ್ನು ಕಂಡು ಹೆದರಿ ಹೋಗುವ ಹೇಡಿ ನಾನಲ್ಲ. ಬಸವ ಧರ್ಮದ ರಕ್ಷಣೆಗಾಗಿ ಹೋರಾಡುವ ಸೇನಾನಿ. ವಿಶ್ವಗುರು ಬಸವಣ್ಣನವರು ಹೇಳಿದಂತೆ, ಎಡದ ಕೈಯಲು ಹಾಲ ಬಟ್ಟಲು, ಬಲದಕೈಯಲು ಓಜುಗಟ್ಟಿಗೆ ಹಿಡಿದು ಅವರ ತತ್ವದ ಅಮೃತಧಾರೆಯೆರೆಯುತ್ತಾ ಹೊರಟಿದ್ದೇನೆ. ಸೌಜನ್ಯದಿಂದ ಬರುವ ಧರ್ಮಪಿಪಾಸುಗಳಿಗೆ ಪ್ರವಚನದ ಹಾಲೆರೆದು ಸೇವೆ ಸಲ್ಲಿಸುತ್ತೇನೆ. ದೌರ್ಜನ್ಯದಿಂದ ಬಳಿಸಾರುವ ಜಾತಿವಾದಿಗಳ ಎದುರು ಓಜುಗಟ್ಟಿಗೆ ಹಿಡಿದು ಹೋರಾಡುತ್ತೇನೆ. ವಿಶ್ವಧರ್ಮಕ್ಕಾಗಿಯೇ ಮೀಸಲಾದ ನನ್ನ ಕಾಯ, ವಚನ, ಮನಗಳು ಅಂತಿಮವಾಗಿ ಅದೇ ಉದ್ದೇಶಕ್ಕೆ ಅರ್ಪಿತವಾಗುವುದಾದರೆ ಅದಕ್ಕಿಂತ ಮಿಗಿಲಾದ ಮಹಾನವಮಿ ಮತ್ತಾವುದಿದ್ದೀತು ? ಆದರೆ ಶರಣ-ಶರಣೆಯರೇ, ಧರ್ಮರಕ್ಷಣೆಗೆ ಬೇಕಾಗಿರುವುದು ರಕ್ತವಲ್ಲ ; ಭಕ್ತಿ, ದ್ವೇಷವಲ್ಲ ; ಪ್ರೇಮ. ವಿಕಾರವಲ್ಲ; ವಿವೇಕ, ಜಾತಿಯಲ್ಲ ; ಧರ್ಮ, ಅಸಹನೆಯಲ್ಲ ಆತ್ಮೀಯತೆ."

ಆ ವಾಣಿಯೇ ಒಂದು ಮೋಡಿ ! ಸಭೆ ಮತ್ತೆ ಸಭ್ಯವಾಯಿತು, ಜಾತಿವಾದಿಯ ನಾಲಿಗೆ ಮೆತ್ತಗಾಯಿತು. ಈ ಪ್ರಸಂಗ ಸ್ವಾಮೀಜಿಯವರನ್ನು ಹೆಚ್ಚಿಗೆ ಪರಿಚಯ ಮಾಡಿಕೊಟ್ಟು ನನ್ನನ್ನು ಅವರ ಸಂಸ್ಥೆಯೊಡನೆ ಬೆಸೆಯಿತು. 'ಪ್ರಥಮ ನೋಟದಲ್ಲೇ ಪ್ರೀತಿ' ಎಂಬ ಆಂಗ್ಲ ಉಕ್ತಿಯಂತೆ ಪ್ರಥಮ ಸಂದರ್ಶನದಲ್ಲೇ ಅಭಿಮಾನಕ್ಕೆ ಅಂಕುರಾರ್ಪಣ ಮಾಡಿತು. ಸ್ವಾಮೀಜಿಯವರನ್ನು ನಾನು ಕಂಡದ್ದು ಅದೇ ಮೊದಲು. ಆದರೆ ಅದೃಷ್ಟಕ್ಕೆ ನಾನು light (ಮತ್ತು right) angle ನಲ್ಲಿ ನೋಡಿದೆ. ಎಂತಲೇ, ಅವರಲ್ಲಿ ತುಂಬಿದ್ದ ಬಸವ ಧರ್ಮದ ವೀರ ಚೇತನ ನನಗೆ ಗೋಚರವಾಯಿತು. ಅವರ ನಿಲುವು ಸರಿಯೆನಿಸಿತು. ಧರ್ಮ ಪ್ರಸಾರಕರಿಗೆ ಇಂತಹ ಕೆಚ್ಚು ಅವಶ್ಯವೆನಿಸಿತು.

ಧಾರ್ಮಿಕ ಕ್ಷೇತ್ರದಲ್ಲಿ ಶ್ರೀ ಲಿಂಗಾನಂದ ಸ್ವಾಮಿಗಳ ಸ್ಥಾನಮಾನ ವಿಶಿಷ್ಟ ! (ಕೆಲವು ಧರ್ಮಗುರುಗಳು ಇದನ್ನು ಒಪ್ಪುವುದು ಕಷ್ಟ !) ಹುಟ್ಟುತ್ತಲೇ ಕಟ್ಟಿಕೊಂಡು ಬಂದ ಕ್ರಾಂತಿಯ ಕಿಡಿ. (ಪಟ್ಟಭದ್ರ ಹಿತಾಸಕ್ತಿಗಳಿಗೆ ಅದೇ ಗಡಿಬಿಡಿ) ನುಡಿ ನುಡಿಯಲ್ಲಿ ಸತ್ಯ ಸಾಧನೆಯ ಕೆಚ್ಚು ; ನಿಶ್ಚಲ ನಿಷ್ಠೆ. ಬಸವಣ್ಣನ ಹೊರತಾಗಿ ಅವರು 'ರಾಜಿ' ಮಾಡಿಕೊಂಡುದು ಅಪರೂಪ. ಸಾಧನೆ ಸಿದ್ಧಿ ಎಲ್ಲವೂ ಆ ಮಹಾ ಗುರುವೆ !

'I am neither backward nor forward, I am upward ! ಎಂಬ ಹೊಸ ದಾರಿ. ಹಿಂದುಳಿದ ಕೀಳರಿಮೆಯಿಲ್ಲ ; ಮುಂದುವರಿದ ಮೇಲರಿಮೆಯಿಲ್ಲ, ಇವೆರಡೂ ದುರ್ಬಲ ಭಾವನೆಗಳನ್ನು ತೊಡೆದು ಹಾಕುವ ಸಿದ್ಧಾಂತ. ಆತ್ಮವಿಶ್ವಾಸ, ಅಭಯ ಭಾವ ಶ್ರೀಮಂತ ! ಉಚ್ಚಧ್ಯೇಯ ಸಾಧನೆಯ ಏಕಾಗ್ರತೆ. ಕಷ್ಟಕಾರ್ಪಣ್ಯಗಳಿಗೆ ಜಗ್ಗದ ಎದೆಗಾರಿಕೆ. ಸದಾ ಪ್ರವಾಹದೆದುರೇ ಸೆಣಸುವ ಅಭ್ಯಾಸ ; ಸುಳಿಯಲ್ಲೇ ಧುಮುಕುವ ಸಾಹಸ !

'ಶ್ರೀ ಲಿಂಗಾನಂದ ಸ್ವಾಮಿಗಳು' ಇದ್ದಕ್ಕಿದ್ದಂತೆಯೇ (ಕೆಲವು ಲಿಂಗೋದ್ಭವರಂತೆ !)' ಆದ ಹಣ್ಣಲ್ಲ. ತನಗೆ ತಾನೇ ಆದ ಹಣ್ಣು. (ಆಧ್ಯಾತ್ಮ ಸಾಧನೆಯಲ್ಲಿ ಮೈಯೆಲ್ಲ ಕಣ್ಣು !) ಮಾಡಿದ ಗುರುವಲ್ಲ ; ಆದ ಗುರು. ನಡೆದ ಹಾದಿಗೆ ತೆತ್ತ ಬೆಲೆ ಸ್ವಲ್ಪವಲ್ಲ ; ಬಸವಣ್ಣನ ರಕ್ಷೆಯನ್ನು ಹೊತ್ತು ಹೊರಟ ಬಲುಮೆ ಸಾಮಾನ್ಯವಲ್ಲ. ಗಮನಾರ್ಹ ಗತಿ ; ಧೀಮಂತಧೃತಿ, ಅಖಂಡ ಆತ್ಮಾನುಭೂತಿ. ಸ್ವಾಮೀಜಿ ಅವರು ನವೀನ ದೃಷ್ಟಿಯ ಸ್ವಯಾನುಭಾವಿ.

ಅದ್ಭುತ ಪ್ರತಿಭೆಯ ಈ ಕ್ರಾಂತಿ ಚೇತನದ ಜನ್ಮಕ್ಷೇತ್ರ ವಿಶ್ವಗುರು ಬಸವಣ್ಣನನ್ನು ಇತ್ತ ಬಿಜಾಪುರ ಜಿಲ್ಲೆ. ಜನ್ಮಸ್ಥಳ ಬಾಗೇವಾಡಿ ತಾಲ್ಲೂಕು ಮನಗೋಳಿ ಗ್ರಾಮ. ಜನ್ಮವಿತ್ತವರು ಶರಣ ಮಲ್ಲಪ್ಪ ಕಪ್ಪರದ ಮತ್ತು ಕಲ್ಲಮ್ಮ ತಾಯಿ. ಜನ್ಮದಿನ 1931ರ

(ಈ ಲೇಖಕ ಹುಟ್ಟಿದ್ದು ಅದೇ ವರ್ಷ ; ಅದೇ ಹರ್ಷ !). ಸೆಪ್ಟಂಬರ್ ಹದಿನಾಲ್ಕು. ಜನ್ಮ ನಾಮಾಂಕಿತ ಸಂಗಮೇಶ.

ಹಂಚಿನಾಳ ಕನ್ನಡ ಶಾಲೆಯಲ್ಲಿ ಅಕ್ಷರಾಭ್ಯಾಸ. ಮನಗೋಳಿಯಲ್ಲೇ ಮುಲ್ಕಿ ಪರೀಕ್ಷೆ. ಸಂಗಮೇಶ ಬಲು ಮುದ್ದಾದ ಅಣುಗ ; (ಅಷ್ಟೇ ಘಾಟಿ ಹುಡುಗ) ಶ್ರದ್ಧೆಯ ವಿದ್ಯಾರ್ಥಿ. ಮುಲ್ಕಿ ಪರೀಕ್ಷೆ ದಾಟಿ ಮುಂದೆ ಹೊರಟಾಗ ತೊಡರಿಕೊಂಡ ಬಡತನವ, ಮುಳ್ಳು ಬೇಲಿ. 'ಸಂಗನ ಬಸವಣ್ಣನ ಕರುಣೆ'—ಉಳ್ಳವರು ಕೆಲವರು, ತೊಡರಿದ್ದ ಮುಳ್ಳನ್ನು ಬಿಡಿಸಿ ಮುಂದೆ ಹೋಗಲು ಅಷ್ಟು ದಾರಿ ಮಾಡಿಕೊಟ್ಟರು.

ಬಿಜಾಪುರ—ಬಾಗಲಕೋಟೆಯಲ್ಲಿ ಪ್ರೌಢಶಾಲಾಶಿಕ್ಷಣ. 1951 ರಲ್ಲಿ ಎಸ್.ಎಸ್.ಸಿ. ಪರೀಕ್ಷೆಯಲ್ಲಿ ತೇರ್ಗಡೆ. ಪ್ರೌಢಶಾಲೆಯಲ್ಲಿದ್ದಾಗಲೇ ಸಂಗಮೇಶರ ಮಾನಸಿಕ ಪ್ರೌಢತೆಯ ಅಭಿವ್ಯಕ್ತಿ. ಸವೆದ ಜಾಡು **ಬಿಟ್ಟು** ಹೊಸ ಹಾದಿ ಮಾಡುವ ಕುತೂಹಲ. ಮನೆಯ ಬಡತನ ಮನಸ್ಸಿನ ಮೇಲೆ ಪರಿಣಾಮ. ಸಾಮಾಜಿಕ ಏರುಪೇರಿನ ಬಗ್ಗೆ ಎಲ್ಲೆ ಮೀರಿದ ಸಿಟ್ಟು. ದೇವರು, ಧರ್ಮ—ಇವುಗಳ ಅಸ್ತಿತ್ವವನ್ನೇ ಕೆಣಕುವ ಪಟ್ಟು. ತಂದೆ-ತಾಯಿ, ಗುರು-ಗೆಳೆಯ ಎಲ್ಲರಲ್ಲೂ ಅದೇ ಚರ್ಚೆ.

ತಲೆಯಲ್ಲಿ ಈ ಗೊಂದಲ ತುಂಬಿಕೊಂಡೇ ಕಾಲೇಜು ಆವರಣಕ್ಕೆ ಪ್ರವೇಶ. ಯೌವನ ಸಹಜ ಉತ್ಸಾಹ, ಕೆಚ್ಚು, ವಾದ-ವಿವಾದದ ಹುಚ್ಚು. 'ಕಣ್ಣಿಗೆ ಕಂಡುದಷ್ಟೇ ಸತ್ಯ' ಎನ್ನುವ ಸಿದ್ಧಾಂತ, ನಾಸ್ತಿಕವಾದದ ಮಂತ್ರ.

ಬಿ.ಎ. ಪದವಿಗಾಗಿ 'ಉದ್ದೇಶ ಪೂರ್ವಕ'ವಾಗಿ ಆರಿಸಿಕೊಂಡ ವಿಷಯ ತತ್ತ್ವಶಾಸ್ತ್ರ. ಅಂತಿಮ ತರಗತಿಗೆ ಬರುವ ವೇಳೆಗೆ ನಾಸ್ತಿಕವಾದದ ಭ್ರಮ ನಿರಸನ. ಪ್ರೊ॥ ರಾಜಗೋಪಾಲ ಅವರಿಂದ ಸತ್ಯಾನ್ವೇಷಣೆಯ ರಾಜಮಾರ್ಗ ದರ್ಶನ. ಅಂದು ಅಂತಹ ಮಾರ್ಗದರ್ಶನ ದೊರೆಯದಿದ್ದರೆ ಸಂಗಮೇಶ 'ಇಂದಿನ ಸಮತಾವಾದಿ ಧಾರ್ಮಿಕ ಮುಖಂಡರಾಗುತ್ತಿರಲಿಲ್ಲ; ಸಾಮ್ಯವಾದಿ ಕಾರ್ಮಿಕ ಮುಖಂಡರಾಗುತ್ತಿದ್ದರು.'

ಅವರ ಪರಿವರ್ತನೆಗೆ ಒಂದು ಉದಾಹರಣೆ : ಅವರಿದ್ದ ವಿದ್ಯಾರ್ಥಿ ನಿಲಯದಲ್ಲಿ ಲಿಂಗ ಧರಿಸದೆ ಊಟಕ್ಕೆ ಅವಕಾಶವಿರಲಿಲ್ಲ. ಇದನ್ನು ಕಂಡು, "Linga is a gate-pass to the dining hall" ಎಂದು ನಾಸ್ತಿಕರಾಗಿ ಗೇಲಿ ಮಾಡಿದ್ದುದುಂಟು. ಆದರೆ ಅದೇ ಸಂಗಮೇಶ ಇಂದು 'ಲಿಂಗಾನಂದ ಸ್ವಾಮಿ'ಗಳಾಗಿದ್ದಾರೆ. ಅದೇ ಲಿಂಗಕ್ಕೆ "It is a gate-pass to the kingdom of God" ಎನ್ನುತ್ತಾರೆ. ಎಂತಹ ಅದ್ಭುತ ಬದಲಾವಣೆ ! ಪವಾಡ ಸದೃಶ್ಯ ಪರಿವರ್ತನೆ !

ಪ್ರೊ॥ ರಾಜಗೋಪಾಲ ಅವರು ಸಂಗಮೇಶ್ವರರಲ್ಲಿ ತತ್ವ ಜ್ಞಾನದ ಹಸಿವಿನ ಕಿಚ್ಚನ್ನೇ ಹಚ್ಚಿದರೆಂದು ಹೇಳಬಹುದು. ಪರಿಣಾಮವಾಗಿ ಧರ್ಮಗ್ರಂಥಗಳ ನಿರಂತರ ಅಧ್ಯಯನ. ವಚನ ಸಾಹಿತ್ಯಾವಲೋಕನದಿಂದ ಬಸವ ಧರ್ಮದ ದಿವ್ಯದರ್ಶನ. ವಿವಿಧ ಧರ್ಮ-ತತ್ವ ಶಾಸ್ತ್ರಗಳ ಬಗ್ಗೆ ಮತ್ತಷ್ಟು ತೌಲನಿಕ ಮತ್ತು ಆಳವಾದ ಅಭ್ಯಾಸ. ಫಲವಾಗಿ ಹೃದಯ ಗಗನದಲ್ಲಿ ಬಸವ ರವಿ ಕಿರಣೋದಯ. ವಿದ್ಯಾರ್ಥಿ ಸಂಗಮೇಶರಿಗೆ ಬಸವಣ್ಣ ಆದರ್ಶ ಧ್ಯೇಯವಾದ, ಆರಾಧ್ಯ ಮೂರ್ತಿಯಾದ: ಸರ್ವಸ್ವವೇ ಆದ.

1956ರಲ್ಲಿ ಒಂದು ದಿನ ಸಂಗಮೇಶ ತಮ್ಮ ಕೊಠಡಿಯಲ್ಲಿ ಕುಳಿತಿದ್ದಾರೆ. ಎದುರಿಗೆ ಕ್ರಾಂತಿಪುರುಷ ಬಸವಣ್ಣನ ಭಾವಚಿತ್ರ. ಅದರ ಮೇಲೆ ಸಂಗಮೇಶರ ಭಾವ ತುಂಬಿದ ದೃಷ್ಟಿ. ಅವರ್ಣನೀಯ ವಾತಾವರಣ ಸೃಷ್ಟಿ. ಕೆಲ ಸಮಯ ಹಾಗೆಯೇ ಕಳೆದಿರಬಹುದು. ಅದಮ್ಯ ಚೇತನದ ಮಿಂಚಿನ ಸಂಚಾರವಾದಂತಾಯಿತು. ಬೆಳಕಿನ ಮಹಾಪೂರ ನರನರಗಳಲ್ಲಿ ಪ್ರವಹಿಸಿತು. ಸಂಗಮೇಶರಿಗೆ ಅಂದೇ ಬಸವಣ್ಣನ ಸಂದೇಶ ಮುಟ್ಟಿತು. ಬಸವ ಧರ್ಮ ಪ್ರಸಾರಕ್ಕೆ ಅದೇ ದೀಕ್ಷಾದಿನವಾಯಿತು.

ಬಿ. ಎ. ಪದವಿಯನಂತರ ಸಂಗಮೇಶ ಅವರು ಬಿಜಾಪುರದ ಸರ್ಕಾರಿ ಪ್ರೌಢ ಶಾಲೆಯಲ್ಲಿ ಅಧ್ಯಾಪಕರಾಗಿದ್ದರು. ಆತ್ಮ ಪರೀಕ್ಷೆಯ ಆಂದೋಳನ ಪ್ರಾರಂಭವಾದುದು ಆಗಲೇ. ತುಂಬು ಯೌವ್ವನ. ಲೋಕ ವ್ಯವಹಾರದೊಳಕ್ಕೆ ಪ್ರವೇಶಿಸಲು ಹದವಾದ ಕಾಲ. ನಾನಾ ವರ್ಣದ ಸಂಸಾರ ಒಂದು ಕಡೆ, ಎಡಬಿಡದೆ ಅಂತರಂಗದಲ್ಲಿ ಮಿಡಿಯುತ್ತಿದ್ದ ದೈವೀ ಕರೆ ಮತ್ತೊಂದು ಕಡೆ. ನಮ್ಮ - ನಿಮ್ಮೆಲ್ಲರ ಅದೃಷ್ಟ. ಬಸವಣ್ಣ ತನ್ನ ಅನುಗ್ರಹದ ಆಧಾರ ಒದಗಿಸಿದ. ಉತ್ಥಾನದ ದಾರಿತೋರಿದ. ಲೋಕೋದ್ಧಾರಕ್ಕೆ ತನ್ನ ಕಂದನನ್ನು ನೀಡಿದ.

ಸಂಗಮೇಶರಿಗೆ ಲಿಂಗದೀಕ್ಷೆಯಾದುದು ಗದುಗಿನ ಶಿವಾನಂದ ಮಠದ ಶ್ರೀ ಮಲ್ಲಿಕಾರ್ಜುನ ಸ್ವಾಮಿಗಳಿಂದ. ಮುಂದೆ ಕರ್ನಾಟಕ ವಿಶ್ವವಿದ್ಯಾಲಯದಲ್ಲಿ ಸ್ನಾತಕೋತ್ತರ ಪದವಿಗಾಗಿ ಅಭ್ಯಾಸ. ಆದರೆ ಅದು ಪೂರ್ಣಗೊಳ್ಳುವ ಮುನ್ನವೇ ಬಸವಣ್ಣನ ಕರುಳ ಕರೆ. ಆ ಕರೆಗೆ ಓಗೊಟ್ಟು ಇದ್ದಕ್ಕಿದ್ದಂತೆಯೇ 16-11-1956 ರಂದು ಜ್ಞಾನ ಸನ್ಯಾಸದ ನಿರ್ಧಾರ. ವಿದ್ಯಾಭ್ಯಾಸಕ್ಕೆ ಮಂಗಲ ; ಧಾರವಾಡದಿಂದ ಲೋಕ ಸಂಚಾರಕ್ಕಾಗಿ ನಿರ್ಗಮನ. ನಾಲ್ಕು ವರ್ಷಗಳ ಕಾಲ ಪ್ರವಾಸ, ಪ್ರವಚನ ಸೇವೆ. ಮಧ್ಯೆ ಮಾಣಿಕ್ಯಗಿರಿ-ಸೊಗಲ ಸೋಮೇಶ್ವರಗಳ ನಿಸರ್ಗ ಮಂದಿರದಲ್ಲಿ ಯೋಗಾಭ್ಯಾಸ.

ಅಭಿಮಾನಿಗಳ ಕರೆಗೆ ಓಗೊಟ್ಟು ಮೈಸೂರಿಗೆ ಪ್ರಯಾಣ. ಪ್ರವಚನ ಪ್ರತಿಭೆಗೆ ಸುತ್ತೂರು ಜಗದ್ಗುರು ಶ್ರೀ ಶಿವರಾತ್ರಿ ರಾಜೇಂದ್ರಸ್ವಾಮಿಗಳಿಂದ ಪ್ರಶಂಸೆ ;

ದಿ. 7-8-1961ರ ಸೋಮವಾರದಂದು ಜಂಗಮ ದೀಕ್ಷೆಯ ಕರುಣೆ. (ಸುತ್ತೂರು ಜಗದ್ಗುರುಗಳ ಈ ತತ್ತ್ವನಿಷ್ಠ, ದಿಟ್ಟಕಾರ್ಯ ಕೆಲವು 'ಆಜನ್ಮ (!) ಜಂಗಮ'ರಿಗೆ ಕಸಿವಿಸಿ ಉಂಟುಮಾಡಿರಬೇಕು ! ಇರಲಿ, ಮಾಲೆಗಾರನ ಕೇಳಿ ನನೆ ಅರಳುವುದೇ, ಇಂಜಿನಿಯರ್‌ನ ಕೇಳಿ ನದಿ ಹರಿಯುವುದೆ ?

ಜಂಗಮ ದೀಕ್ಷೆಯ ನಂತರ ಸಂಗಮೇಶರು 'ಶ್ರೀ ಲಿಂಗಾನಂದ ಸ್ವಾಮಿ'ಗಳಾದರು. ಬಸವಧರ್ಮ ಪ್ರವಚನ ನಿತ್ಯಕಾಯಕವಾಯಿತು. ಕೀರ್ತಿಲತೆ ನಾಡ ತುಂಬ ಹಬ್ಬಿತು. ಎಲ್ಲ ಕಡೆಯಿಂದಲೂ ಪ್ರವಚನಕ್ಕೆ ಕರೆ ಬರತೊಡಗಿತು.

ಶ್ರೀ ಲಿಂಗಾನಂದ ಸ್ವಾಮಿಗಳ ಪ್ರವಚನವೆಂದರೆ ಶ್ರೋತೃಗಳಿಗೆ ಜ್ಞಾನ ದಾಸೋಹ ಸಂಭ್ರಮ. ಅವರ ಅನುಭವ ಸ್ಫೂರ್ತಿ ಅದಮ್ಯ. ಪರಿಣಾಮ ಅಸಾಮಾನ್ಯ; ವಿಚಾರಧಾರೆ ಸರ್ವಮಾನ್ಯ! ವಚನ ಸಾಹಿತ್ಯ ಅವರಿಗೆ ವಿಶ್ವಕೋಶ! ಬಸವ ಧರ್ಮವೇ ವಿಶ್ವಧರ್ಮವೆಂಬ ವೀರಘೋಷ! ಸ್ವಾಮೀಜಿ ಅವರ ಪ್ರತಿಭೆ **imported** (ಆಮದು ಆದುದು) ಅಲ್ಲ **inherent** (ಅಂತರ್ಗತ)!

"ಮಾನವ ಮಾನವ ಹೃದಯಗಳನ್ನು ಗೋಡೆಗಳು ಪ್ರತ್ಯೇಕಿಸಿವೆ. ಈ ಗೋಡೆಗಳು ಕುಸಿದಲ್ಲಿ ಹೃದಯಗಳು ಒಂದಾಗಿ ಈ ಭೂಮಿ ಸ್ವರ್ಗವಾದೀತು." ಎಂದು ಶ್ರೀ ಅರವಿಂದರು ಹೇಳಿದ್ದಾರೆ. ಈ ಪ್ರತ್ಯೇಕತೆಯ ಗೋಡೆಗಳನ್ನು ಒಡೆಯುವ ಕೆಲಸವನ್ನೆ ಶ್ರೀ ಲಿಂಗಾನಂದ ಸ್ವಾಮಿಗಳು ಮಾಡುತ್ತಿರುವುದು. "ಭೂಲೋಕದ ಭವಿತವ್ಯ ನಮ್ಮ ಅರಿವಿನ ಬದಲಾವಣೆಯನ್ನು ನೆಮ್ಮಿಕೊಂಡಿದೆ. ನಮ್ಮ ಅರಿವು ಬದಲಾದಲ್ಲಿ ಮಾತ್ರ ಜನಾಂಗದ ಉದ್ಧಾರ ಸಾಧ್ಯ" ಇದು ಅರವಿಂದಾಶ್ರಮದ ಮಾತೆಯವರ ಸಂದೇಶ. ಈ ಅರಿವಿನ ಬದಲಾವಣೆಯ ಕೆಲಸವೇ ಶ್ರೀ ಲಿಂಗಾನಂದ ಸ್ವಾಮಿಗಳ ಪ್ರವಚನದ ಪರಮ ಗುರಿ.

ಸ್ವಾಮೀಜಿ ಅವರು ಇಡೀ ಭಾರತವನ್ನು ಸುತ್ತಿದ್ದಾರೆ ; ವಿದೇಶಕ್ಕೂ ಹೋಗಿ ಬಂದಿದ್ದಾರೆ. ಈ ವ್ಯಾಪಕ ಪ್ರವಾಸ ಅವರ ಅನುಭವವನ್ನು ವಿಸ್ತಾರಗೊಳಿಸಿದೆ. ಅವರ ಪ್ರವಾಸ ಪ್ರವಚನಗಳಲ್ಲಿ ಕೃಷಿಕರು, ಕಾರ್ಮಿಕರು, ಕಲಾವಿದರು, ಸಾಹಿತಿಗಳು, ಸಚಿವರು, ವಿದ್ಯಾರ್ಥಿಗಳು, ಅಧ್ಯಾಪಕರು, ಐಂದ್ರಜಾಲಿಕರು, ಜ್ಯೋತಿಷ್ಕರು ಹೀಗೆ ಎಲ್ಲ ಕ್ಷೇತ್ರಗಳ ಜನರನ್ನು ಕಂಡಿದ್ದಾರೆ. ಮಾನವ ಸ್ವಭಾವದ ವಿವಿಧ ಮುಖಗಳನ್ನು ಅರ್ಥಮಾಡಿಕೊಂಡಿದ್ದಾರೆ.

ಹೋದೆಡೆಯಲ್ಲೆಲ್ಲ ಹೂವಿನ ಗದ್ದುಗೆಯೇ ಅವರಿಗೆ ದೊರೆತಿಲ್ಲ. ವಿವೇಕಿಗಳು ಸ್ವಾಗತಿಸಿದ್ದಾರೆ, ವಿರೋಧಿಗಳು ಕಿರುಕುಳದ ಕೆಸರು ಚೆಲ್ಲಿದ್ದಾರೆ. ಆದರೆ ಮೆಚ್ಚಿ

ದಾಗ ಮೈಮರೆಯದೆ, ಚುಚ್ಚಿದಾಗ ಧೃತಿಗೆಡದೆ ಪ್ರವಚನ ಕಾಯಕ ನಡೆಸಿದ್ದಾರೆ ಸ್ವಾಮೀಜಿ ಈ ಜಂಗಮ ಮೂರ್ತಿಯಲ್ಲಿ ಆತ್ಮನಿಶ್ವಾಸ, ಸಮಷ್ಟಿ ಪ್ರೇಮ, ನಿರ್ಭೀತಿ, ನಮ್ರತೆ, ಸರಳತೆ, ಉಲ್ಲಾಸ, ಸರಸ, ತಾಳ್ಮೆ, ಔದಾರ್ಯ, ಮಾನವೀಯತೆ, ತತ್ತ್ವನಿಷ್ಠೆ, ಕ್ಷಮಾ ಗುಣ, ಆತ್ಮೀಯತೆ, ದೂರ ದೃಷ್ಟಿ-ಇವುಗಳ ಬೃಹತ್ ಸಂಚಯವೇ ತುಂಬಿದೆ.

ವಿದೇಶವೊಂದರ ರಾಷ್ಟ್ರ ನಾಯಕನ ಪ್ರತಿಮೆಯ ಮೇಲೆ 'Not what he got, but what he gave' ಎಂದು ಬರೆದಿದ್ದಾರಂತೆ. ಈ ಮಾತು ಸ್ವಾಮೀಜಿಗೆ ಸಂಪೂರ್ಣ ಅನ್ವಯ. ಅವರ ಹಿರಿಮೆ ಇರುವುದು ಅವರಲ್ಲಿರುವ ಜ್ಞಾನ ಸಂಪತ್ತಿಗಿಂತ ಅವರು ನೀಡುತ್ತಿರುವ ಜ್ಞಾನ ಸಂಪತ್ತಿನಿಂದ.

ರಾಜಕುಮಾರರೆಲ್ಲ ಬುದ್ಧರಾಗಿಲ್ಲ; ಬಡಗಿಗಳ ಮಕ್ಕಳೆಲ್ಲ ಏಸುವಾಗಿಲ್ಲ. ಕಾವಿ ತೊಟ್ಟವರೆಲ್ಲ ಸನ್ಯಾಸಿಗಳಾಗಿಲ್ಲ. ಗದ್ದುಗೆ ಏರಿದವರೆಲ್ಲ ಗುರುಗಳಾಗಿಲ್ಲ. ಅದಕ್ಕೆ ಸಂಸ್ಕಾರ ಬೇಕು, ಸಾಧನೆ ಬೇಕು, ಸಿದ್ಧಿ ಬೇಕು. ಇವೆಲ್ಲ ಇವೆಯೆಂತಲೇ ಲಿಂಗಾನಂದ ಸ್ವಾಮಿಗಳು ನಿಜವಾದ ಅರ್ಥದಲ್ಲಿ ಸದ್ಗುರುವಾಗಿದ್ದಾರೆ, ಜಂಗಮ ಜ್ಯೋತಿಯಾಗಿದ್ದಾರೆ.

ಬುದ್ಧನ ಅಹಿಂಸಾವಾದ, ಕ್ರಿಸ್ತನ ಮಾನವೀಯತೆ, ಪೈಗಂಬರನ ಧರ್ಮನಿಷ್ಠೆ, ಗಾಂಧೀಜಿಯ ಸುಧಾರಣಾ ಕಳಕಳಿ, ಶಿವಾಜಿಯ ರಾಷ್ಟ್ರ ಪ್ರೇಮ, ಪರಮಹಂಸರ ಆಧ್ಯಾತ್ಮ ಪ್ರವೃತ್ತಿ, ವಿವೇಕಾನಂದರ ಧರ್ಮ ಪ್ರಚಾರ ಶ್ರದ್ಧೆ, ದಯಾನಂದ ಸರಸ್ವತಿಯವರ ವಿಚಾರವಾದ-ಇವೆಲ್ಲ ಲಿಂಗಾನಂದ ಸ್ವಾಮಿಗಳಿಗೆ ಆದರ್ಶ. ಇವೆಲ್ಲವುಗಳ ಸಂಗಮವಾಗಿರುವ ಯುಗಪುರುಷ ಬಸವಣ್ಣ ಪರಮಾದರ್ಶ.

ಬಸವಣ್ಣ ತಿಪ್ಪೆಗೆ ಎಸೆದಿದ್ದ ಕಂದಾಚಾರ, ಮೂಢಾಚಾರ, ಶುಷ್ಕಾಚಾರಗಳನ್ನು ನಮ್ಮ ಕೆಲ ಸ್ವಾಮಿಗಳು ಮತ್ತೆ ಎತ್ತಿಕೊಂಡಿದ್ದಾರೆಂದು ನಿರ್ದಾಕ್ಷಿಣ್ಯವಾಗಿ ಹೇಳುವರು ಶ್ರೀ ಲಿಂಗಾನಂದಸ್ವಾಮಿಗಳು. "ಇಷ್ಟಲಿಂಗ ತತ್ತ್ವವು. ಜಾತಿವರ್ಣರಹಿತ ದೈವೀ ರಾಜ್ಯ ಸಂಸ್ಥಾಪನೆಗೆ ಬಸವಣ್ಣನವರು ಕೊಟ್ಟ ಅತ್ಯಂತ ಶ್ರೇಷ್ಠ ಸಾಧನೆ" ಎನ್ನುತ್ತಾರೆ. 'ಟೈಂ ಬೇಕಾದವರು ಗಡಿಯಾರ ಕಟ್ಟುವಂತೆ ದೇವರು ಬೇಕಾದವರು ಇಷ್ಟಲಿಂಗ ಕಟ್ಟಿಕೊಳ್ಳಬೇಕು' ಎನ್ನುವ ಅರ್ಥಪೂರ್ಣ ತಾತ್ತ್ವಿಕ ವಿವರಣೆ ಅವರದು.

ಶ್ರೀ ಲಿಂಗಾನಂದ ಸ್ವಾಮಿಗಳು ಅಮೂಲ್ಯ ತಾತ್ತ್ವಿಕ, ಸಾಹಿತ್ಯ ಕೃತಿಗಳನ್ನು ರಚಿಸಿದ್ದಾರೆ. ಹೃದಯದ ಭಾಷೆಯ ಜಾಡು ಹಿಡಿದು ಅಚ್ಚ ಕನ್ನಡದ ದೇವರನ್ನು ಆರಾಧಿಸಲು ಕಲಿಸುವ "ದೇವ ಪೂಜಾ ವಿಧಾನ", ಕಿರಿದಾದ ವಯಸ್ಸಿನಲ್ಲೇ ಹಿರಿದಾದ ಜ್ಞಾನಗಳಿಸಿಕೊಂಡು ಧರ್ಮ ಕ್ರಾಂತಿಯ ದಿವ್ಯ ಜ್ಯೋತಿಯಾಗಿ ಸಂಚರಿಸುವ ಪೂಜ್ಯ ಮಾತಾಜಿಯವರ ಜೀವನ ಚರಿತ್ರೆಯಾಗಿರುವ "ಚಿನ್ಮೂಲಾದ್ರಿಯ ಚಿತ್ಕಳೆ." ಸೂತ್ರಗಳಂತಿರುವ ಶರಣರ

ವಚನಗಳಿಗೆ ಅನುಭವ ಪ್ರಧಾನ ವ್ಯಾಖ್ಯಾನ ಬರೆದಿರುವ "ವಚನಾಮೃತ," ಪ್ರವಚನಕಾರರಿಗೆ ವಿಶ್ವಕೋಶವಾಗಿ, ಕೈಪಿಡಿಯಾಗಿ ಸಹಾಯ ಮಾಡುವ, ಸಾಧಕರಿಗೆ ಕೈತುತ್ತಿನಂತಿರುವ "ಅಕ್ಕನ ಪ್ರವಚನ," ನಾವು ಕಲ್ಪನೆ ಮಾಡಿದ ದೇವ-ದೇವತೆಗಳ ಮೂಢ ನಂಬಿಕೆಯ ಪೊರೆ ಕತ್ತರಿಸಿ, ನಮ್ಮೆಲ್ಲರನ್ನು ಸೃಷ್ಟಿ ಮಾಡಿರುವ ಕರ್ತನ ಸ್ವರೂಪವನ್ನು ತಿಳಿಸುವ "ದೇವರು," ನಿರಾಕಾರ ದೇವರು ಕಲ್ಪನಾತೀತ, ಬ್ರಹ್ಮಾಂಡಗತ; ಇಂಥ ವಿಶ್ವಾತ್ಮನನ್ನು ವಿಶ್ವದಾಕಾರದಲ್ಲಿ ಚುಳುಕೀಕರಿಸಿರುವ ಇಷ್ಟಲಿಂಗ ವಿಜ್ಞಾನದ ಸಮಗ್ರ ಸಿದ್ಧಾಂತವನ್ನೊಳಗೊಂಡ "ಲಿಂಗತತ್ವದರ್ಪಣ."

ಇಂದು ನಮ್ಮ ನಾಡಿನಲ್ಲಷ್ಟೇ ಅಲ್ಲ ವಿದೇಶದಲ್ಲೂ ಹೆಸರಾಗಿರುವ 'ವಿಶ್ವ ಕಲ್ಯಾಣ ಮಿಷನ್' ಸ್ವಾಮೀಜಿ ಅವರ ಸ್ಥಾಪನೆ. ಸುಮಾರು ನಲವತ್ತಕ್ಕೂ ಹೆಚ್ಚು ಬಸವಧರ್ಮ ಸಾಹಿತ್ಯಕೃತಿಗಳನ್ನು ಪ್ರಕಟಿಸಿರುವ 'ಸುಯಿಧಾನ ಸುಗ್ರಂಥಮಾಲೆ' ಸ್ವಾಮೀಜಿ ನೆಟ್ಟಬಳ್ಳಿ. ಈಗ ಯೋಜಿತವಾಗಿರುವ 'ಬಸವ ಗಂಗೋತ್ರಿ' ಅವರ ಸಂಕಲ್ಪದ ಮಹಾ ಸಂಘಟನೆ.

ಸಾಹಿತ್ಯ, ಸಂಸ್ಕೃತಿ, ಸಮಾಜ, ಧರ್ಮ ಎಲ್ಲ ಕ್ಷೇತ್ರಗಳಲ್ಲಿ ಸಲ್ಲುವ, ನಿಲ್ಲುವ ಸೇವೆ. ಆದರೆ ಇವೆಲ್ಲಕ್ಕಿಂತ ದೊಡ್ಡದು ಅವರು ಸ್ಥಾಪಿಸಿರುವ ಜಗನ್ಮಾತಾ ಅಕ್ಕಮಹಾದೇವಿ ಮಹಾಪೀಠ. ಈ ಪೀಠಕ್ಕೆ ಪೂಜ್ಯ ಮಾತಾಜಿ ಅವರನ್ನು ಜಗದ್ಗುರುವನ್ನಾಗಿ ಘೋಷಿಸಿದ ಅವರ ಕೆಚ್ಚು ಸಾಮಾನ್ಯವಲ್ಲ.

ಪ್ರಖ್ಯಾತ ಇತಿಹಾಸಕಾರರಾದ ಪಿ. ಥಾಮಸ್ ತಮ್ಮ Indian women through the ages (ಯುಗ ಪರಂಪರೆಯಲ್ಲಿ ಭಾರತೀಯ ಮಹಿಳೆಯರು) ಎಂಬ ಗ್ರಂಥದಲ್ಲಿ "The teachings advocated in the 12th Century when the subjection of women had been complete in India, naturally brought upon Basava and his nephew the ire of the orthodox. And the two and other disciples had to suffer much at the hands of these orthodox" ಎಂದು ಬರೆದಿದ್ದಾರೆ. ಅವರು ಮುಂದುವರೆದು, "the Lingayats, for all practical purposes, are at present, just another sect of the vast conglomeration of people who constitute orthodox Hindus," ಎಂದು ಪ್ರಸಕ್ತ ಪರಿಸ್ಥಿತಿಯ ಬಗ್ಗೆ ತಿಳಿಸಿದ್ದಾರೆ. ಇಂತಹ ಪರಿಸ್ಥಿತಿಯಲ್ಲಿ ಸ್ವಾಮೀಜಿ ಪೂಜ್ಯ ಮಾತೆ ಮಹಾದೇವಿ ಅವರನ್ನು ಮಹಿಳಾ ಜಗದ್ಗುರು ಎಂದು ಸಾರಿದಾಗ ಸಂಪ್ರದಾಯ ಹುಬ್ಬೇರಿಸಿದ್ದು ಸೋಜಿಗವೇನಲ್ಲ. ಯಾರು ಏನೇ ಹೇಳಲಿ

'ಮಹಿಳೆಯರು ಗುರುವಾಗಲು ಸಾಧ್ಯ' ಎಂಬುದನ್ನು ಸಾಧಿಸಿ ತೋರಿಸುವುದಷ್ಟೇ ಅವರ ಉದ್ದೇಶ ಆ ಉದ್ದೇಶ ಸಾರ್ಥಕವಾಗಿದೆ, ಆಯ್ಕೆ ಸಮರ್ಥವಾಗಿದೆ.

ಜಗದ್ಗುರು ಎನ್ನುವುದು ಹೆಸರಿಗಲ್ಲ. ಸ್ವತಃ ಸ್ವಾಮೀಜಿಯವರೇನೂ ಸ್ವಪ್ರತಿಷ್ಠೆಗಾಗಿ ತಮ್ಮನ್ನು ತಾವು ಜಗದ್ಗುರು ಎಂದು ಕರೆದುಕೊಂಡಿಲ್ಲ. ಮಾತಾಜಿ ಅವರನ್ನು ಆ ಗುರುಸ್ಥಾನದಲ್ಲಿರಿಸಿರುವುದು ಇಡೀ ಮಹಿಳಾ ಕುಲಕ್ಕೇ ಸಲ್ಲಿಸಿದ ಗೌರವದ ಸಂಕೇತ. ಈ ಹಿನ್ನೆಲೆಯನ್ನು ಅರ್ಥಮಾಡಿಕೊಳ್ಳದ ಕೆಲವು ಶಕ್ತಿಗಳು 'ಅನಾಹುತವೊಂದು ಆದಂತೆ ಕೂಗೆಬ್ಬಿಸಿದವು. ಇರಲಿ, ರೋಗಿಗೆ ಹಾಲು ಸಿಹಿಯಪ್ಪುದೆ? ಕಾಗೆಗೆ ಮಾವು ಇನಿದಪ್ಪುದೆ? ಗೂಗೆಗೆ ಬೆಳಕು ಸವಿಯಪ್ಪುದೆ?

ಪೂಜ್ಯ ಮಾತಾಜಿ ಶ್ರೀ ಲಿಂಗಾನಂದ ಸ್ವಾಮಿಗಳ ಆಶಯದಂತೆ ತ್ರಿವಿಧ ಪ್ರತಿಭಾ ಸಂಪತ್ತಿನಿಂದ ಕೀರ್ತಿ ಪಡೆದಿದ್ದಾರೆ; ಹುಲ್ಲ ತಾರದೆ ಹೂವ ತಂದಿದ್ದಾರೆ!

ಶ್ರೀ ಲಿಂಗಾನಂದ ಸ್ವಾಮಿಗಳು ಮಹಾಕ್ರಾಂತಿಯೋಗಿ. ವಿಶಾಲ ಧಾರ್ಮಿಕ ಮೌಲ್ಯಗಳ ಶಾಶ್ವತ ನೆಲೆಗಟ್ಟಿನ ಮೇಲೆ ಹೊಸ ಸಮಾಜ ಕಟ್ಟಬೇಕೆಂಬ ಛಲ ಹೊತ್ತವರು. ಸಾಮಾಜಿಕ ಬದುಕಿನಲ್ಲಿ ನೀತಿ–ನಿಯಮಗಳನ್ನು ಬಿತ್ತುವ ಹೃತ್ಪೂರ್ವಕ ಹಂಬಲ ತಾಳ್ದವರು; ಧರ್ಮ ಬೋಧೆಯೇ-ಅವರ ಅಖಂಡ ಪೂಜೆ

ಸ್ವಾಮೀಜಿ ಅವರ ವಾಕ್‌ಪ್ರತಿಭೆಯೆಂದರೆ ಜಲಾಶಯದ ಜಲ ಹರಿದಂತೆ. ಗೇಟು ತೆರೆದ ಕೂಡಲೇ ರಭಸದಿಂದ ನುಗ್ಗುವ ನೀರು ತಾನು ಹರಿಯುವ ಕಾಲುವೆಯಲ್ಲಿ ಇರುವ ಕೊಳೆಯನ್ನೆಲ್ಲ ಕೊಚ್ಚಿ ಮುಂದೆ ನಡೆದು, ಬರಡು ಭೂಮಿಯನ್ನು ತಣಿಸುತ್ತದೆ. ಕೇವಲ ವಾಕ್ ಅಷ್ಟೇ ಪ್ರಭಾವಕಾರಿಯಲ್ಲ, ಅವರ ವಿಚಾರ ಧಾರೆಯೂ ಅಷ್ಟೆ. ಶ್ರೋತೃವಿನ ಸಂಶಯದ ಕಾಳಿಕೆಯ ನಿವಾರಣೆಗೆ ಸಿದ್ಧೌಷಧ!

ಕುಳಿತಲ್ಲಿ ನಿಂತಲ್ಲಿ ಅವರಿಗೆ ಹಿಂದೂ ಸಮಾಜದ ಚಿಂತೆ. ಈ ನಾಡಿನ ಧರ್ಮ ಪರಂಪರೆಗೆ ಎಳ್ಳಷ್ಟು ಅಪಚಾರವಾದರೂ ನೊಂದುಕೊಳ್ಳುವ ಕಳಕಳಿ. ವ್ಯಕ್ತಿಯ ನೈತಿಕ ಉತ್ಥಾನದಿಂದ ಸಾಮಾಜಿಕ ಬದಲಾವಣೆಯಾಗಬೇಕೆಂಬ ಆಶಯ. ಇದಕ್ಕಾಗಿ ಪ್ರವಚನಕಾರರ ಸಂಖ್ಯೆ ಬೆಳೆಯಬೇಕೆಂಬ ಅಭಿಪ್ರಾಯ. ಆ ಉದ್ದೇಶಕ್ಕಾಗಿಯೇ 'ಪ್ರಭುದೇವ ದಿವ್ಯಜ್ಞಾನ ವಿದ್ಯಾಲಯ'ಕ್ಕೆ [ಧರ್ಮ ಪ್ರಸಾರಕರ ತರಬೇತಿ ವಿದ್ಯಾಲಯ] ಅಡಿಪಾಯ!

ಎಂಟು ನೂರು ವರ್ಷಗಳ ಹಿಂದೆ ನಡೆದ ಸಾಮಾಜಿಕ, ಧಾರ್ಮಿಕ ಕ್ರಾಂತಿಯ ಪುನರುಜ್ಜೀವನ ಸ್ವಾಮೀಜಿ ಅವರ ಸಂಕಲ್ಪ. ವಾಸ್ತವವಾಗಿ ಪ್ರಖರ ಮತ್ತು

ಪ್ರಗತಿಪರ. ಬಸವ ತತ್ತ್ವವನ್ನು 'ಸಂಕೋಚದ ಸೆರೆಯಿಂದ ಬಿಡಿಸಿ' ಸಾರ್ವತ್ರಿಕ ವ್ಯಾಪ್ತಿಗೆ ತರಬೇಕೆಂಬ ಅವರ ಹಂಬಲವನ್ನು ನಾವು ಅರ್ಥಮಾಡಿಕೊಳ್ಳಬೇಕು. ನೂರೆಂಟು ವರ್ಣ-ವರ್ಗಗಳ ಕೋಟೆಗಳನ್ನು ನಿರ್ಮಿಸಿಕೊಂಡು, ಅದರ ಸುತ್ತಲೂ ಮೇಲರಿಮೆ ಕೀಳರಿಮೆಗಳ ಕಂದಕ ನಿರ್ಮಿಸಿಕೊಂಡು ಧರ್ಮ-ಸಮಾಜ-ರಾಷ್ಟ್ರಗಳಿಗೆ ಎಳ್ಳಷ್ಟೂ ಗಮನ ಕೊಡದವರ ಬಗ್ಗೆ ಅಹರ್ನಿಶಿ ಚಿಂತೆ; ಹಿಂದೂ ಸಮಾಜದ ಭವಿತವ್ಯದ ಬಗ್ಗೆ ಆಳವಾದ, ಗಂಭೀರ ಚಿಂತನ. "ಹಿಂದುತ್ವವು ಸಮೂಹ ವಾಚಕ ಪದ. ಇದು ಅನೇಕ ಧರ್ಮ-ಧರ್ಮೀಯರ ಒಕ್ಕೂಟ. ಹಲಸಿನ ತೊಳೆಗಳು ಬಿಡಿಬಿಡಿಯಾಗಿದ್ದುಕೊಂಡೂ ಒಂದು ಕವಚದ ಒಳಗೆ ಸುರಕ್ಷಿತವಾಗಿರುವಂತೆ ಹಿಂದೂ ಪರಂಪರೆಯೊಳಗೆ ಬರುವ ಎಲ್ಲರೂ ಭಾವೈಕ್ಯತೆ ಕಾಪಾಡಿಕೊಳ್ಳಬೇಕು. ಕ್ಷುಲ್ಲಕ ಭಿನ್ನಾಭಿಪ್ರಾಯ, ಸಂಕುಚಿತ ಬಡಿದಾಟ ಸಲ್ಲದು" ಎಂದು ರಾಷ್ಟ್ರಧರ್ಮದ ಸಂದೇಶವನ್ನು ಅಖಂಡವಾಗಿ ಮೊಳಗುವ ಧೀರ ಚೇತನ ಲಿಂಗಾನಂದ ಸ್ವಾಮೀಜಿ. ಹೀಗೆ ಧರ್ಮ-ರಾಷ್ಟ್ರಗಳ ಬಗೆಗೆ ಇಷ್ಟೊಂದು ಕಳಕಳಿ ಇರುವ ಗುರುಗಳು ನಮ್ಮ ಮಧ್ಯ ಇರುವುದು ನಮ್ಮ ಶುಭೋದಯ. ಇದು ನಮಗೆಲ್ಲ ಹೆಮ್ಮೆಯ ವಿಷಯ.

ವಾಸ್ತವತಾವಾದಿ ಸ್ವಾಮೀಜಿ ಅವರ ತತ್ತ್ವಜ್ಞಾನ ವೈಜ್ಞಾನಿಕ, ದಾರ್ಶನಿಕ ಮತ್ತು ಕ್ರಿಯಾತ್ಮಕ. ವಿಜ್ಞಾನ ಮತ್ತು ಧರ್ಮಗಳೆರಡನ್ನು ಕೈಕುಲುಕಿಸುವ ವಿನೂತನ ಮಾರ್ಗಕ್ರಮ ಅವರದು ; ವಿಶಿಷ್ಟ ಜ್ಞಾನ ಅವರದು !


ಶ್ರೀ ಲಿಂಗಾನಂದ ಸ್ವಾಮಿಗಳು ನವಪ್ರಜ್ಞೆಯ ಪರಿಪಕ್ವಶಕ್ತಿ. ಅನುಭಾವದ ಅಮೃತಧಾರೆ. ಕ್ರಾಂತಿಯ ಮಿಂಚು. ಅವರದು ಘನಮನ. ದೃಢ ಮನಸ್ಸಿನ ಪಡಿಯಚ್ಚು. 'ದಿಶಾಭೂಲ್' ಆಗಿರುವ ಸಮಾಜಕ್ಕೆ ಹೊಸ ತೇಜಸ್ಸು. ಸತ್ಯಾನುಭವ-ಸತ್ಯಾಭಿವ್ಯಕ್ತಿಗಳ ಸಂಗಮ. ಹೆಚ್ಚೇನು ಅವರು ಬಸವಣ್ಣನ ಉಸಿರು ! ★

ನಗೆಯ ಹೊನಲು

ಓರ್ವ ಅಧ್ಯಾಪಕರು ವಿಭಾಗಕ್ಕೆ ಬಂದು, ಕರೆ ಗಂಟೆ ಒತ್ತಿ ಆಳನ್ನು ಕರೆದು ಕೇಳಿದರು: "ನನ್ನನ್ನು ಕಾಣಲು ಯಾರಾದರೂ ಬಂದಿದ್ದರೆ ?"

"ಹೌದು " "ತರುಣನೋ ತರುಣಿಯೋ "

"ಕೇಳುವುದನ್ನು ಮರೆತೆ, ಅವರ ವೇಷದಿಂದ ತಿಳಿದು ಬರಲಿಲ್ಲ "



ಹಿಂದಿನ ಸಂಚಿಕೆಯವರೆಗೆ

(ಧರ್ಮ ಪ್ರಸಾರ, ವಿದೇಶ ಸಂದರ್ಶನದ ಮಣಿಹ ಹೊತ್ತ ಪೂಜ್ಯ ಮಾತೆಯವರು 1976 ಮೇ 14ರಂದು ತಾಯ್ನಾಡಿನಿಂದ ತೆರಳಿದ್ದರು. ಏಕಾಂಗಿನಿಯಾಗಿ ಅಪರಿಚಿತ ನಾಡಿಗೆ ಹೋದ ಅವರಿಗೆ ಪ್ರಾರಂಭದಲ್ಲಿ ಸ್ವಲ್ಪ ತೊಂದರೆಯಾದರೂ ಸ್ವಧೈರ್ಯದಿಂದ ಪರಿಹರಿಸಿಕೊಂಡು ಮುಂದೆ ಸಾಗಿದರು. ಈ ಲೇಖನ ಮಾಲಿಕೆಯಲ್ಲಿ ತಮ್ಮ ಅನುಭವಗಳನ್ನು ತತ್ತ್ವಜ್ಞಾನದೊಡನೆ ಮೇಳೈಸಿ ವಿವರಿಸುತ್ತಿದ್ದಾರೆ.)

—ಜಗದ್ಗುರು ಮಾತಾಜಿ

ಧಾರಾವಾಹಿ—೧೨

ಸಾಮಾನ್ಯವಾಗಿ ನಮ್ಮ ಜೀವನ ಧ್ಯೇಯ ಲಂಡನ್ನಿನ ಸರ್ಕಲ್ ಲೈನ್ ಭೂಗರ್ಭ ರೇಲ್ವೆಯಂತೆ ಅಥವಾ ದೆಹಲಿಯ ರಿಂಗ್‌ಲೈನಿನಂತೆ. ಇದಕ್ಕೆ ವಿಶಿಷ್ಟ ನಿಲ್ದಾಣ ಇಲ್ಲ ; ಸುತ್ತಿದ್ದೂ ಸುತ್ತಿದ್ದೆ. ಸುತ್ತುವುದೇ ಅದರ ಗುರಿ ! ಅಂದರೇನೆಂದು ನಿಮಗೆ ಅಚ್ಚರಿಯಾದೀತಲ್ಲವೆ ? ಒಗಟಿನಂತೆಯೂ ತೋರಬಹುದು. ಒಬ್ಬ ಗೃಹಸ್ಥ ನೌಕರದಾರನಿಗೆ ಒಂದು ವಿಶಿಷ್ಟ ಯೋಜನೆ, ಗುರಿಯುಂಟು. ತಾನು ನಿವೃತ್ತನಾಗುವದರೊಳಗೆ ಒಂದು ಸ್ವಂತ ಮನೆ, ಗಂಡು ಮಕ್ಕಳಿಗೆ ನೌಕರಿ-ಮದುವೆ, ಹೆಣ್ಣು ಮಕ್ಕಳಿಗೆ ಸೂಕ್ತ ವರನನ್ನು ನೋಡುವುದು. ಅಷ್ಟನ್ನು ಮುಗಿಸಿದಾಗ ಅವನದು ಸಂತೃಪ್ತ, ನಿವೃತ್ತ ಮತ್ತು ನಿರ್ಲಿಪ್ತ ಜೀವನ. ಆದರೆ ಸಾಹಿತಿಗೆ, ಸನ್ಯಾಸಿಗೆ, ಸಮಾಜ ಸುಧಾರಕರಿಗೆ ನಿವೃತ್ತತೆ ಎಂಬುದಿಲ್ಲ, ನಿರ್ಲಿಪ್ತತೆ ಇರಬಹುದು. ನಮ್ಮ ಬದುಕು ಹೀಗೆ. 'ಒಂದು ಬಂಗಲೆ ಕಟ್ಟಿದೆವು, ಆಯಿತು, ಬಾಳ ಗುರಿ ಮುಟ್ಟಿತು' ಎಂಬ ಅಲ್ಪತೃಪ್ತಿಯಿಲ್ಲ. ಮಹತ್ವಾಕಾಂಕ್ಷೆ, ಭೂಮ ಯೋಜನೆ ! ಸಿದ್ಧಿಯಾಗುತ್ತೋ ಬಿಡುತ್ತೋ ಬಲ್ಲವರಾರು, ಸಾಧನೆಯಲ್ಲೇ ಸಂತೃಪ್ತಿ. ಹೋರಾಟದಲ್ಲೇ ಆನಂದ, ಪ್ರಯತ್ನದಲ್ಲೇ ಪರಮ ತಪಸ್ಸು. ರೇಷ್ಮೆಹುಳು ಎಳೆ ಬಿಟ್ಟಷ್ಟು ಸಾಕಿದವರಿಗೆ ಲಾಭ, ಸನ್ಯಾಸಿ ನಿಷ್ಕಾಮಿಯಾಗಿ ದುಡಿದಷ್ಟು ಸಮಾಜಕ್ಕೆ ಶುಭ. ಅದಕ್ಕಾಗಿ ದುಡಿಯಬೇಕು.

ದುಡಿಮೆ ನಿರಂತರವಾಗಿ ಸಾಗಬೇಕಾದರೆ ಏನು ಮಾಡಬೇಕು? ಬೃಹತ್ತಾದ ಗುರಿ ಕಣ್ಣೆದುರಿಗೆ ಇರಿಸಿಕೊಳ್ಳಬೇಕು. ಲಕ್ಷಾಂತರ ರೂಪಾಯಿಗಳ ಯೋಜನೆ ಒಳಗೊಂಡ ಬಸವ ಗಂಗೋತ್ರಿಗಾಗಿ ನಾವು ಶ್ರಮಿಸುತ್ತಿದ್ದೇವಷ್ಟೆ. ಆಗ ಓರ್ವ ಸದ್ಭಕ್ತರು ದರ್ಶನಕ್ಕೆ ಬಂದಾಗ ನುಡಿದರು :

"ನಿಮಗೇಕೆ ಇಷ್ಟು ಶ್ರಮ ; ಏತಕ್ಕೆ, ಯಾರಿಗಾಗಿ ಇದನ್ನು ಮಾಡುತ್ತೀರಿ....?"
"ಶರಣರೇ, ನಿಮಗೆ ಎಷ್ಟು ಜನ ಮಕ್ಕಳು, ಮೊಮ್ಮಕ್ಕಳು?" ನಾನು ಕೇಳಿದೆ.
"ಒಬ್ಬನೇ ಮಗ ; ಒಂದು ಮೊಮ್ಮಗ, ಒಂದು ಮೊಮ್ಮಗಳು...."

"ನಿಮ್ಮ ಆಸ್ತಿ ಎಷ್ಟಿದೆ ? ..."

"ಕೇವಲ ಎರಡು-ಮೂರು ಲಕ್ಷವಿರಬಹುದು..."

"ಒಬ್ಬ ಮಗ, ಒಂದು ಮೊಮ್ಮಗ, ಓರ್ವಳು ಮೊಮ್ಮಗಳಿಗಾಗಿ 3 ಲಕ್ಷದ ಆಸ್ತಿ ನೀವು ಮಾಡಿದ್ದೀರಿ. ಸಹಸ್ರಾರು ಸದ್ಭಕ್ತರನ್ನು ಮಕ್ಕಳೆಂದು, ಕೋಟಿಕೋಟಿ ಸಮಾಜ ಬಂಧುಗಳನ್ನು ನನ್ನವರೆಂದು ತಿಳಿದ ನಾವು ಸಮಾಜಕ್ಕಾಗಿ ಎಷ್ಟು ಮಾಡಬೇಕಾದೀತು ವಿಚಾರಿಸಿ. ನಮ್ಮ ಆಸೆ-ಆಕಾಂಕ್ಷೆ ಕೇವಲ ಒಂದು ಮನೆತನ, ಕುಲ, ಜಾತಿಗೆ ಸೀಮಿತವಲ್ಲ, ಸಮಸ್ತ ಜನಾಂಗಕ್ಕೆ...."

ಒಪ್ಪಿಕೊಂಡರು ಅವರು. ಗುರಿಯನ್ನು ಸರಿಯಾಗಿ ಇಟ್ಟುಕೊಂಡರೆ ದಾರಿಯ ನಡಿಗೆಯಲ್ಲಿ ತೀವ್ರತೆ ಇರುತ್ತೆ. ಅಂತೆಯೇ ನಿಶೆ ಹೇಳುತ್ತಾನೆ : "He who knows a why of living surmounts almost how of it. "ಆಯಿತು, ಇನ್ನು ಮುಂದೇಕೆ ಪ್ರಯತ್ನ?" ಎಂದುಕೊಂಡರೆ ಆಲಸ್ಯ, ಜಡತ್ವ ಮುತ್ತಿಕೊಳ್ಳುತ್ತವೆ. ಈ ಉದ್ದೇಶದಿಂದಲೇ ನಾನು ವಿದ್ಯಾಭ್ಯಾಸ ಮುಂದುವರಿಸಬಯಸಿದ್ದು. ಪದವಿಯನ್ನು ಪಡೆದು, ಹೆಸರಿನ ಹಿಂದೆ ಮುಂದೆ ಸೇರಿಸಿಕೊಳ್ಳಬೇಕೆಂಬ ಆಕಾಂಕ್ಷೆಗಿಂತಲೂ, ಉತ್ತಮ ಪ್ರಬಂಧವೊಂದನ್ನು ಸೈದ್ಧಾಂತಿಕ ಸಾಹಿತ್ಯ ಕ್ಷೇತ್ರಕ್ಕೆ ಕೊಡುಗೆಯಾಗಿ ನೀಡಬೇಕೆಂಬ ಹಂಬಲ ಹೊಂದಿದ್ದೆ. ಹೇಗೆ ಸಿಂದಾಬಾದ್‌ನಂತಹ ನಾವಿಕರು ಹೊಸ ಹೊಸ ನಾಡುಗಳ ಸಂಶೋಧನೆಗೆ ಯತ್ನಿಸುವರೋ, ಹೇಗೆ ಖಗೋಲಶಾಸ್ತ್ರಜ್ಞರು, ಬಾಹ್ಯಾಕಾಶ ವಿಜ್ಞಾನಿಗಳು ನೂತನ ಗ್ರಹಗಳ ಸಂಶೋಧನೆಯಲ್ಲಿ ತಲ್ಲೀನರಾಗಿರುವರೋ ಹಾಗೆ ವಚನ ಶಾಸ್ತ್ರ ವಿಶ್ವದಲ್ಲಿನ ಪ್ರಗತಿಪರ ತತ್ತ್ವಗಳ ನಾಡುಗಳನ್ನು ಸಂಶೋಧನೆಯ ನಾವೆ ಹಿಡಿದು ಅರಸ ಬಯಸಿ, ಬಸವ ತತ್ತ್ವಜ್ಞಾನದ ವೈಚಾರಿಕ ಮೌಲ್ಯಗಳೆಂಬ ಗ್ರಹಗಳ ಸಂಶೋಧನೆಗೆ ಚಿಕಿತ್ಸಕ ಬುದ್ಧಿಯೆಂಬ ಬಾಹ್ಯಾಕಾಶ ನೌಕೆಯನ್ನೇರಿ ಹೊರಡಲು ಉತ್ಸುಕಳಾಗಿದ್ದೆ.

ಹತ್ತಾರು ಕಲ್ಪನೆಗಳ-ಕನಸುಗಳ-ಆಸೆಗಳ-ಆದರ್ಶಗಳ ರೆಕ್ಕೆಪುಕ್ಕಗಳನ್ನು ಕಟ್ಟಿಕೊಂಡು ಹಾರಾಡಿದ ಮನಸ್ಸು ತಾಯ್ನಾಡಿಗೆ ಪತ್ರ ಬರೆಯಲು ಪ್ರೇರೇಪಿಸಿತು. ಪೂಜ್ಯ ಸದ್ಗುರುಗಳ ಸನ್ನಿಧಿಗೆ ಅಂತರಂಗದ ಹಂಬಲ ತೋಡಿಕೊಂಡು ಪತ್ರ ಬರೆದೆ. ಹಾಗೆಯೇ ಕೆಲವು ಹಿತೈಷಿಗಳಿಗೂ, ಸದ್ಭಕ್ತರಿಗೂ ಬರೆದುದಾಯಿತು. ಸೊನ್ನಲಾಪುರದ ಸದ್ಭಕ್ತರು, ಬಸವ ಸಂಪ್ರದಾಯದ ಮಹಾದಾನಿಗಳೂ, ನಮ್ಮ ಸಂಸ್ಥೆಯ ಅಭಿಮಾನಿಗಳೂ ಆದ ಶರಣ ನಾಗಪ್ಪಣ್ಣ ಕಾಡಾದಿ ಅವರಿಗೆ ಬರೆದೆ. ಅವರು ಮರಳಿ ಹೀಗೆ ಪತ್ರ ಬರೆದರು ಕಳಕಳಿಯ ಭಾವನೆಯೊಡನೆ : "ತಾವು ಅತ್ಯಂತ ಪ್ರಗತಿಪರ ವಿಚಾರಿಗಳಾಗಿ ತತ್ತ್ವನಿಷ್ಠರಾಗಿ ಧರ್ಮ ಪ್ರಸಾರದಲ್ಲಿ ತೊಡಗಿದ್ದೀರಿ. ಸಮಾಜದ ಭರವಸೆಯ ಆಶಾಕೇಂದ್ರವಾಗಿದ್ದೀರಿ. ನಿಮ್ಮಂತಹವರು ಮೂರೂವರೆ ವರುಷಗಳ ಕಾಲ ವಿದೇಶದಲ್ಲಿದ್ದರೆ ನಮ್ಮ ಜನತೆಗೆ ಅಪಾರ ಹಾನಿ. ಎರಡನೆಯದಾಗಿ ನಿಮ್ಮ ಪ್ರತಿಭೆ ಕಂಡು ಆ ಜನರು ನಿಮ್ಮನ್ನು ಬಿಟ್ಟು ಕೊಡದಿದ್ದರೆ ನಮ್ಮ ನಾಡಿಗೆ ಶಾಶ್ವತ ಹಾನಿ. ಅಲ್ಲಿಯ ಬುದ್ಧಿವಂತ, ಮುಂದುವರಿದ ಜನರಿಗೆ ಧರ್ಮಜ್ಞಾನದ ದಿವ್ಯೌಷಧಿ ಕೊಡುವುದಕ್ಕಿಂತ, ನಮ್ಮ ಜನರಿಗೆ, ರೋಗಗ್ರಸ್ತ ಮನಸ್ಸಿಗೆ ಕೊಡುವುದೇ ಅವಶ್ಯ. ಆದ್ದರಿಂದ ಪ್ರವಾಸದ ಉದ್ದೇಶ ಹೊತ್ತು ಹೋಗಿರುವ ತಾವು ಪ್ರಚಾರ ಕಾಯಕವನ್ನು ಯಶಸ್ವಿಯಾಗಿ ಮುಗಿಸಿಕೊಂಡು ದಯಮಾಡಿ ಬೇಗನೇ ಬರಬೇಕು.

ಬೇರೆ ಯಾವುದೇ ಉದ್ದೇಶಕ್ಕಾದರೂ ನಾವು ಆರ್ಥಿಕ ನೆರವು ಕೊಡಬಲ್ಲೆವು. ದಯಮಾಡಿ ಅಲ್ಲಿ ದೀರ್ಘಕಾಲ ಇರಬೇಡಿ" ....ನಾಗಪ್ಪಣ್ಣನವರ ಕಳಕಳಿ, ಧರ್ಮಾಭಿಮಾನ ಕಂಡು ಅಚ್ಚರಿಯಾಯಿತು. ಪತ್ರ ಓದಿ ಸಂತಸವೇ ಆಯಿತು. ಪೂಜ್ಯ ಗುರೂಜಿಯವರಿಂದಲೂ ಪತ್ರಕ್ಕೆ ಉತ್ತರ ಬಂದಿತು. ಹೇಗೆ ಇಂದು ಮೆಡಿಕಲ್ ವಿದ್ಯೆ ಶ್ರೀಮಂತರ ವಿದ್ಯೆಯಾಗಿದೆಯೋ, ಬಡವನಾದ ತಂದೆ ಭರಿಸಲಾರನೋ ಹಾಗೆಯೇ ತಾವೂ ಸಹ ಭರಿಸಲಾರರು ಆ ವೆಚ್ಚವನ್ನು ಎಂಬಭಿಪ್ರಾಯ ತೋರಿದ್ದರು. 'ವಿಶ್ವ ಕಲ್ಯಾಣ ಮಿಷನ್ ವ್ಯಾಪಕವಾಗಿ ಬೆಳೆದಿದೆ; ಅದರ ನೆರಳಿನಲ್ಲಿರುವ ಅನೇಕರ ಸಂರಕ್ಷಣೆಯನ್ನು ಮಾಡಲು ಪ್ರವಚನ ಕಾಯಕ ಒಂದೇ ಸಾಧನೆ. 'ಬೇರಾವ ಉತ್ಪನ್ನವಿಲ್ಲ ; ಅದರ ಬಲದ ಮೇಲೆಯೇ ಇಲ್ಲಿಯ ಜವಾಬ್ದಾರಿ ನೋಡಿಕೊಂಡು, ವಿದೇಶ ಅಭ್ಯಾಸಕ್ಕೂ ಓದಲು ಸಹಾಯಗೈವುದು ದುಃಸಾಧ್ಯ' ಎಂದು ಸ್ವಾಮೀಜಿ ಪತ್ರ ಬರೆದರು, ಬಡ ತಂದೆಯೋರ್ವನಿಗೆ ಪ್ರತಿಭಾವಂತನಾದ ಮಗನಿದ್ದರೆ, ಅವನನ್ನು ಓದಿಸಲಾರದೇ ವ್ಯಥೆ ಪಡುವ ಮನೋಭಾವ ಆ ಪತ್ರದಲ್ಲಿತ್ತು ; ನನ್ನ ಮನಸ್ಸಿಗೂ ತಟ್ಟಿತು. 'ಇದೊಂದೇ ಮಹಾಸಾಧನೆಯಲ್ಲ, ಅಸಾಧ್ಯವಾದುದಕ್ಕೆ ಕೈಚಾಚಿ ಕೈನೋವು ಮಾಡಿಕೊಳ್ಳೋದು ಬೇಡ' ಎಂದುಕೊಂಡೆ

ಸ್ವಂತ ಪರಿಶ್ರಮದ ಮೇಲೆ ಏಕೆ ಯತ್ನಿಸಬಾರದು ? ಹೇಗೆ ? ಬೇಕಾದಷ್ಟು ಸ್ಕಾಲರ್‌ಷಿಪ್ಸ್ ಇವೆಯಷ್ಟೇ ಎಂದುಕೊಂಡು ಅದರ ಅನ್ವೇಷಣೆಗೆ ತೊಡಗಿದೆ.

ಮೊದಲನೆದಾಗಿ ಅಲ್ಲಿಯ ಸ್ಕಾಲರ್ ಶಿಪ್ಸ್ ತುಂಬಾ ಕಡಿಮೆಯಾಗಿದ್ದವು. ಬ್ರಿಟನ್ ಆರ್ಥಿಕ ಸಂಕಷ್ಟಕ್ಕೆ ಒಳಗಾಗಿ, ಅಂತರರಾಷ್ಟ್ರೀಯ ಹಣಕಾಸು ನಿಧಿಗಾಗಿ ಕೈಚಾಚಿದ್ದ ವರ್ಷ. ಇರುವ ವಿದ್ಯಾರ್ಥಿ ವೇತನ ತಮ್ಮವರಿಗೇ (ಬಿಳಿಯರಿಗೇ) ಹೆಚ್ಚು ಕೊಡಬೇಕೆಂಬ ಶಾಸನ. ಬ್ರಿಟಿಷ್ ವಿದ್ಯಾರ್ಥಿಗೆ ಶಿಕ್ಷಣವು ಎಷ್ಟು ಸುಲಭವೋ, ಮಿತ ಖರ್ಚಿನದೋ ವಿದೇಶೀ ವಿದ್ಯಾರ್ಥಿಗೆ ಅಷ್ಟೇ ತುಟ್ಟಿ. ನಿಜಕ್ಕೂ ಹೇಳಬೇಕೆಂದರೆ ಅದೊಂದು ವ್ಯಾಪಾರವಾಗಿ ಪರಿಣಮಿಸಿದೆ ಆ ನಾಡಿನಲ್ಲಿ ನೀರಿಗಿಂತಲೂ. ಸೋವಿಯಾಗಿರುವ ಪೆಟ್ರೋಲನ್ನು ಯಥೇಚ್ಛವಾಗಿ ಹೊಂದಿ, ಅದನ್ನೇ ವಿಪರೀತ ಬೆಲೆಗೆ ಮಾರಿ ಚಿನ್ನದ ಗಟ್ಟಿಗಳನ್ನೇ ಒಟ್ಟುಗೂಡಿಸಿಕೊಂಡ ಶ್ರೀಮಂತ ತೈಲರಾಷ್ಟ್ರಗಳು ವಿಶ್ವವಿದ್ಯಾಲಯಗಳ ಆದಾಯದ ಮೂಲ. ಹೀಗಾಗಿ ಆ ವಿದ್ಯಾರ್ಥಿಗಳು ವಿಪರೀತ ಶುಲ್ಕದ ವೆಚ್ಚವನ್ನು ನಿರಾಯಾಸವಾಗಿ ಭರಿಸಬಲ್ಲರಾದ ಕಾರಣ, ಬ್ರಿಟಿಷ್ ಸರ್ಕಾರ ಸ್ವದೇಶೀ ವಿದ್ಯಾರ್ಥಿಗಳಿಗೆ ಮತ್ತು ವಿದೇಶೀ ವಿದ್ಯಾರ್ಥಿಗಳಿಗೆ ಬೇರೆ ಬೇರೆ ಶುಲ್ಕವನ್ನು ವಿಧಿಸಿದೆ. ಆನೆಯ ಒಂದು ಹಿಡಿ ಹುಲ್ಲು ಆಡಿಗೆ ಹೊರೆಯಾಗುವಂತೆ ಸ್ವಂತ ಪರಿಶ್ರಮದ ಮೇಲೆ ಕಲಿಯಬೇಕೆಂಬ ಭಾರತೀಯ ವಿದ್ಯಾರ್ಥಿಗಳಿಗೆ ಬಹಳ ತುಟ್ಟಿಯಾಗುತ್ತದೆ ಬ್ರಿಟಿಷ್ ನಾಡಿನ ಸ್ನಾತಕೋತ್ತರ ಶಿಕ್ಷಣ. ಆಕ್ಸ್‌ಫರ್ಡಿನ ವಿದ್ಯಾರ್ಥಿ ವೇತನ ಸಿಕ್ಕುವುದು ಕಷ್ಟಕರ, ಬಹಳ ಸ್ವಲ್ಪ ಸಂಖ್ಯೆಯಲ್ಲಿರುವದರಿಂದ. ಕಾಮನ್‌ವೆಲ್ತ್ ಸ್ಕಾಲರ್ ಶಿಪ್ ಮತ್ತು ಭಾರತಾಂಗ್ಲ ದೇಶಗಳ ಮಧ್ಯದ ಸ್ಕಾಲರ್‌ಶಿಪ್ ಕೆಲವಿವೆ. ಆದರೆ ಅವನ್ನು ಪಡೆಯಲು ಭಾರತದಲ್ಲಿದ್ದೇ ಅರ್ಜಿ ಸಲ್ಲಿಸಬೇಕು. ಇಲ್ಲಿಯೇ ಸಂದರ್ಶನದಲ್ಲಿ ಭಾಗಿಯಾಗಬೇಕು. ಅಷ್ಟರಲ್ಲಿ ಒಂದು ವಿಶ್ವವಿದ್ಯಾಲಯದ ಮುಖೇನ ಪ್ರವೇಶ ಪತ್ರ ಪಡೆದಿರಬೇಕು. ಅದನ್ನು ತೋರಿಸಿ, ವಿದ್ಯಾರ್ಥಿ ವೇತನ ಪಡೆದು ಕೇಂದ್ರ ಸರ್ಕಾರದ ಒಪ್ಪಿಗೆ ಪಡೆದು ನಂತರ ಪ್ರವಾಸ ಕೈಗೊಳ್ಳಬೇಕು. ಪ್ರವಾಸಿಕರಾಗಿ ಹೋಗಿ, ಪ್ರವೇಶ ಪಡೆದು ನಂತರ ಇಲ್ಲಿಂದ ವಿದ್ಯಾರ್ಥಿ ವೇತನ ಪಡೆಯಲು ಬರದು.

ಅದಕ್ಕಾಗಿ ನಂತರ ಡಾ|| ರಿಚರ್ಡ್ ಗಾಂಬ್ರಿಚರು ಹೇಳಿದರು, "ನಿಮ್ಮ ಪರಿಚಯ, ಸಂದರ್ಶನ ಮತ್ತು ಗ್ರಂಥಗಳ ಪರಿಚಯ ಚೆನ್ನಾಗಿದೆ. ಆದ್ದರಿಂದ ನಿಮಗೆ ಯಾವಾಗಲೇ ಆರ್ಥಿಕ ಅನುಕೂಲತೆ ಒದಗಲಿ. ಆಗ ಪಯಮಾಡಿ ಬನ್ನಿ, ನಿಮ್ಮ ಬರವನ್ನು ಅತ್ಯಂತ ಆನಂದದಿಂದ ನಿರೀಕ್ಷಿಸುತ್ತೇವೆ." ಅವರ ಗುಣಗ್ರಾಹಕತ್ವ, ಕಳಕಳಿ, ಸೌಜನ್ಯ ಕಂಡು ಮೂಕ ವಿಸ್ಮಿತನಾದೆ. ನಮ್ಮಲ್ಲಿ ಯಾರಿಗೆ ಏನೇ ಪುರಸ್ಕಾರ ಸಿಗಬೇಕಾದರೆ ಅವನಿಗೆ ಇರಬೇಕಾದ ಅರ್ಹತೆಗಳು ಜಾತಿ, ಜೀ ಜೀ ಎಂದು ಸಲಾಮು ಹೊಡೆಯುವ ಸ್ವಭಾವ, ಗೆದ್ದೆತ್ತಿನ ಬಾಲ ಹಿಡಿಯುವ ಪ್ರವೃತ್ತಿ, ಮುಖಸ್ತುತಿ, ಸಮಯಬಂದಂತೆ ಬದಲಾಯಿಸುವ ಸಮಯಸಾಧಕತನ.

ಇನ್ನು ಸ್ವಪ್ರಯತ್ನದಿಂದ ಮುಂದುವರಿದರೆ ಹೇಗೆ ? ಅಂದರೆ ಪ್ರವಚನವನ್ನು ಮಾಡಿ, ಜನರಿತ್ತ ಕಾಣಿಕೆಯನ್ನು ಪಡೆದುಕೊಂಡು ಅಭ್ಯಸಿಸಿದರೆ? ಈ ಆಲೋಚನೆ

ಧೈರ್ಯವನ್ನು ನೀಡಿತು. ಏಕೆಂದರೆ ಅಲ್ಲಿಯ ಜನ ಅಲ್ಲಿಯ ಹಣದ ರೂಪದಲ್ಲಿ ಕಾಣಿಕೆ ಕೊಟ್ಟರೆ ಅಧ್ಯಯನ ಅಸಾಧ್ಯವಾಗದು. ಈ ವಿಚಾರವನ್ನು ಅಂತರಂಗದಲ್ಲಿ ಚಿಂತಿಸಿ ಗಾಂಬ್ರಿಚರೊಡನೆ ಮಾತನಾಡಿದಾಗ ಇದೂ ಅಸಂಭವ ಎನಿಸಿತು. ಏಕೆಂದರೆ ಪಿಹೆಚ್.ಡಿ. ಅಭ್ಯಾಸಿಸುವ ವಿದ್ಯಾರ್ಥಿ ವಾರಕ್ಕೆ ಐದು ದಿವಸ ಕಡ್ಡಾಯವಾಗಿ ವಿದ್ಯಾಲಯದಲ್ಲಿ ಇರಲೇ ಬೇಕು. ಹೆಜ್ಜೆ ಹೆಜ್ಜೆಗೂ ಶಿಸ್ತಿನ ಕಟ್ಟುನಿಟ್ಟು. ಇಷ್ಟೇ ಅಲ್ಲ, ವಿಶ್ವವಿದ್ಯಾಲಯದ ಹಾಸ್ಟೆಲಿನಲ್ಲೇ ಇರಬೇಕು. ಸಾಮೂಹಿಕ ಭೋಜನಾಲಯ (Common Mess) ದಲ್ಲಿ ಮಧ್ಯಾಹ್ನ ಉಣ್ಣಬೇಕು. ವಿದ್ಯಾರ್ಥಿ ತನ್ನ ಕೋಣೆಯಲ್ಲಿ ಹಾಲಿನ ಹೊರತು ಮತ್ತೇನನ್ನೂ ಕಾಯಿಸಕೂಡದು. ಸ್ವಂತ ಅಡಿಗೆಗೆ ಅವಕಾಶವಿಲ್ಲ. ಮಾರ್ಗದರ್ಶಕ (Guide)ರಿಗೆ ಹೇಳಿದೊರೆತಾಗ ಚರ್ಚೆ ಬೆಸವಣಿಗೆ. ಈ ಎಲ್ಲ ಕಾರಣಗಳಿಂದ ಕ್ಯಾಂಪಸ್ ಬಿಟ್ಟು ಹೊರಗಿರಕೂಡದು. ಮತ್ತು ಲಂಡನ್ನಿನಲ್ಲಿ ಇದ್ದು ದಿನನಿತ್ಯ ಓಡಾಡುವುದೂ ಸಾಧ್ಯವಿಲ್ಲ. ಲಂಡನ್ನಿನಲ್ಲಿ ಸ್ವದೇಶಿ ಮಾತ್ರ ಪ್ರವಚನ ಮಾಡಿ ಕಾಣಿಕೆ ಪಡೆಯುವ ಅವಕಾಶವಿತ್ತೇ ವಿನಾ ಆಕ್ಸ್‌ಫರ್ಡಿನಲ್ಲಿ ಅದು ಸಾಧ್ಯವಿರಲಿಲ್ಲ. ಇನ್ನೂ ಸಮಸ್ಯೆ ಜಾಸ್ತಿಯಾದವು. ಏಕೆಂದರೆ ಸಾಮೂಹಿಕ ಭೋಜನಾಲಯದಲ್ಲಿ ಊಟ ಮಾಡುವುದು ನನಗೆ ಅಸಾಧ್ಯ, ಅಸಹನೀಯ. ಡಾ|| ರಿಚರ್ಡರು ಕ್ಯಾಂಪಸ್ ತೋರಿಸಲು ಒಯ್ದು ಸುಪ್ರಸಿದ್ಧ ಉಲ್‌ಫ್‌ಸ್ಟನ್ ಕಾಲೇಜು ಮೆಸ್ಸಿಗೆ ಕರೆದೊಯ್ದರು. ನಾನು ಬರುವದರಿಂದ ವಿಶೇಷ (?) ಊಟಕ್ಕೆ ಆರ್ಡರ್ ಮಾಡಿದ್ದರಂತೆ ಅತಿಥಿಗಳೆಂದು. "ಹೊರಗಡೆ ತಿನ್ನುವ ಪದ್ಧತಿ ನನಗಿಲ್ಲ......" ಎಂದು ನಯವಾಗಿ ನಿರಾಕರಿಸಿದೆ. ಒಂದು ಲೋಟ ಹಾಲನ್ನು ಡಬ್ಬಿಯಲ್ಲಿ ಸೀಲ್ ಮಾಡಿದ್ದು ತರಿಸಿ ಕೊಟ್ಟರು. ಅವರು ಮತ್ತು ಇನ್ನೋರ್ವ ಅಧ್ಯಾಪಕರು ಊಟವನ್ನಾರಂಭಿಸಿದರು. ಆಗ ನಾನು ಚರ್ಚಿಸಲು ತೊಡಗಿದೆ. ಅವರ ಊಟ ಮುಗಿವಲ್ಲಿ ಸಾಕೋ ಸಾಕಾಗಿತ್ತು. ಆ ಮೆಸ್ಸಿನಲ್ಲೆಲ್ಲ ತುಂಬಿದ್ದ ಅಡಿಗೆ ವಾಸನೆ ವಾಕರಿಕೆಯನ್ನುಂಟುಮಾಡಿ, ತಲೆಯನ್ನೇ ತಿರುಗಿಸುತ್ತಿತ್ತು.

ಊಟ ಮಾಡಬಯಸುವವನು ಒಂದು ಸ್ಟ್ಯಾಂಡಿನ ಮೇಲೆ ತೊಳೆದು ಪೇರಿಸಿದ್ದ ಟ್ರೇಗಳನ್ನು ತೆಗೆದುಕೊಂಡು ಕ್ಯೂನಲ್ಲಿ ನಿಲ್ಲಬೇಕು. ಅಡಿಗೆ ನೀಡುವವರು ಅಡಿಗೆ ಕಪಾಟಿನ ಆಚೆ ನಿಂತಿರುವರು. ಯಾರಿಗೆ ಏನು ಬೇಕು ಸ್ವಂತ ಆಯ್ಕೆಮಾಡಿಕೊಂಡು ಕೇಳಿದರೆ, ಪಾರದರ್ಶಕ ಗಾಜಿನ ಡಬ್ಬಿಗಳಲ್ಲಿ ಸುಂದರವಾಗಿ ಜೋಡಿಸಿಟ್ಟಿರುವ [illegible] ಪ್ಲೇಟಿಗೆ ಹೊರಗೆ ಕೊಡುವರು. ವಿಶೇಷ ಆರ್ಡರ್ ವಿಶೇಷ ಅತಿಥಿಗಳಿಗಾಗಿ ಕೊಟ್ಟಿದ್ದರೆ ಆ ಐಟಮ್ಮನ್ನು ಸ್ಪೆಷಲ್ ವಿಭಾಗದಲ್ಲಿ ಕೇಳುವರು. ನಾನು ಅಂದು ವಿಶೇಷ ಅತಿಥಿಯಷ್ಟೇ? ಪಾಪ! ನಾನು ಏನೂ ತಿನ್ನುವದಿಲ್ಲವೆಂದಾಗ ನಿರಾಶರಾದ ಗಾಂಬ್ರಿಚರು ತಮ್ಮಿಬ್ಬರಿಗಾಗಿ ಎರಡು ಪ್ಲೇಟು ಶೇವಿಗೆಯಂತಹುದು, ಮತ್ತೇನೇನೋ ತರಿಸಿಕೊಂಡರು.

ಶಾಕಾಹಾರಿಗಳಾದವರು ತಮ್ಮಿಚ್ಛೆಯಂತೆ ಬೇಯಿಸಿದ ಬಟಾಣಿ, ಟೊಮ್ಯಾಟೋ ಪಚಡಿ, ಹಣ್ಣುಗಳ ತುಂಡು, ಹಣ್ಣು ಸಹಿತ ಹೆಪ್ಪುಗೊಂಡ ಮೊಸರು (Fruit-yogurt), ಬ್ರೆಡ್ ತುಂಡು ಯಾವುದನ್ನಾದರೂ ಆರಿಸಬಹುದು. ಆದರೆ ನನ್ನಂತಹವರಿಗೆ ಏನು ಮುಟ್ಟಲೂ ಭಯ. ಸಿನೆಮಾಗಳಲ್ಲಿ ಮಾಯಗಾರನ ಮಂದಿರ ಹೊಕ್ಕ ಮುಗ್ಧನಿಗೆ 'ಏನು ಮುಟ್ಟಿದರೆ ಹೇಗೋ, ಯಾವುದು ಹಿಡಿಯುತ್ತೋ' ಎಂಬ ಭಯವಿರುವಂತೆ, ಡಾ॥ ರಿಚರ್ಡ್‌ರು 'ಇದು ಶುದ್ಧ ಶಾಕಾಹಾರ' ಎಂದು ಶಿಫಾರಸು ಮಾಡಿದರೂ ಕೈಯೆತ್ತಿ ಮುಟ್ಟುವುದಿರಲಿ, ಕಣ್ಣೆತ್ತಿ ನೋಡಲೂ ಭಯ. ಎಲ್ಲ ವಸ್ತುಗಳನ್ನೂ ಪಾರದರ್ಶಕ ಗಾಜಿನ ಡಬ್ಬಿಗಳಲ್ಲಿ ಸುಂದರವಾಗಿ ಜೋಡಿಸಿದ್ದರೂ ವಿವಿಧವಾದ ಮಾಂಸದ ಅಡಿಗೆಗಳನ್ನು ನೋಡಲು ಭಯಾನಕ ಹಿಂಸೆಯಾಗಿ, ಕರುಳು ಕಿವುಚುತ್ತಿತ್ತು. ಬೇಡವೆಂದರೂ ಕಣ್ಣಿಗೆ ಬೀಳುತ್ತಿದ್ದವು ನಿಸ್ಸಹಾಯಕ, ನಿರ್ಜೀವವಾಗಿ ಮಾನವ ಹೊಟ್ಟೆಯೆಂಬ ಗೋರಿಯನ್ನು ಹೊಗಲು ಸಿದ್ಧವಾಗಿದ್ದ ಹುರಿದ ಮೀನು, ಬೆಂದ ಕೋಳಿಮರಿಗಳು, ಪ್ರಾನ್‌ಗಳು (ಒಂದು ಪಲ್ಲವಂತ ಸಮುದ್ರಪ್ರಾಣಿ), ಏಡಿಗಳು, ಇನ್ನೂ ಏನೇನೋ ವಿವಿಧ ಪ್ರಾಣಿಗಳ ಅವಯುವಗಳು. ಸಸ್ಯಾಹಾರದ ಪಡಿಯಚ್ಚಿನಲ್ಲೇ ಪಕ್ವಗೊಂಡ. ಅಹಿಂಸೆಯ ಮಂತ್ರವನ್ನೇ ಹಗಲಿರುಳು ಪಠಿಸುವ ನಮಗೆ ಆ ವಸ್ತುಗಳು ಭಯಾನಕವಾಗಿ ತೋರುತ್ತಿದ್ದವು. [ಕೆಲವು ವರ್ಷಗಳ ಹಿಂದೊಮ್ಮೆ ವಿದೇಶ ಪ್ರವಾಸ ಕುರಿತು ಶ್ರೀಮತಿ ಸರೋಜಿನಿಮಹಿಷಿಯವರೊಡನೆ ಮಾತನಾಡಿದಾಗ ಅವರು ಹೇಳಿದ್ದರು, 'ಎಲ್ಲ ಸರಿ, ಪಾರದರ್ಶಕ ಗಾಜುಗಳ ಹಿಂದೆ ತೂಗು ಹಾಕಿರುವ ಆ ಪ್ರಾಣಿಗಳನ್ನು ರಸ್ತೆ ಬದಿಯಲ್ಲಿ ಸಾಗುವಾಗಲೇ ಕಾಣುವಾಗ ಎದೆ ಝಲ್ಲೆನ್ನುತ್ತೆ, ಹೊಟ್ಟೆಯಲ್ಲಿ ವೇದನೆಯಾಗುತ್ತೆ ಎಂದಿದ್ದರು. ಆ ಅನುಭವ ನನಗೂ ಆಯಿತು.] ನಂತರ ಒಮ್ಮೆ ದೊಡ್ಡ ಸೆಮಿನಾರ್ ಇದ್ದಾಗ ನಾನೂ ಮುಖ್ಯ ಅತಿಥಿಯಾಗಿ ಲಂಡನ್ ವಿಶ್ವವಿದ್ಯಾಲಯದ ಓರಿಯಂಟಲ್ ವಿಭಾಗಕ್ಕೆ ಹೋಗಿದ್ದೆ. ಮೂರು ದಿವಸಗಳ ಶೈಕ್ಷಣಿಕ ಚಲನಚಿತ್ರ ಪ್ರದರ್ಶನವಿತ್ತು. ಅದರಲ್ಲಿ "ದಕ್ಷಿಣ ಆಫ್ರಿಕಾದ ಗುಡ್ಡಗಾಡು ಆದಿವಾಸಿ ಜನರ ಸಾಮಾಜಿಕ-ಧಾರ್ಮಿಕಾಚರಣೆ" ಎಂಬ ಸಾಕ್ಷ್ಯಚಿತ್ರ ತೋರಿಸಿದರು. ಕಾಡಿನಲ್ಲಿರುವ ನೀಗ್ರೋ ಜನ ತಮ್ಮ ಗುಂಪಿಗೆ (Tribe) ತರುಣರನ್ನು ಸೇರಿಸಿಕೊಳ್ಳುವ ದೀಕ್ಷಾ ವಿಧಾನದಂದು ಆ ತರುಣರು ಪೌರುಷದ ಸಂಕೇತವಾಗಿ ಕಾಡುಪಶುಗಳನ್ನು, ಕಾಡುಕೋಣಗಳನ್ನು ಕೈಯಲ್ಲೇ ಹಿಡಿದು ಕೆಡವಿ, ಗುದ್ದಿ ಕೊಂದು, ಗಂಟಲು ನಾಳಕ್ಕೆ ಬಾಯಿಹಾಕಿ ಬಿಸಿ ರಕ್ತ ಹೀರಿ ಶಭಾಶ್‌ಗಿರಿ ಪಡೆದುಕೊಂಡು ಜಯಘೋಷ ಮಾಡುವ ಕ್ರೂರಾಚರಣೆ ನೋಡಿ ತಲ್ಲಣಿಸಿಬಿಟ್ಟೆ. ವಿವರವಾಗಿ ಆ ಚಿತ್ರ ನೋಡಲಾಗಲಿಲ್ಲ. ಮನದಲ್ಲೇ ಪ್ರಾರ್ಥಿಸಿದೆ : "ದೇವಾ, ನಿನಗೆ ವಂದನೆ. ಇಂಥಾ ಯಾವುದಾದರೊಂದು ದೇಶದಲ್ಲಿ ಹುಟ್ಟಿಸದೆ, ಪವಿತ್ರವಾದ ಶಿವಭೂಮಿ ಭಾರತದಲ್ಲಿ, ಶ್ರೇಷ್ಠವಾದ ಹಿಂದೂಸಾಂಸ್ಕೃತಿಕ ಪರಂಪರೆಯಲ್ಲಿ (Cultural Heritage), ಪ್ರಗತಿಪರ ಬಸವಧರ್ಮದಲ್ಲಿ ವಿಶ್ವಗುರು ಬಸವಣ್ಣನ ತತ್ತ್ವಾನುಯಾಯಿಯಾಗಿ ಹುಟ್ಟಿಸಿದ್ದಕ್ಕೆ ಅನಂತ ಧನ್ಯವಾದ.

"ಅರಸರ ಮನೆಯಲ್ಲಿ ಅರಸಿಯಾಗಿಪ್ಪುದಕ್ಕಿಂತ
ಭಕ್ತರ ಮನೆಯಲ್ಲಿ ತೊತ್ತಾಗಿಪ್ಪುದು ಕರಲೇಸಯ್ಯ" ಎಂದು ಬಸವಣ್ಣನವರು ಹೇಳುವಂತೆ,

'ಆ ಎಲ್ಲ ನಾಡುಗಳಲ್ಲಿ ಸಾಮ್ರಾಜ್ಞಿಯಾಗುವುದಕ್ಕಿಂತ
ಭಾರತ ಭೂಮಿಯಲ್ಲಿ ಗಿಡಮರವಾಗಿರುವುದು ಕರಲೇಸು' ಎನ್ನಿಸಿತು.

ಏನೇ ಆದರೂ ನಮ್ಮದು ಸಾತ್ವಿಕ, ಸುಂದರ ಸಂಸ್ಕೃತಿ. (ಒಪ್ಪದ ಅಜ್ಞಾನಿಗಳ ಮಾತು ಅತ್ತಲಿರಲಿ. ಓಡೆತ್ತ ಬಲ್ಲುದು ಅವಲಕ್ಕಿ ಸವಿಯ ; ಕೋಡಗ ಬಲ್ಲುದೇ ಸೆಳೆಮಂಚದ ಸುಖವ ?) ಸ್ವತಂತ್ರವಾಗಿ ಇರಲಾದರೂ ಅವಕಾಶವಿದ್ದಿದ್ದರೆ, ಈ ಭಯಾನಕ ಫೋರ್ಕ್, ಚಾಕು, ಕತ್ತರಿಗಳ ಕುಸ್ತಿಯಾಟವನ್ನಾದರೂ ನೋಡಲು ತಪ್ಪುತ್ತಿತ್ತು. ಮೊದಲಿಂಥಲ್ಲಿ ಮೂರುವರೆ ವರ್ಷ ಕಳೆಯುವುದು ಹೇಗೆ ? ಯಕ್ಷ ಪ್ರಶ್ನೆಯಾಗಿತ್ತು. ಮೊದಲಿನಿಂದಲೂ ನನ್ನ ಸ್ವಭಾವ ತುಂಬಾ ಮೃದು ಮತ್ತು ಸೂಕ್ಷ್ಮ. ಮನೆಯಲ್ಲಿ ಸಹೋದರ ಒಂದು ಇರುವೆ, ಗೊದ್ದ ಹಿಸುಕಿದರೂ ನಾನು 'ಬೇಡವೋ' ಎಂದು ಅಳುತ್ತಿದ್ದವಳು. ನನ್ನನ್ನು ಅಳಿಸಲೆಂದೇ ಅವನೂ ಇರುವೆ, ಗೊದ್ದಗಳನ್ನು ಹಿಸುಕುತ್ತಿದ್ದ.

ಒಮ್ಮೆ ಹಳ್ಳಿಗೆ ಹೋಗಿದ್ದೆವು. ಒಂಭತ್ತು ಹತ್ತು ವಯಸ್ಸು. ನಾಲ್ಕು ಮೈಲಿ ಮೇಲಿದ್ದ ಗದ್ದೆಗೆ ಹೋಗಿದ್ದೆವು. ಎತ್ತಿನ ಗಾಡಿ ಮೇಲೆ. ಆಂದ. ಭತ್ತದ ಕುಯ್ಲು. ಪಟ್ಟಣಿಗರಾಗಿ ಬೆಳೆದಿದ್ದ ನಮಗೆ ಆ ದೃಶ್ಯ ರೋಮಾಂಚಕಾರಿ. ಹಳ್ಳಿ ಹೆಂಗಸರು ಕಚ್ಚೆ ಕಟ್ಟಿ, ಹಾಡು ಹೇಳುತ್ತಾ ಭತ್ತ ಕೊಯ್ಯುವುದು ಚೇತೋಹಾರಿ. ಬೆರಗಾಗಿ ನೋಡುತ್ತಿದ್ದೆವು. ನಂತರ ಪೆಂಟಿಗಳನ್ನು ಗಾಡಿಗೆ ಹೇರಿದರು. ನಾವೆಲ್ಲ ಕುಳಿತೆವು. ಎತ್ತುಗಳು ಎಳೆಯ ತೊಡಗಿದವು. ಆದರೆ ಭಾರ ಬಹಳವಾಗಿತ್ತು. ಎತ್ತುಗಳು ದಣಿದು, ಬಾಯಿ ನೊರೆ ಸುರಿಸುತ್ತ ಕಷ್ಟಪಟ್ಟು ಜಗ್ಗುತ್ತಿದ್ದವು. ಆಳು ಗಂಗಣ್ಣ ಸಿಟ್ಟು ಬಂದು ಬಾಲ ಮುರಿದು ಹೊಡೆದ ಅವಕ್ಕೆ. ನನಗೆ ತುಂಬಾ ಸಂಕಟವಾಯಿತು. "ಹೊಡೀಬೇಡ, ಪಾಪ ಬರುತ್ತೆ" ಎಂದೆ.

"ಇಲ್ಲದಿದ್ದರೆ ಈ ಹಠಮಾರಿಗಳು ಮಾತು ಕೇಳವು ...." ಎಂದು ಬಾರುಕೋಲು ಬೀಸಿದ. ಭೂಮಿಯ ಮರೆಯಲ್ಲಿ ಕುದಿದು, ಲಾವಾರಸ ಉಕ್ಕಿ ಹರಿವಂತೆ ನನ್ನ ಹೃದಯ ಒದ್ದಾಡಿ ಕಣ್ಣೀರು ಧಾರೆಯಾಗಿ ಸುರಿದವು. ಉಸಿರುಕಟ್ಟಿ ಬಿಕ್ಕಿಬಿಕ್ಕಿ ಅಳುತ್ತಾ ನಾನು, "ಹೊಡೀಬೇಡ, ಇಷ್ಟು ಭಾರ ಹೇರಿ ಹೊಡೀತೀಯಾ ? ನಾನು ಇಳೀತೀನಿ" ಎಂದು ಹಠ ಮಾಡಿ ಇಳಿದೇ ಬಿಟ್ಟೆ. 'ನಡೀತಾ ಬರ್ತೀನಿ' ಎಂದು ಅಚಲವಾಗಿ ನಿಂತೆ. ಹತ್ತು ವರ್ಷದ ನನ್ನನ್ನು ಬಿಟ್ಟು ಅಜ್ಜಿ, ತಾಯಿ ಉಳಿದವರು ಮುಂದೆ ಹೋದಾರೇ ? ಅವರೂ ಇಳಿದರು. ಸರಿ ಮೂರು ಮೈಲಿ ದೂರವನ್ನು ಕೂಲಿ

ಆಳುಗಳ ಜೊತೆಗೆ ರಾತ್ರಿ ಎಂಟರವರೆಗೆ ನಡೆದೆವು. ನಮ್ಮೆಲ್ಲರ ಭಾರ ಇಳಿಸ್ತು ಎತ್ತುಗಳು ಸರಾಗವಾಗಿ ಓಡಿದಾಗ, ನನ್ನ ದುಃಖದ ಕಣ್ಣೀರು ಹರ್ಷಜಲವಾಗಿ ಪರಿವರ್ತನೆಗೊಂಡವು. ಕೂಲಿ ಆಳೊಬ್ಬಳು "ಅವ್ವಾ. ರಾಜಕುಮಾರಿ ಅಂಥಾಕೆ : ಹೆಂಗೆ ನಡೀತೀಯವ್ವಾ, ಬಾ ಹೊತ್ಕೋತೀನಿ" ಎಂದು ಎತ್ತಿಕೊಳ್ಳಲು ಬಂದಳು. "ಬೇಡ, ನೀನು ಬೆಳಿಗ್ಗೆಯಿಂದ ದುಡಿದಿದ್ದೀಯ. ನನ್ನ ಭಾರ ನಿನ್ನ ಮೇಲೆ ಹಾಕಲ್ಲ. ನೀನೂ ಮನುಷ್ಯಳಲ್ಲವೆ ?" ನಿರಾಕರಿಸಿ ನಡೆದೆ. ಕಾಲು ನೋಯುತ್ತಿದ್ದರೂ ಮನಸ್ಸು ಸಂತೋಷ ತಾಳಿತ್ತು.

ಇಷ್ಟೊಂದು ಸೂಕ್ಷ್ಮ ಪ್ರವೃತ್ತಿಯ ನನಗೆ ಅಂಥಾ ಮೆಸ್ಸುಗಳಲ್ಲಿ ಹೋಗಿ ಕುಳಿತುಕೊಳ್ಳುವುದು ದುಃಸಾಧ್ಯವಷ್ಟೇ. "ಮಧ್ಯಾಹ್ನದ ಭೋಜನಕ್ಕೆ ಇಲ್ಲೇ ಬರಬೇಕೇಕೆ ?" ಡಾ|| ಗಾಂಬ್ರಿಚರನ್ನು ಕೇಳಿದ್ದೆ. "ಸಾಮಾನ್ಯವಾಗಿ ಆಕ್ಸ್‌ಫರ್ಡಿನ ಸುಪ್ರಸಿದ್ಧ ವಿದ್ವಾಂಸರು, ಪ್ರಾಧ್ಯಾಪಕರು ಇಲ್ಲಿಗೆ ಬಂದೇ ಬರುತ್ತಾರೆ. ಅವರನ್ನು ಹೊರಗಡೆ ಕಾಣುವುದೇ ದುರ್ಲಭ. ಅಂಥವರ ಪರಿಚಯ ಮಾಡಿಕೋಬಹುದು, ಸಂಭಾಷಿಸಬಹುದು. ಏನಾದರೂ ಅಧ್ಯಯನದ ಬಗ್ಗೆ ವಿವರ ಬೇಕಾದಲ್ಲಿ ಅವರು ಊಟಮಾಡುವಾಗಲೇ ಚರ್ಚಿಸಿ ಪಡೆದುಕೊಳ್ಳಬಹುದು. ಇದೊಂದು ಸುವರ್ಣಾವಕಾಶವೆಂದು ಆಕ್ಸ್‌ಫರ್ಡ್ ವಿದ್ಯಾರ್ಥಿಗಳು ತಿಳಿಯುತ್ತಾರೆ." ಹೀಗೆ ಹೇಳಿದ ಗಾಂಬ್ರಿಚರು ಮೆಲ್ಲನೆ ದೂರದ ಟೇಬಲಿನಲ್ಲಿ ಕುಳಿತಿದ್ದ ಓರ್ವರನ್ನು ಕುರಿತು (ನನಗೆ ಹೆಸರು ಮರೆತಿದೆ) ಹೇಳಿದರು : "ಅವರು ಹೊರಗೆ ಕಾಣಿಸಿಕೊಳ್ಳುವುದೇ ದುರ್ಲಭ. ಸಂದರ್ಶನ ಸಹ ಕೊಡರು. ಒಂದೊಂದು ದಿನ ಮೆಸ್ಸಿಗೆ ಬಂದಾಗ ವಿದ್ಯಾರ್ಥಿಗಳು ಅವರನ್ನು ಟ್ರ್ಯಾಪ್ ಮಾಡುತ್ತಾರೆ..." ನಾನು ಅತ್ತ ನೋಡಿದೆ. ಕೆದರಿದ ತಲೆ, ಚಿಂತನಶೀಲತೆಯಿಂದ ಫಳಫಳ ಮಿನುಗುವ ಕಣ್ಣುಗಳು. ಊಟವನ್ನೂ ಮರೆತು ಚರ್ಚಿಸುವ ತಲ್ಲೀನತೆ, ಅಸ್ತವ್ಯಸ್ತ ಬಟ್ಟೆಬರೆ. ಗಾಂಬ್ರಿಚರು ಪರಿಚಯ ಮಾಡಿಕೊಡದೆ, ಒಮ್ಮೆಗೇ ದಾರಿಯಲ್ಲಿ ನಾನೇನಾದರೂ ಕಂಡಿದ್ದರೆ ಹುಚ್ಚಾಸ್ಪತ್ರೆಯಿಂದ ವಾಸಿಯಾಗುವ ಮುನ್ನವೇ ತಪ್ಪಿಸಿಕೊಂಡು ಬಂದ ಮನೋರೋಗಿ ಎಂದುಕೊಳ್ಳುತ್ತಿದ್ದನೇನೋ ! ಮಸಿಬಟ್ಟೆಯಲ್ಲಿ ಕಟ್ಟಿದ ಮಾಣಿಕ್ಯದಂತೆ ಕಾಣುತ್ತಿದ್ದರು. ಬಟ್ಟೆ-ಬರೆಗೆ ಏನೇನೂ ಮಹತ್ವ ಕೊಟ್ಟಿರಲಿಲ್ಲ.

ನಮ್ಮಲ್ಲಾದರೆ ಲೆಕ್ಚರರ್ ಕೆಲಸ ಸಿಕ್ಕ ತಕ್ಷಣ ಮೊದಲ ಅವಶ್ಯಕತೆ "ಟ್ರೈ-ಸೂಟು." ಒಂದು ನಗೆ ಹನಿ ನೆನಪಾಗುತ್ತಿದೆ. ಹೊಸದಾಗಿ ಶಾಲೆಗೆ ಸೇರಿದ ಪುಟ್ಟಾಣಿಯೊಂದು ಹೇಳಿತಂತೆ : "ಅಪ್ಪಾ, ನಾನು ಶಾಲೆಗೆ ಹೋಗಬೇಕು. ಅದಕ್ಕೆ ಯೂನಿಫಾರಂ, ಸಾಕ್ಸ್, ಟೈ, ಬ್ಯಾಗ್, ಟಿಫಿನ್ ಬಾಕ್ಸ್ ಅಂದ್ಹಾಗೆ ಮರೆತಿದ್ದೆ - ಪುಸ್ತಕಗಳೂ ಬೇಕು." ಹಾಗೇ, ಚೆನ್ನಾಗಿ ಅಭ್ಯಸಿಸಿ, ನೋಟ್ಸ್ ಮಾಡಿಕೊಂಡು ತರಗತಿಗಳಿಗೆ

ಹೋಗಬೇಕು ಎಂಬ ತರುಣ ಲೆಕ್ಚರರುಗಳ ಸಂಖ್ಯೆಗಿಂತಲೂ ಸೂಟು, ಬೂಟು, ಟೈ- ಇವುಗಳ ಕಡೆಗೆ ಆಸಕ್ತಿ ವಹಿಸುವವರೇ ಹೆಚ್ಚು. ಬಹಿರಂಗದ ಟ್ರಿಮ್ಮಿನಿಂದಲೇ ವಿದ್ಯಾರ್ಥಿವೃಂದವನ್ನು ಆಕರ್ಷಿಸುವದು ಸಾಧ್ಯವೆ ? 'ಒಳ್ಳಿಹ ಮೈಲಾರನ ಒಳಗೆಲ್ಲ ಸೆಣಬು' ಎಂಬಂತೆ, ಒಳಗೆ ಪೊಳ್ಳಾಗಿ ಹೊರಗೆ ಬಣ್ಣವಾಗಿ ಕಾಣುವದೇ ಗುರಿಯಾದರೆ ಸಾಧಿಸಿದ ಸಾಫಲ್ಯವೇನು ?

ಅಲ್ಲದೇ ಜಂಗಮದೀಕ್ಷೆ (ಸನ್ಯಾಸ) ಪಡೆದಾನಂತರ ಹೆಚ್ಚಿನ ನಿಯಮಗಳಿಗೆ ಒಳಗಾದ ನಮ್ಮಂಥವರಿಗೆ ಅಲ್ಲೆಲ್ಲ ಉಣ್ಣುವುದಾಗಲೀ, ಏನೇನೋ ಉಣ್ಣುವುದನ್ನು ನೋಡುವುದಾಗಲೀ ಕಷ್ಟಸಾಧ್ಯವಷ್ಟೆ. ವಿದ್ಯಾರ್ಥಿನಿಲಯದ ಕೊಠಡಿ ಬಿಟ್ಟು ಬೇರೆಡೆ ಇರುವಂತಿಲ್ಲ. ಅಲ್ಲಿ ಸ್ವಯಂ ಪಾಕಕ್ಕೆ ಅವಕಾಶವಿಲ್ಲ. ಹೀಗಾದರೆ ಅಭ್ಯಾಸ ಹೇಗಾದೀತು ? ಈ ಬಗ್ಗೆ ಚಿಂತನೆಗೈಯುತ್ತಲೇ ತಾಯ್ನಾಡಿಗೆ ಪತ್ರ ಬರೆದೆ. ಮತ್ತು ಲಂಡನ್ ವಾಸಿ ಭಾರತೀಯ ಕೆಲವು ಹಿತೈಷಿಗಳನ್ನು ಸಲಹೆ ಕೇಳುವ ನಿರ್ಧಾರ ಮಾಡಿದೆ.

(ಸಶೇಷ)

ವಧುವರಾನ್ವೇಷಣ ವಿಭಾಗ

ಮಾನ್ಯ ಬಂಧುಗಳೇ.

ಹಿಂದಿನ ಸಂಚಿಕೆಯಲ್ಲಿ ತಿಳಿಸಿದ್ದಕ್ಕೆ ಪ್ರತಿಕ್ರಿಯೆಯಾಗಿ ಅನೇಕರು ತಮ್ಮ ವಧು-ವರಾನ್ವೇಷಣ ವಿಭಾಗದಲ್ಲಿ ಹೆಸರು ನೀಡಿ ಪ್ರಚುರ ಪಡಿಸಲು ಮುಂದೆ ಬಂದಿದ್ದಾರೆ.

"ಮದುವೆ" ಅನ್ನುವುದು ಒಂದು ಸಾಮಾಜಿಕ ನೀತಿಗೆ ಸಂಬಂಧಿಸಿದ ಶಾಸನ. ಅದು ಬಹು ಪಾಲು ಜನರ ಅನಿವಾರ್ಯ ಪ್ರಸಂಗ. ಅನ್ನ-ಅರಿವೆಗಳಷ್ಟೇ ಅವಶ್ಯಕ. ಇಂಥದನ್ನು ಸರಳವಾಗಿ ಮತ್ತು ಆದರ್ಶ ಪೂರ್ಣವಾಗಿ ನೆರವೇರಿಸಿ ಹೆತ್ತವರಿಗೆ ಹೊರೆಯಾಗದೆ, ಎಲ್ಲರಿಗೂ ಹಿತವಾಗುವಂತೆ ಮಾಡಲು ಸಮಾಜದಲ್ಲಿ ವಿಚಾರಪರಿವರ್ತನೆ ಆಗಬೇಕು.

ಕಾರಣಾಂತರಗಳಿಂದ ಚದುರಿ ಹೋಗುತ್ತಿರುವ ಸಮಾಜದಲ್ಲಿ, ಜಾತಿ, ವರ್ಣ, ವರ್ಗ ಭೇದಗಳು ಅನಿವಾರ್ಯ ಅಂಗವಾಗಿ ಇರುವ ಈ ಹೊತ್ತು ಸಮಾಜದಲ್ಲಿ ಪರಸ್ಪರರನ್ನು ಪರಿಚಯಿಸುವ ಕಾರ್ಯ ನಡೆಯಬೇಕು. ಅದಕ್ಕಾಗಿ ಈ ವಿಭಾಗ ತೆರೆಯಲ್ಪಟ್ಟಿದೆ.

[ತಾಯಿ-ತಂದೆಗಳು ಮತ್ತು ಪಾಲಕರು ಸಹಕರಿಸಿದರೆ ಮುಂಬರುವ ವರ್ಷಗಳಲ್ಲಿ ಒಂದು "ಮೇಳ"ವನ್ನೂ ಮಾಡಿ, ವಧೂವರರ ವೀಕ್ಷಣೆಗೆ ಅನುಕೂಲ ಮಾಡಿಕೊಡಲಾಗುವುದು. ಅದರಿಂದ ಓಡಾಟದ ಪ್ರಯಾಸ ತಪ್ಪುವುದು, ಖರ್ಚು ಮಿಗುವುದು]

ಇವಕ್ಕಾಗಿ ನೀವು ಮಾಡಬೇಕಾದುದಿಷ್ಟು :

1. ವರಬೇಕೋ ಕನ್ಯಾಬೇಕೋ ?
2. ನಿಮ್ಮವರ/ಕನ್ಯೆಯ ಅರ್ಹತೆ ಏನು ? ನೀವು ನಿರೀಕ್ಷಿಸುವ ಗುಣಮಟ್ಟ ವೇನು
3. ವರ/ಕನ್ಯೆಯ ವಯಸ್ಸು, ಶಿಕ್ಷಣ.
4. ಹುಟ್ಟಿದ ಜಾತಿ, ಧರ್ಮ, ನಿಮಗೆ ಬೇಕಾಗಿರುವ ಜಾತಿ, ಧರ್ಮದ ವ್ಯಕ್ತಿ (ಅಂತರ್ಜಾತೀಯ ವಿವಾಹದ ಅಪೇಕ್ಷೆ ಇದ್ದರೆ ಅದನ್ನೂ ನೇರವಾಗಿ ಬರೆಯಿರಿ.
5. ಸಾಧ್ಯವಿದ್ದರೆ ತಂದೆಯ ವೃತ್ತಿ ವಿವರ.
6. ಎತ್ತರ ದೇಹದಾರ್ಢ್ಯತೆ, ಬಣ್ಣ, ರೂಪಗಳ ವಿವರ.
7. ಇನ್ನೇನಾದರೂ ವಿಶೇಷವಾಗಿ ತಿಳಿಸುವುದಿದ್ದರೆ.

ಈ ವಿಷಯಗಳನ್ನು ಇನ್‌ಲ್ಯಾಂಡ್. ಅಥವಾ ಕವರ್‌ನಲ್ಲಿಟ್ಟು ವಿಳಾಸ ಬರೆದು ಕಳಿಸಿ. ಕಲ್ಯಾಣ ಕಿರಣದಲ್ಲಿ ಪ್ರಕಟಿಸಲಾಗುವುದು. ಪ್ರಕಟಣಾ ವೆಚ್ಚ ರೂ ೧೦ (ಹತ್ತು) ಒಂದು ಪ್ರಕಟಣೆಗೆ, (ಸತತ ಪ್ರಕಟಣೆಗೆ ರಿಯಾಯಿತಿ ಇದೆ). ಇವರು ತಮ್ಮ ವಿಳಾಸ ಮತ್ತು ಪೂರ್ತಿ ವಿವರ ಮುದ್ರಿಸಬೇಕು. ಅಪೇಕ್ಷೆಯುಳ್ಳವರು ನೇರ ವಾಗಿ ನಿಮ್ಮೊಡನೆ ವ್ಯವಹರಿಸುವರು. ಹೆಸರು, ವಿಳಾಸ ಕಾಣಿಸಲು ಇಚ್ಛಿಸದವರು, c/o ಕಲ್ಯಾಣ ಕಿರಣ ವಿಳಾಸ ಕೊಡಲು ಬಯಸುವರು ೨೦ರೂಗಳನ್ನು ಕಳಿಸಬೇಕು. ಕಾರ್ಯಾಲಯದವರೇ ವ್ಯವಹರಿಸಿ ವಿವರಗಳನ್ನು ತಿಳಿಸುವರು.

ವಿಶೇಷ ಸೂಚನೆಗಳು.

1. ಎಲ್ಲ ಜಾತಿ, ಮತ, ಪಂಥ, ಧರ್ಮಗಳವರು ಈ ರೀತಿ ಪ್ರಕಟಣೆ ಕೊಟ್ಟು ಸದುಪಯೋಗ ಪಡೆಯಬಹುದು.
2. ತಮ್ಮ ವರ/ಕನ್ಯೆಯ ಭಾವ ಚಿತ್ರ ಕೊಡಬಯಸುವವರು ಬ್ಲಾಕ್ ಮೇಕಿಂಗ್ ಮತ್ತು ಅದರ ಪ್ರಕಟಣಾ ವೆಚ್ಚ ಕೊಡಬಹುದು.
3. ನಿಗದಿಯಾದ ಶುಲ್ಕವನ್ನು ಮನಿಯಾರ್ಡರ್, ಡ್ರಾಫ್ಟ್, ಪೋಸ್ಟಲ್ ಆರ್ಡರ್, ಚೆಕ್ (ಚೆಕ್ಕು ಕೊಡುವವರು ೫೦ ಪೈಸೆ ಜಾಸ್ತಿ ಕಳಿಸಬೇಕು) ಮೂಲಕ ಕಳಿಸಬೇಕು. ನಿಗದಿಯಾದ ಶುಲ್ಕ ಸಲ್ಲಿಸದಿದ್ದರೆ ಪ್ರಕಟಿಸಲಾಗುವುದಿಲ್ಲ.
4. ವಿವರಗಳನ್ನು ಸರಿಯಾಗಿ ಒದಗಿಸಬೇಕು. ನಂತರ ಉಭಯತರಿಗೂ ವಿಳಾಸ ನೀಡಿ ಸಂಪರ್ಕ ಕಲ್ಪಿಸಿದ ಮೇಲೆ ತಮ್ಮ ತಮ್ಮಲ್ಲೇ ವ್ಯವಹಾರ ಮಾಡಬೇಕು.
5. ವಿಳಾಸ ಸಹಿತ ಕೊಟ್ಟ ಪ್ರಕಟಣೆದಾರರೊಡನೆ ನೇರವಾಗಿ ತಾವೇ ವ್ಯವಹರಿಸಿ.

6. ಪ್ರಕಟಣೆ ನೋಡಿ c/o ಕಲ್ಯಾಣ ಕಿರಣಕ್ಕೆ ಬರೆದು ವಿವರ ಪಡೆಯಬಯಸುವ ವರು ೫ ರೂಪಾಯಿ ಶುಲ್ಕವನ್ನು ಕೊಡಬೇಕು

ಕಾರ್ಯದರ್ಶಿ
ಷಡಕ್ಷರಸ್ವಾಮಿ

ವ್ಯವಹರಿಸುವ ವಿಳಾಸ

ದೂರವಾಣಿ
8 2 3 3 5

ವಧು-ವರಾನ್ವೇಷಣ ವಿಭಾಗ
ಕಲ್ಯಾಣ ಕಿರಣ ಮಾಸಪತ್ರಿಕೆ
ಬಸವ ಮಂಟಪ, ೨೪
ಎರಡನೆ ಬ್ಲಾಕು, ಕಾರ್ಡ್ ರಸ್ತೆ
ರಾಜಾಜಿನಗರ. ಬೆಂಗಳೂರು-೫೬೦೦೧೦

ವರಬೇಕಾಗಿದೆ

ವ. ವ. ವಿ. ಸಂ. 1. ಹೆಸರು : ಸುಶೀಲ

ವಯಸ್ಸು : 22 ವರ್ಷ; ಎತ್ತರ : 5 ಅಡಿ 2 ಇಂಚು ಆರೋಗ್ಯ : ಉತ್ತಮ ; ವಿದ್ಯೆ : ಬಿ.ಎ. ಎರಡನೆ ವರ್ಷ ; ಹುಟ್ಟಿದ ಧರ್ಮ : ಲಿಂಗಾಯತ ; ಜಾತಿ : ಅಯ್ಯನವರು.

ವರನ ಅರ್ಹತೆ : ಕನಿಷ್ಠ ಪದವೀಧರ ಮತ್ತು ಉದ್ಯೋಗಸ್ಥನಾಗಿರಬೇಕು. ಲಿಂಗಾಯತರಲ್ಲಿ ಯಾವುದೇ ಜಾತಿಯಾದರೂ ಪರವಾಗಿಲ್ಲ. ತಂದೆಯ ವೃತ್ತಿ : ಮುಂಬಯಿಯಲ್ಲಿ ರಕ್ಷಣಾ ಶಾಖೆಯಲ್ಲಿದ್ದಾರೆ. ವ್ಯವಹರಿಸುವ ವಿಳಾಸ : c/o ಕಲ್ಯಾಣ ಕಿರಣ.

ವ. ವ. ವಿ. ಸಂ. 2. ಹೆಸರು : ಕುಮಾರಿ ಕಪ್ಪರದ

ವಯಸ್ಸು : 18, ಜನನ 9-12-60, ಎತ್ತರ : 5 ಅಡಿ 1 ಇಂಚು, ಆರೋಗ್ಯ : ಉತ್ತಮ, ಅತ್ಯಂತ ಸುಲಕ್ಷಣ, ಉತ್ತಮ ಬಣ್ಣ ; ವಿದ್ಯೆ : ಎಸ್. ಎಸ್. ಎಲ್. ಸಿ.: ಲಿಂಗಾಯತ ಧರ್ಮ, ಪಂಚಮಸಾಲಿ.

ವರನ ಅರ್ಹತೆ : ಲಕ್ಷಣವಂತ ಉದ್ಯೋಗಿ, ವ್ಯಾಪಾರಿ ಅಥವಾ ಉದ್ಯಮಿ. ಲಿಂಗಾಯತರಲ್ಲಿ ಯಾವುದೇ ಜಾತಿ ಇರಬಹುದು ; ತಂದೆಯ ವೃತ್ತಿ : ಹೆಡ್ ಮಾಸ್ಟರ್, ಸ್ವತಂತ್ರವಾದ ಶಾಲೆ ನಡೆಸುತ್ತಿದ್ದಾರೆ. ವ್ಯವಹರಿಸುವ ವಿಳಾಸ : ಜಿ. ಎಮ್. ಕಪ್ಪರದ, ಶ್ರೀ ಅಕ್ಕಮಹಾದೇವಿ ಹೆಣ್ಣು ಮಕ್ಕಳ ಪ್ರೌಢಶಾಲೆ, ಅಗಸರ ಓಣಿ, ಹುಬ್ಬಳ್ಳಿ.

ವ. ವ. ವಿ. ಸಂ. 3

ವಯಸ್ಸು : 22 : ಎತ್ತರ : 5 ಅಡಿ : ವಿದ್ಯೆ : ಎಸ್. ಎಸ್. ಎಲ್. ಸಿ. ; ಧರ್ಮ ಮತ್ತು ಜಾತಿ : ವೀರಶೈವ ಗೌಡ ಮನೆತನ.

ವರನ ಅರ್ಹತೆ: ವರ ನೌಕರಿ ಅಥವಾ ವ್ಯಾಪಾರಸ್ಥನಾಗಿದ್ದರೆ ಸಾಕು (ಅಥವಾ ಲ್ಯಾಂಡ್ ಲಾರ್ಡ್).

ಇತರೆ : ವಿವಾಹವನ್ನು ಶರಣ (ಸರಳ) ಸಂಪ್ರದಾಯದ ಪ್ರಕಾರ ಮಾಡಲಾಗುವುದು.

ವ್ಯವಹರಿಸುವ ವಿಳಾಸ : 132, 4th Cross, Hanumantha Nagar, Bangalore-560 019.

ವ. ವ. ವಿ. ಸಂ. 4

ವಯಸ್ಸು : 17 ; ಎತ್ತರ : 5 ಅಡಿ 2 ಇಂಚು : ವಿದ್ಯೆ : 9th std. ಧರ್ಮ ಮತ್ತು ಜಾತಿ : ವೀರಶೈವ ಗೌಡ ಮನೆತನ.

ವರನ ಅರ್ಹತೆ : ನೌಕರ ಅಥವಾ ವ್ಯಾಪರಸ್ಥರಾಗಿದ್ದರೆ ಸಾಕು ಅಥವಾ ಲ್ಯಾಂಡ್ ಲಾರ್ಡ್.

ಇತರೆ : ವಿವಾಹವನ್ನು ಶರಣ (ಸರಳ) ಸಂಪ್ರದಾಯದ ಪ್ರಕಾರ ಮಾಡಲಾಗುವುದು.

ವ್ಯವಹರಿಸುವ ವಿಳಾಸ : 132, 4ನೇ ಕ್ರಾಸ್, ಹನುಮಂತ ನಗರ ಬೆಂಗಳೂರು-560 019.

ವ. ವ. ವಿ. ಸಂ. 5

ವಯಸ್ಸು : 25, ಜನನ : 29-11-53. ಎತ್ತರ : 5 ಅಡಿ 2 ಅಂಗುಲ ; ರೂಪ : ಸ್ಥೂಲವಲ್ಲದ ಅಥವಾ ಕೃಶಾಂಗಿಯೂ ಅಲ್ಲದ ಶರೀರ. ನಸುಗೆಂಪು ಬಣ್ಣದ ಸುಂದರಿ. ವಿದ್ಯೆ : ಬಿ.ಎಸ್ಸಿ. (ಆನರ್ಸ್) ಸಸ್ಯಶಾಸ್ತ್ರ. ಧರ್ಮ-ಜಾತಿ : ಲಿಂಗಾಯತ ಧರ್ಮ (ಪಾಕನಾಟಿ ರಡ್ಡಿ).

ತಂದೆಯು ಪ್ರಸ್ತುತ ಒಂದು ಸಿನಿಮಾ ವಿತರಣಾ ಸಂಸ್ಥೆಯಲ್ಲಿ 'ಮ್ಯಾನೇಜರ್' ಹುದ್ದೆಯಲ್ಲಿ ಕೆಲಸ ಮಾಡುತ್ತಿದ್ದಾರೆ.

ವರನ ಅರ್ಹತೆ: ಸುಸಂಸ್ಕೃತ ಕುಟುಂಬಕ್ಕೆ ಸೇರಿದ, ಲಿಂಗಾಯತ ಧರ್ಮದವನಾಗಿರಬೇಕು (ಯಾವುದೇ ಒಳಪಂಗಡವಿರಬಹುದು). ಎಂ. ಬಿ. ಬಿ. ಎಸ್. ಆಗಿ ಡಾಕ್ಟರಾಗಿರಬೇಕು ಅಥವಾ ಇಂಜಿನಿಯರಿಂಗ್ ಗ್ರ್ಯಾಜುಯೇಟ್ ಅಥವಾ ಪೋಸ್ಟ್ ಗ್ರ್ಯಾಜುಯೇಟ್ ಆಗಿ ಒಳ್ಳೆಯ ಉದ್ಯೋಗದಲ್ಲಿರಬೇಕು.

ಇತರೆ : 1) ಕನ್ಯೆ ಸುರಕ್ಷಿತ ಮನೆತನಕ್ಕೆ ಸೇರಿದ್ದು ಆಕೆಯ ಸೋದರ ವಿದೇಶದಲ್ಲಿ (USA) ಡಾಕ್ಟರ್ ಆಗಿ ಕೆಲಸದಲ್ಲಿದ್ದಾರೆ. ಇನ್ನೂ ಇಬ್ಬರು ಇಂಜನಿಯರ್ ಆಗಿ ಇಲ್ಲಿಯೇ ಕೆಲಸ ಮಾಡುತ್ತಿದ್ದಾರೆ.

2) c/o ಕಲ್ಯಾಣ ಕಿರಣದ ಮೂಲಕ ವ್ಯವಹರಿಸಬೇಕು.

ಕಲ್ಯಾಣ ಕಿರಣ

ಮಾಸಪತ್ರಿಕೆ

ಸಂಸ್ಕೃತಿ, ಸಾಹಿತ್ಯ, ನೀತಿ, ಅಧ್ಯಾತ್ಮ ಮೌಲ್ಯಗಳ ಪ್ರಸಾರಕ್ಕೆ ಮೀಸಲಾದ ಪತ್ರಿಕೆ

ಪ್ರಧಾನ ಸಂಪಾದಕರು :

ಪೂಜ್ಯ ಶ್ರೀ
ಜಗದ್ಗುರು ಮಾತೆ ಮಹಾದೇವಿ.

ಪ್ರಕಾಶಕರು :

ಜಗನ್ಮಾತಾ ಅಕ್ಕಮಹಾದೇವಿ ಆಶ್ರಮದ ಪರವಾಗಿ ವಿಶ್ವಕಲ್ಯಾಣ ಮಿಷನ್ ಸಂಸ್ಥೆಯು ಪ್ರಕಾಶನ ಪಡಿಸುವುದು.

ಕೇಂದ್ರ ಕಾರ್ಯಾಲಯ :

ಕಲ್ಯಾಣ ಕಿರಣ ಮಾಸಪತ್ರಿಕೆ
ಬಸವ ಮಂಟಪ, ನಂ. ೨೪, ಎರಡನೇ ವಿಭಾಗ, ಕಾರ್ಡ್‌ರೋಡ್, ರಾಜಾಜಿನಗರ
ಬೆಂಗಳೂರು-೫೬೦೦೧೦

ಕಲೆ :


ಬಿ. ಪಿ. ಕೃಷ್ಣಯ್ಯ
ಮುದ್ರಣ: ಶ್ರೀ ಸುಬ್ರಮಣ್ಯ ಪ್ರಿಂಟರ್ಸ್
ಬೆಂಗಳೂರು-೪೦

ಚಂದಾ ವಿವರ

ಬಿಡಿ ಸಂಚಿಕೆ :	ರೂ.	೧-೦೦
ವಾರ್ಷಿಕ :	ರೂ.	೧೨-೦೦
ದ್ವೈವಾರ್ಷಿಕ :	ರೂ.	೨೩-೦೦
ಆಜೀವ ಸದಸ್ಯತ್ವ :	ರೂ.	೧೫೧-೦೦
ಪೋಷಕರು :	ರೂ.	೫೦೧-೦೦
ಮಹಾಪೋಷಕರು :	ರೂ.	೧೦೦೧-೦೦

* ಪತ್ರಿಕೆಯು ಪ್ರತಿ ತಿಂಗಳ ದಿನಾಂಕ ಒಂದರಂದು ಪ್ರಕಟವಾಗುವುದು.
* ಲೇಖಕರು ಲೇಖನಗಳನ್ನು ೧೦ನೇ ದಿನಾಂಕದೊಳಗೆ ಕಳಿಸಬೇಕು.

* ಪತ್ರಿಕೆಯ ಉದ್ದೇಶವಾದ ಧಾರ್ಮಿಕ, ಸಾಂಸ್ಕೃತಿಕ ಎಲ್ಲಾ ಬಗೆಯ ತಾತ್ತ್ವಿಕ ವಿಚಾರಗಳ ಲೇಖನ, ಕಥೆ, ಕವನಗಳಿಗೆ ಸ್ವಾಗತವಿದೆ.
* ಲೇಖನಗಳನ್ನು ಕಾಗದದ ಒಂದು ಮಗ್ಗುಲಿಗೆ ಸ್ಫುಟವಾಗಿ ಬರೆದಿರಬೇಕು.
* ಲೇಖಕರು ತಮ್ಮ ಹೆಸರು, ವಿಳಾಸಗಳನ್ನು ಸ್ಪಷ್ಟವಾಗಿ ತಿಳಿಸಬೇಕಲ್ಲದೆ ಅನುವಾದ, ರೂಪಾಂತರ ಅಥವಾ ಸಾಧಾರ ಲೇಖನಗಳಾದರೆ ಅದನ್ನು ಸ್ಪಷ್ಟವಾಗಿ ತಿಳಿಸಿ, ಮೂಲ ಲೇಖಕರ ಮತ್ತು ಪ್ರಕಾಶಕರ ಹೆಸರನ್ನು ಕಾಣಿಸಬೇಕು.
* ಅಸ್ವೀಕೃತ ಲೇಖನ ಬೇಕಾಗಿದ್ದಲ್ಲಿ ಮರಳಿಸಲು ಬೇಕಾದ ಅಂಚೆವೆಚ್ಚಕ್ಕೆ ಅವಶ್ಯಕವಿರುವ ಸ್ಟಾಂಪುಗಳನ್ನು ಕಳಿಸಬೇಕು. ಲೇಖನಗಳಲ್ಲಿ ಸೂಕ್ತಬದಲಾವಣೆ ಮಾಡಿಕೊಳ್ಳುವ ಅಧಿಕಾರ ಸಂಪಾದಕರಿಗಿದೆ.
* ಚಂದಾಹಣ ಕೊಡದೆ ಇದ್ದವರು ಪತ್ರಿಕೆಯು ತಲುಪಿದ ತಕ್ಷಣ ಕಳಿಸಬೇಕು.
* ಹೊಸ ಚಂದಾದಾರರು ೧೨-೦೦ (ಹನ್ನೆರಡು) ರೂಪಾಯಿ ಎಂ. ಓ. ಮಾಡಬೇಕು. (ವಿ. ಪಿ. ಇಲ್ಲ.)
* ಚಂದಾದಾರರು ಪತ್ರ ವ್ಯವಹಾರಗಳಲ್ಲಿ ವಿಳಾಸದ ಮೊದಲಲ್ಲಿ ಬರೆದ ಚಂದಾ ಸಂಖ್ಯೆಯನ್ನು ನಮೂದಿಸಬೇಕು.
* ವಿಳಾಸ ಬದಲಾವಣೆಗಳನ್ನು ತಿಳಿಸಬೇಕು. ಚಂದಾದಾರರಾದ ತಿಂಗಳಿಂದ ಮರುವರ್ಷದ ಆ ತಿಂಗಳವರೆಗೆ ಪತ್ರಿಕೆಗಳನ್ನು ಕಳಿಸಲಾಗುವುದು.



ದಿ. 9-8-1978 ರಂದು ಬಸವ ಮಂಟಪದಲ್ಲಿ ನಡೆದ ಶರಣ ಜಿ. ನಾರಾಯಣರ ಸತ್ಕಾರ ಸಮಾರಂಭ
ಮುಖ್ಯ ಅತಿಥಿಗಳು ರಾಜ್ಯದ ಆರೋಗ್ಯ ಸಚಿವ ಮಾರ್ಗದ ಮಲ್ಲಪ್ಪನವರು.

Correspond to :

BASAVA MANTAPA

No. 24, Chord Road, II Block, Rajajinagar

Bangalore-560010